ಹುಮನಾಬಾದ ತಾಲೂಕಿನ ಐತಿಹಾಸಿಕ ಸ್ಥಳಗಳು
ಒಂದು ಅಧ್ಯಯನ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಶೋಧನಾ ನಿಬಂಧ

ಚರಿತ್ರೆ ಅಧ್ಯಯನ ವಿಭಾಗ,
ಕನ್ನಡ ವಿಶ್ವ ವಿದ್ಯಾಲಯ, ಹಂಪಿ ವಿದ್ಯಾರಣ್ಯ-೫೮೩೨೭೬

೨೦೦೯

ಹುಮನಾಬಾದ ತಾಲೂಕಿನ ಐತಿಹಾಸಿಕ ಸ್ಥಳಗಳು ಒಂದು ಅಧ್ಯಯನ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂ: ಕಲ್ಯಾಣಪ್ಪ ಮಾಳಿಕೆಪ್ಪ

ಮಾ: [illegible] ಎಸ್.ಎಸ್.

ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಶೋಧನಾ ನಿಬಂಧ

ಚರಿತ್ರೆ ಅಧ್ಯಯನ ವಿಭಾಗ,
ಕನ್ನಡ ವಿಶ್ವ ವಿದ್ಯಾಲಯ, ಹಂಪಿ ವಿದ್ಯಾರಣ್ಯ–೫೮೩೨೭೬

೨೦೦೯

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪಿ

ಪ್ರಸ್ತಾವನೆ

ಕರ್ನಾಟಕದ ಸಂಸ್ಕೃತಿಗೆ ತನ್ನದೇ ಆದ ಕಾಣಿಕೆಯಿತ್ತಿರುವ ಬೀದರ ಜಿಲ್ಲೆ ಶರಣರ ಬಿಡು. ಜಗತ್ತೀಗೆ ಮೊದಲನೆಯ ಸಂಸತ್ತನ್ನು ಅನುಭವ ಮಂಟಪದ ರೂಪದಲ್ಲಿ ನೀಡಿರುವ ವಿಶಿಷ್ಟ ಕ್ಷೇತ್ರ ಅನೇಕ ಶತಮಾನಗಳ ಇತಿಹಾಸ ಪರಂಪರೆಯುಳ್ಳ ಈ ಭೂಮಿ ಕಲ್ಯಾಣ ನಾಡು ಎಂದೇ ಸುಪ್ರಸಿದ್ಧ ಕರ್ನಾಟಕದ ಉತ್ತರದ ತುದಿಯಲ್ಲಿರುವ ಇದು, ಕರ್ನಾಟಕದ ಕಾಶ್ಮೀರ ಹಾಗೂ ಕರ್ನಾಟಕದ ಮುಕುಟಮಣಿ ಎಂದು ಗುರುತಿಸಲ್ಪಟ್ಟಿದೇ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಹಿತ್ಯಕವಾಗಿ ಹಾಗೂ ಸಂಸ್ಕೃತಿಕವಾಗಿ ಮಹತ್ವ ಪಡೆದಿರುವ ಪ್ರದೇಶ ಇದಾಗಿದೆ ಶ್ರೇಷ್ಠವಾದ ನಾಗರಿಕತೆ ಮತ್ತು ಸಾಮರಸ್ಯ, ಸಂಸ್ಕೃತಿಯ ತಾಣಮಗಿರುವ ಈ ಜಿಲ್ಲೆ, ಇತಿಹಾಸ ಕಾಲದಿಂದಲೂ ಪ್ರಸಿದ್ದವಾಗಿದೆ.

ಶತ ಶತಮಾನವಗಳ ಐತಿಹ್ಯ ಹಾಗೂ ಇತಿಹಾಸ ಹೊಂದಿರುವ ಈ ಜಿಲ್ಲೆ ಶಿವಭಕ್ತರಿದ್ದ ನಾಡು, ಅಲ್ಲಾನ ನಮಾಜು ಮಾಡುವವರ ಬಿಡು, ಬುದ್ಧ, ಮಹಾವೀರ, ಬಸವ, ಗುರುನಾನಕ, ಬಕ್ಕಪ್ರಭು ಮಾಣಿಕ ಪ್ರಭು, ಕರಿಬಸವೇಶ್ವರ, ಯಂಕಮ್ಮ, ಮೋಳಿಗೆ ಮಾರಯ್ಯ, ವೀರಭದ್ರೇಶ್ವರ, ಸಿದ್ಧ ಪ್ರಬು, ಮೊದಲಾದ ಮಹಾನ್ ವ್ಯಕ್ತಿಗಳ ತತ್ವ ಸಿದ್ಧಾಂತಗಳನ್ನು ಪಾಲಿಸುತ್ತಿರುವವರ ಪ್ರದೇಶ. ಈ ಮೇಲೆ ನಮೂದಿಸಿದ ಎಲ್ಲ ದಿವ್ಯ ಮಣಿಗಳು ಬೀದರ ಜಿಲ್ಲೆಯ ಹೆಬ್ಬಾಗಿಲಂತಿರುವ ಹುಮನಾಬಾದ ತಾಲೂಕಿನ ಭವ್ಯ ನಾಡಿನಲ್ಲಿ ಬಾಳಿ ಬದುಕಿದವರು, ಜ್ಞಾನಜ್ಯೋತಿಗೆ ಭಕ್ತಿಯ ತೈಲವೆರೆದು ಕಲ್ಯಾಣದ ಪ್ರಣತೆಗೆ ಕ್ರಿಯೆಯ ಭಕ್ತಿಯಾಗಿರುವ ಈ ತಾಲ್ಲೂಕು ಉಜ್ವಲ ಧಾರ್ಮಿಕ ಪರಂಪರೆ ಹಾಗೂ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ.

ಹುಮನಾಬಾದ ತಾಲೂಕಿನ ಅನೇಕ ಐತಿಹಾಸಿಕ ಸ್ಥಳಗಳು ಅತ್ಯಂತ ವೈಭವದಿಂದ ಕೂಡಿವೆ, ಹುಮನಾಬಾದ ತಾಲೂಕಿನ ಇತಿಹಾಸ ಪರಂಪರೆ ಧಾರ್ಮಿಕ, ಸಂಸ್ಕೃತಿಕ, ಸಾಹಿತ್ಯಕ ಮತ್ತು ಕಲೆ ವಾಸ್ತುಶಿಲ್ಪದ ಇತ್ಯಾದಿ ಕುರಿತು ಮರೆಯಾದಂತಹ ವಿಷಯ ಘಟನೆಗಳು ಜನಪದರಿಂದ ತಿಳಿಯುತ್ತ ಮರೆಯಾದ ಘಟನೆ ಹುಡುಕುತ್ತಾ ಸತ್ಯ ಸಂಗತಿಯನ್ನು ಕಂಡು ಕೆಳ್ಳುತ್ತಾ. ಹುಮನಾಬಾದ ತಾಲೂಕಿನ ಐತಿಹಾಸಿಕ ಚಿತ್ರಣ ಚಿತ್ರೀಕರಿಸುತ್ತಾ ಈ ಅಧ್ಯಾಯನಕ್ಕೆ ತೊಡಗಿದ್ದೇನೆ.

ಹುಮನಾಬಾದ ತಾಲೂಕಿನ ಕುರಿತು ಎಷ್ಟೋ ವಿಷಯಗಳು ಬೆಳಕಿಗೆ ಬಾರದೆ ಇರಬಹುದು ಆದರೆ ಜನಪದರ, ಸ್ಥಳೀಯರ ಬಾಯಲ್ಲಿ ಇವುಗಳ ಹೆಸರು ಅಜರಾಮರವಾಗಿ ಉಳಿದಿದ್ದು ಕಂಡು ಬರುತ್ತವೇ, ಹಾಗೂ ಶಾಸನ, ಮಂದಿರ, ಮಸೀದೆ ಮತ್ತು ಸ್ಮಾರಕಗಳು ಸಾಕ್ಷಿಯಾಗಿವೆ ಹೀಗೆ ಎಲ್ಲವುಗಳನ್ನು ಸೇರಿಸಿ, ಚೌಕಟ್ಟನ್ನನು ನಿರ್ಮಿಸಿ ದಾಖಲೆಗೊಳ ಪಡಿಸುವುದೇ ಮುಖ್ಯವಾಗಿದೆ.

ಹುಮನಾಬಾದ ತಾಲೂಕ ನೋಡುತ್ತಾ ಹೋದಂತೆ ಹಲವು ಐತಿಹಾಸಿಕ, ಪವಿತ್ರ ಧಾರ್ಮಿಕ ಕ್ಷೇತ್ರಗಳ ಸ್ಥಳವಾಗಿದೆ ಎಲ್ಲ ಧರ್ಮದ ಪವಿತ್ರ ಪ್ರಾಚೀನ ಸ್ಥಳಗಳಿಗೆ ಹಿಂದು, ಮುಸ್ಲಿಂ ಸಿಖ್, ಭೌದ್ಧ ಕ್ರೈಸ್ತ, ಜೈನರ ಮಂದಿರ ಮಸೀದೆಗಳಿವೆ, ಇವು ಭಕ್ತಿ ಶಾಂತಿಯ ಸ್ಥಾನಗಳಾಗಿವೆ. ವೀರಭದ್ರೇಶ್ವರ ದೇವಸ್ಥಾನವು ಶಿವ ಭಕ್ತರ ಪವಿತ್ರ ಸ್ಥಳವಗಿದೆ. ಮಾಣಿಕ ನಗರವು ಸರ್ವ ಧರ್ಮಗಳ ಸಮನ್ವಯ ಕೇಂದ್ರವಾವೆ. ಮೋಳಕೇರಾ, ಗಡವಂತಿ, ಘಾಟಬೋರಾಳ, ಶರಣರ ಸ್ಥಳಗಳಾಗಿವೆ, ಚಾಂಗಲೇರ, ಶೈವರ/ ಶಿವಭಕ್ತರ ಪುಣ್ಯಕ್ಷೇತ್ರವಾಗಿದೆ. ಇವುಗಳನೆಲ್ಲಾ ನೋಡಿದಾಗ ಹುಮನಾಬಾದ ತಾಲೂಕಿನ ಮಹತ್ವ ತಿಳಿಯುತ್ತದೆ. ಇದು ಹುಮನಾಬಾದ ತಾಲೂಕಿನ ಸಂಸ್ಕೃತಿಕ ಹೆಮ್ಮೆಯ ಸಂಕೇತವಾಗಿದೆ ೧೨ನೇ ಶತಮಾನದ ಧಾರ್ಮಿಕ ಕ್ರಾಂತಿ ಪುರುಷ ಬಸವಣ್ಣನವರ ಕಾರ್ಯ ಸಾಧನೆಗಳ ನಾಡಾಗಿದೆ. ವಚನ(ವಾಗ್ಮೀಯ) ಬೀಡಾಗಿದೆ.

ಹುಮನಾಬಾದ ತಾಲೂಕಿನ ಐತಿಹಾಸಿಕ ಸ್ಥಳಗಳನ್ನು ನೋಡುತ್ತಾ ಹೊದಂತೆ ಅವುಗಳ ಹಿಂದೆ ಹುಡುಗಿಕೊಂಡಂತಹ ಚರಿತ್ರೆ, ಪರಂಪರೆ, ಸಂಸ್ಕೃತಿ, ಧರ್ಮ, ಆಡಳಿತ, ಕಲೆ, ಸಾಹಿತ್ಯ, ಐತಿಹ್ಯ ಕಥೇ, ಹಾಡು, ಪವಾಡ ಇತ್ಯಾದಿ ಎಲ್ಲವೂ ಕುತುಹಲಕೆರಳಿಸುವ ಜೋತೆಗೆ ತನ್ನ ಅಸ್ಥೀತ್ವವನ್ನು ಉಳಿಸಿಕೊಂಡಿದ್ದು ಆಶ್ವರ್ಯ ಮೂಡಿಸುತ್ತದೆ. ಹಾಗೂ ಇವುವೆಲ್ಲವುಗಳನ್ನು ಒಂದು ಸುಡಿಗೆ ಕಟ್ಟಿ ಅಧ್ಯಾಯನ ನಡೆಸುವುದು ಕಷ್ಟ ಸಾಹಸದ ಕಾರ್ಯವಾಗಿದೆ.

ಹುಮನಾಬಾದ ತಾಲೂಕ ನೊಡುತ್ತಾ ಹೋದರೆ ಕಲೆ, ವಾಸ್ತು ಶಿಲ್ಪ ಮತ್ತು ಸಾಹಿತ್ಯದ ಒಂದು ಭವ್ಯ ನಾಡಾಗಿದೆ. ಹಣಕುಣಿಯ ಕೋಟೆ, ಹುಮನಾಬಾದಿನ ಅಗಸೆಗಳು, ಮೋಳಕೇರಾದ ಮೋಳಿಗೆ ಮಾರಯ್ಯಾನವರ ಗವಿ, ಗಡವಂತಿಯ ಮುಗ್ಧ ಸಂಗಯ್ಯನ ಗವಿ, ಜಲಸಂಗಿಯ ಕಲ್ಲೇಶ್ವರ ದೇವಾಲಯ ಮುಂತಾದವುಗಳು ಕೇವಲ ಐತಿಹಾಸಿಕ ಸ್ಮಾರಕಗಳಲ್ಲ ಇವು ಕಲಾತ್ಮಕ ಬದುಕಿನ ದರ್ಶನವನ್ನು ಮಾಡಿಸುತ್ತವೇ, ಜಲಸಂಗಿಯಲ್ಲಿ ನಿರ್ಮಾಣವಾದ ಕಲ್ಲೇಶ್ವರ ದೇವಾಲಯ ಒಂದು ಅಪೂರ್ವ ಕಲೆಯ ಬೀಡು, ಇಂತಹ ಹುಮನಾಬಾದ ತಾಲೂಕಿನ ಕಲೆ ಉಳಿಸಿ, ಉಳಿಸಿಕೊಳ್ಳುವುದರ ಜೋತೆಗೆ ಅಧ್ಯಾಯನ ಸಂಸೋಧನೆಗಳು ಪಡಿಸಬೇಕು, ಆಗ ಒಂದು ನಾಡಿನ ಮಹತ್ವ ತಿಳಿಯುತ್ತದೆ.

ದೇಶಿಯ ಸಂಸ್ಕೃತಿ ಉಳಿಸಬೇಕು ಎಂಬ ಒಂದು ಆಸೆಯಿಂದ ದೇಶಿಯ ವಿಷಯದ ಹುಡುಕಾಟದ ಸಂಧರ್ಭದಲ್ಲಿ ಅನೇಕ ತೊಂದರೆಗಳು ಎದುರುಗೊಂಡವು ಲಿಖಿತ ಹಾಗೂ ಮೌಖಿಕ ದಾಖಲೆಗಳ ಕೊರತೆ ಒಂದು ವಿಷಯವನ್ನು ಇನ್ನೋಂದು ವಿಷಯದೊಡನೆ ತಿರುಚಿ–ಮರುಚಾಗಿ ಹೇಳುವಿಕೆ ಹೀಗೆ ಹಲವಾರು ತೊಂದರೆಗಳು ಉಂಟಾದವು ಸ್ಥಳಿಯ ವಿಷಯಕ್ಕೆ ಪ್ರಾಮುಖ್ಯವಾಗಿ ಎದುರಾಗುವ ಸಮಸ್ಯ ಎಂದರೆ

ದಾಖಲೆಗಳು ಲಭ್ಯವಾಗದಿರುವುದು. ದಾಖಲೆಗಳನ್ನು ಪರಿಶೀಲಿಸುವಾಗ ಸಂಶೋಧನಕನು ನಿಷ್ಠುರವಾದ ಸತ್ಯ ಸಂಗತಿಯನ್ನು ಹೇಳುವಾಗ ಸಮಸ್ಯಗಳ ಬಲೆಯಲ್ಲಿ ಸಿಲುಕಿಕೊಳ್ಳವುದು ಕಂಡು ಬರತ್ತದೆ. ಕೆಲವು ಸಲ ಲಿಖಿತ ದಾಖಲೆಗಳಿಲ್ಲದೆ ಒದ್ದಾಡಬೇಕಾಗುತ್ತದೆ, ಈ ಎಲ್ಲಾ ಪ್ರಯತ್ನಗಳನ್ನು ಮೀರಿ ನನ್ನ ಈ ನಿಭಂಧವನ್ನು ಬರೆಯಲು ಪ್ರಯತ್ನ ಪಟ್ಟಿದ್ಧೇನೆ.

ಇನ್ನೊಂದು ಮಹತ್ವದ ವಿಷಯವೆಂದರೆ ಇತಿಹಾಸದಲ್ಲಿ ನಡೆದುಹೋದ ಸತ್ಯ ಘಟನೆಗಳ ಬಗ್ಗೆ ಯಾವುದೇ ಪುರಾವೆಗಳು ಸಿಗದೆ ಕತ್ತಲೆ ಕವಿದುಕೊಂಡಂತಹ ಸಹಸ್ರ ಘಟನೆಗಳಿವೆ, ಈ ಘಟನೆಗಳಿಗೆ ಯಾವುದೇ ಗಟ್ಟಿ ಆಧಾರಗಳಿರದೆ ಕೇವಲ ಜನಪದರ ನಾಲಿಗೆಯ ಮೇಲೆ ಹಾಡಾಗಿ, ಕಥೇಯಾಗಿ, ಐತಿಹ್ಯವಾಗಿ ಹೊರಹೊಮ್ಮುತ್ತವೆ, ಜನಪದರು ಹಿಂದೆ ಆದಂತಹ ಹಾಗೂ ಮರೆಯಾಗದಂತಹ ಘಟನೆಯ ಸುತ್ತ ಕಥೆ ಕಟ್ಟಿಯೂ ಹಾಡು ಕಟ್ಟಿಯೂ ತಲೆ ಮಾರಿನಿಂದ ತಲೆಮಾರಿಗೆ ರವಾನಿಸುತ್ತ ಬರುತ್ತಿವೆ. ಇಂತಹ ಜನಪದ ಹಾಡುಗಳು, ಹುಮನಾಬಾದ ತಾಲೂಕಿನ ಕುರಿತು ಐತಿಹಾಸಿಕ ಸ್ಥಳಗಳಾದ, ಕೋಟೆ, ಮಂದಿರ, ಮಹಾನ್ ವ್ಯಕ್ತಿಗಳ ಕುರಿತು ಹಾಗೂ ಐತಿಹ್ಯ, ಕಥೆ, ಪವಾಡ, ಮುಂತಾದವುಗಳನ್ನು ಇಲ್ಲಿ ನೇರವಾಗಿ ಬಳಸಿಕೊಂಡಿರುತ್ತೇನೆ ! ಹುಮನಾಬಾದ ತಾಲೂಕ ಅನೇಕ ರಾಜಮನೆತನಗಳು ಆಳಿದ ನಾಡಾಗಿದೆ. ಸರ್ವ ಧರ್ಮ ಸಮನ್ವಯದ ಬಿಡಾಗಿದೆ. ಮಹಾನ್ ಸಂತರ ತಾಣವಾಗಿದೆ. ಕಲೆ ಸಾಹಿತ್ಯದ ಬಿಡಾಗಿದೆ. ಹಲವು ಸಂಸ್ಕೃತಿಯ ಸಂಗಮದ ನಾಡಾಗಿದೆ ಹುಮನಾಬಾದ ತಾಲೂಕ ಇತಿಹಾಸ ಪರಂಪರೆ ಪಡೆದಿದೆ ಇದು ಎಲ್ಲದರ ಬಗ್ಗೆ ಇತಿಹಾಸ ಸಾಕ್ಷಿಯಾಗಿದೆ.

ಅಧ್ಯಯನದ ಉದ್ದೇಶ

ಕರ್ನಾಟಕದ ಮುಕುಟ ಮಣಿ ಎಂದು ಗುರುತಿಸಲ್ಪಡುವ ಬೀದರ ಜಿಲ್ಲೆ ಅನೇಕ ಶತಮಾನಗಳ ಉಜ್ವಲ ಮತ್ತು ಇತಿಹಾಸ ಪರಂಪರೆ ಹೊಂದಿದೆ, ಜಿಲ್ಲೆಯ ಐದು ತಾಲ್ಲೂಕಾಗಳಲ್ಲಿ ಅನೇಕ ಐತಿಹಾಸಿಕ ಮತ್ತು ಧಾರ್ಮಿಕ ದೇವಾಲಯಗಳು, ಇದ್ದು, ಸಾವಿರಾರು ವರ್ಷ ಕಳೆದರೂ ಕೂಡ ಹೊಳಪನ್ನು ಕಳೆದುಕೊಳ್ಳದೆ, ಗತಕಾಲದ ಇತಿಹಾಸವನ್ನು ಮೂಕಸಾಕ್ಷಿಗಳಾಗಿ ಬಿಂಬಿಸುತ್ತಿವೆ, ಇಂತಹ ಅನೇಕ ಐತಿಹಾಸಿಕ, ಧಾರ್ಮಿಕ ಹಾಗೂ ಪ್ರೇಕ್ಷಣೀಯ ಸ್ಥಳಗಳನ್ನು ಹುಮನಾಬಾದ ತಾಲೂಕಿನಾದ್ಯಂತ ಕಾಣಬಹುದು. ಅಂತೆಯೇ ಹುಮನಾಬಾದ ತಾಲೂಕಾ ಐತಿಹಾಸಿಕ ಸ್ಥಳಗಳ ತವರೂರು ಎನಿಸಿಕೊಂಡಿದೆ. ಗಡಿನಾಡಿನ ಗುಡುಗು – ಮಿಂಚುಗಳ ಜೋತೆಯಲ್ಲಿ ಬದುಕುತ್ತಿದ್ದರು ಕನ್ನಡದ ವೀರ ಪರಂಪರೆಯ ಸತ್ವ ಎಳ್ಳಷ್ಟು ಸ್ವರಗಿಲ್ಲ.

ರಾಷ್ಟ್ರ ಹಾಗೂ ರಾಜ್ಯದ ಪ್ರವಾಸಿ ನಕ್ಷೆಯಲ್ಲಿ ಹುಮನಾಬಾದ ತಾಲ್ಲೂಕಾ ತನ್ನದೆ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಇಲ್ಲಿನ ಕಟ್ಟಡ, ವಾಸ್ತುಶಿಲ್ಪ, ಮಠ,ಮಂದಿರ, ಮಸೀದಿಗಳು, ಕೇವಲ ಐತಿಹಾಸಿಕ ಸ್ಥಳಗಳಾಗಿಂದೇ ಧಾರ್ಮಿಕ ಸಮನ್ವಯದ ಜೀವಂತ ಸಾಕ್ಷಿಗಳಾಗಿವೆ. ವಿವಿಧ ಮತ– ಪಂಥಗಳ ಈ ಐತಿಹಾಸಿಕ ಸ್ಮಾರಕಗಳನ್ನು ನೋಡಲು ಬಂದ ಪ್ರವಾಸಿ ಅವುಗಳು ಸೋಸುವ ಐತಿಹಾಸಿಕ ಜ್ಞಾನವನ್ನು ಸವಿಯದೆ ಇರಲಾರ.

ಪ್ರಾಚೀನ ಪರಂಪರೆ ಹೋಂದಿದ ಹುಮನಾಬಾದ ತಾಲೂಕಿನ ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಳಗಳನ್ನು ಉಳಿಸಿಕೊಳ್ಳವ ಹಿನ್ನೇಲೆಯಲ್ಲಿ ಅವುಗಳ ಅಧ್ಯಾಯನ ಹಾಗೂ ಸಂಶೋಧನೆ ಅನಿವಾರ್ಯವೆನಿಸಿಕೊಳ್ಳುತ್ತದೆ. ಈ ಕಾರ್ಯ ಪ್ರಾದೇಶಿಕ ಮಟ್ಟದಲ್ಲಿ ಆಗುವುದೇ ಆದರೆ ಇನ್ನು ಒಳ್ಳೆಯದೇನಿಸುತ್ತದೆ. ಇದರಿಂದಾಗಿ ಭರತ ಭೂಮಿಯ ಭವ್ಯ ಇತಿಹಾಸವನ್ನು ಬಿಂಬಿಸುವ ತಾಲ್ಲೂಕಿನ ಪ್ರತಿಯೊಂದು ಐತಿಹಾಸಿಕ ಸ್ಥಳಗಳ ಕಡೆಗೆ ಸರಕಾರ ಮತ್ತು ಜನ ಗಮನವನ್ನು ಹರಿಸುವುದು ಹಾಗೂ ಅವುಗಳ ರಕ್ಷಣೆಯ ಅವಶ್ಯಕತೆ ಹಾಗೂ ಅನಿವಾರ್ಯತೆಯನ್ನು ಎತ್ತಿತೋರಿಸುವುದು ಈ ಅಧ್ಯಾಯನದ ಪ್ರಮುಖ ಉದ್ದೇಶವಾಗಿದೆ.

ಹುಮನಾಬಾದ ತಾಲೂಕಿನಾದ್ಯಂತ ಅನೇಕ ಐತಿಹಾಸಿಕ ಸ್ಥಳ ಕಟ್ಟಡಗಳಿದ್ದು, ಅವುಗಳ ಹಿಂದೆ ಹುದುಗಿಕೊಂಡ ಇತಿಹಾಸ, ಪರಂಪರೆ, ಸಂಸ್ಕೃತಿ, ಕಲೆ, ಧಾರ್ಮ, ಸಾಹಿತ್ಯ, ಜನಪದ ಹಾಡು, ಕಥೆ, ಐತಿಹ್ಯ, ಪವಾಡಗಳು, ಒಟ್ಟು ಪರಿಚಯ

ಕೊಡುವುದರ ಜೋತೆಗೆ ಅವುಗಳಲ್ಲಡಗಿರುವ ಸತ್ಯ ಸಂಗತಿಯನ್ನು ಆಧಾರ ಸಹಿತ ಸಾಬೀತು ಪಡಿಸುವ ಉದ್ದೇಶ ಈ ಅಧ್ಯಯನದ ಹಿಂದೆ ಅಡಗಿದೆ.

ನಾನು ಮೋಳಕೇರಾ ಗ್ರಾಮದ ನಿವಾಸಿಯಾಗಿದ್ದರಿಂದ ಕಾಶ್ಮೀರದ ಅರಸ ಮಹಾದೇವ ಭೂಪಾಲರ (ಮೋಳಿಗೆ ಮಾರಯ್ಯಾ) ನಮ್ಮೂರಿನ ಗುಹೇಯ ಚರಿತ್ರೆ ನನ್ನ ಮೇಲೆ ಅಗಾಧ ಪರೀಣಾಮ ಬೀರಿತು. "ಬೆಳೆಯುವ ಸಿರಿ ಮೊಳಕೆಯಲ್ಲಿ" ಎಂಬಂತೆ ಗುರು ವಿರ್ಯರಿಂದ, ಹಿರಿಯರಿಂದ ತಿಳಿದದ್ದ ಹಲವಾರು ಐತಿಹಾಸಿಕ ವಿಷಯಗಳು, ಚಿಕ್ಕಂದಿನಿಂದಲೇ ನನ್ನನ್ನೂ ಇತಿಹಾಸದ ಕಡೆಗೆ ಮುಖ ಮಾಡುವಂತೆ ಮಾಡಿದವು ಅದೃಷ್ಟವೋ ಎಂಬಂತೆ ಕಾಲೇಜು ದಿನಗಳಲ್ಲಿ ಬಿ,ಸಿ ಮಹಾಬಳೇಶ್ವರಪ್ಪಾ ಪ್ರೊ. ಎನ್.ಎನ್. ಬೀರಾದರ, ಬಿ.ಎಮ್. ವಾಡೆ, ಇನ್ನೀತರ ಇತಿಹಾಸ ಮಣಿಗಳ ಸೂಕ್ತ ಮಾರ್ಗದರ್ಶನ ದೊರಕಿ ಚಿಕ್ಕಂದಿನ ಆ ಅಭಿಲಾಷೆಗೆ ಮೂರ್ತರೂಪ ಸಿಕ್ಕಿತು. ಈ ದಿಸೆಯಲ್ಲಿ ಎಮ್.ಫೀಲ್ ಪದವಿಗಾಗಿ ಸಂಶೋಧನೆಗೆ, ವಿಷಯ ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಇತಿಹಾಸ ಕೆದಕುವ ಸಾಹಸಕ್ಕೆ ಕೈ ಹಾಕದೇ ಇರಲಿಲ್ಲ. ಹಲವಾರು ದಿನಗಳ ಕಾಲ ವಿಷಯ ಆಯ್ಕೆಯಲ್ಲಿ ಗೊಂದಲದಲ್ಲಿದ್ದ ನಾನು ಜೋತೆಯಲ್ಲಿದ್ದವರೆಲ್ಲ ಈ ಹೊತ್ತಿಗಾಗಲೇ ಸಂಶೋಧನೆಯಲ್ಲಿ ತೊಡಗಿದರು, ಕೂಡ ಕೊನೆಗೆ ನಾನು ಜಿಲ್ಲೆಯ ಪ್ರಮುಖ ತಾಲೂಕಾವಾಗಿರುವ ಹುಮನಾಬಾದ ತಾಲ್ಲೂಕಿನ ಐತಿಹಾಸಿಕ ಸ್ಥಳಗಳನ್ನು ಕುರಿತು ಅಧ್ಯಯನ ಮಾಡಲು ಪ್ರಾರಂಭಿಸಿದೆ. ಸಾವಿರಾರು ವರ್ಷಗಳಿಂದಲೂ ಭಾರತ ಮತ್ತು ಕರ್ನಾಟಕದ ಚರಿತ್ರೆಯಲ್ಲಿ ಸ್ವಾತಿಕೆಯನ್ನು ಉಳಿಸಿಕೊಂಡು ಕಂಗೊಳಿಸುತ್ತಿರುವ ಈ ಐತಿಹಾಸಿಕ ಕಟ್ಟಡಗಳ ಕುರಿತು ಪ್ರಾಚ್ಯ ವಸ್ತು ಇಲಾಖೆ ಹಾಗೂ ಸರ್ಕಾರದ ನಿರ್ಲಕ್ಷ್ಯಕ್ಕೆ ನೀರೆರೆಯಲು ಅವುಗಳುನ್ನು ಕುರಿತು ಅಧ್ಯಾಯನ ಮಾಡಿ ಒಂದೇ ನಿಬಂಧದಡಿ ಅವುಗಳನ್ನು ಸಂಗ್ರಹಿಸುವ ಅಳಿಲು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಹುಮನಾಬಾದ ತಾಲೂಕಿನ ಐತಿಹಾಸಿಕ ಮತ್ತು ಧಾರ್ಮಿಕ ಸ್ಥಳಗಳ ಕುರಿತು ಹಲವಾರು ಗ್ರಂಥಗಳು ರಚನೆಯಾಗಿವೆ. ಆದರೆ ತಾಲ್ಲೂಕಿನಾದ್ಯಂತ ಕಂಡು ಬರುವ ಧಾರ್ಮಿಕ, ಐತಿಹಾಸಿಕ, ಪ್ರೇಕ್ಷಣೀಯ ಪುಣ್ಯ ಸ್ಥಳಗಳನ್ನು ಒಂದೇ ಕೃತಿಯಲ್ಲಿ ಅಧ್ಯಾಯನ ನಡೆಸಿಲ್ಲ ಕಾರಣ ಆ ಕೊರತಯನ್ನು ನಿಗಿಸುವ ದೃಷ್ಟಿಕೋನವನ್ನು ಗಮನದಲ್ಲಿಟ್ಟುಕೊಂಡು, ಒಬ್ಬ ಇತಿಹಾಸದ ವಿದ್ಯಾರ್ಥಿಯಾಗಿ ಐತಿಹಾಸಿಕ ಸ್ಥಳಗಳಿಗೆ ನೀಡಬೇಕಾದ ಗೌರವ ಮಾನ್ಯತೆಯನ್ನು ನೀಡಲು ಈ ಕಿರು ಪ್ರಬಂಧವನ್ನು ರಚಿಸಲಾಗಿದೆ.

ತಾಲ್ಲೂಕಿನಡಿ ಬರುವ ಐತಿಹಾಸಿಕ ಸ್ಥಳಗಳ ಕುರಿತು ರಚಿಸಲಾದ ಈ ಕಿರು ನಿಬಂಧ ಐತಿಹಾಸಿಕವಾಗಿ ಪ್ರಮುಖ್ಯತೆ ಪಡೆದುಕೊಂಡಿದೆ. ಸಾವಿರಾರು ವರ್ಷಗಳಿಂದ ಈ ಭಾಗದಲ್ಲಿ ಧಾರ್ಮಿಕ ಸಹಿಷ್ಣತೆಯನ್ನು ಮೂಡಿಸುತ್ತಾ ಕಂಗೊಳಿಸುತ್ತಿರುವ ಈ ಕಟ್ಟಡಗಳು ಹಾಗೂ ಅವುಗಳ ಹಿನ್ನಲೆಯನ್ನು ಇಲ್ಲಿ ಸೆರೆ ಹಿಡಿಯಲಾಗಿದೆ. ಭವಿಷ್ಯತ್ತಿನಲ್ಲಿ ಇತಿಹಾಸದ ವಿದ್ಯಾರ್ಥಿಗಳಿಗೆ ಹಾಗೂ ಇತಿಹಾಸಕರಿಗೆ ಈ ಕಿರು ನಿಭಂದಿಂದ ಸಣ್ಣ ಪ್ರಮಾಣದ ನೆರವಾದರು ಸರಿ ನನ್ನ ಈ ಪ್ರಯತ್ನಕ್ಕೆ ತಕ್ಕ ಫಲ ಮತ್ತು ಮಹತ್ವ ದೊರಕಿದಂತಾಗುತ್ತದೆ. ಹುಮನಾಬಾದ ತಾಲೂಕಿನ ಭೌಗೋಳಿಕ ಲಕ್ಷಣ, ಇತಿಹಾಸ, ಪರಂಪರೆ, ಇಲ್ಲಿಯ ಜನಿಸಿ ಮಾನವ ಕುಲಕೆ ದಾರಿ ದೀಪವೇನಿಸಿದೆ ಕೆಲ ಐತಿಹಾಸಿಕ ವ್ಯಕ್ತಿಗಳ, ಸಂತರ ಜೀವನ ಚರಿತ್ರೆ ಇಲ್ಲಿರುವುದರಿಂದ ಈ ನಿಭಂದಕ್ಕೆ ಮಹತ್ವದ ಮೆರೆಗು ಬರಲು ಸಾಧ್ಯಯವೇನಿಸಿದೆ.

ಎಮ್.ಫೀಲ್ ಪದವಿಗಾಗಿ ನಾನು "ಹುಮನಾಬಾದದ ತಾಲ್ಲೂಕಿನ ಐತಿಹಾಸಿಕ ಸ್ಥಳಗಳ ಕುರಿತು ಒಂದು ಅಧ್ಯಾಯನ "ಎಂಬ ಸಂಶೋಧನೆಯನ್ನು ಕೈಗೇತ್ತಿಕೊಂಡೆನು ವಿಷಯ ಆಯ್ಕೆ ಖಚಿತ ಪಟ್ಟ ನಂತರ ಈ ವಿಷಯಕ್ಕೆ ಸಂಬಂಧ ಪಟ್ಟ ಗ್ರಂಥಗಳಿಗಾಗಿ ಹಲವಾರು ಸಂತರು, ಉಪನ್ಯಾಸಕರು, ಹಿರಿಯರು, ವಿದ್ಯಾರ್ಥಿಗಳು, ಸ್ನೇಹೀತರ ಜೋತೆ ಚರ್ಚಿಸಿಲಾಯಿತು. ಕೊನೆಗೆ ಬಹು ಕಷ್ಟ ಪಟ್ಟು ವಿಷಯಕ್ಕೆ ಸಂಬಂಧ ಪಟ್ಟ ಪುಸ್ತಕಗಳನ್ನು ಹಲವು ಮೂಲಗಳಿಂದ ಸಂಗ್ರಹಿಸಿದೆ. ಕೆಲ ಪುಸ್ತಕಗಳಲ್ಲಿ ಐತಿಹಾಸಿಕ ವಿಷಯಗಳ ಬಗ್ಗೆ ಗೊಂದಲಗಳಿದ್ದುದು ಕಂಡು ಬಂದಿತು, ಆ ಕಾರಣದಿಂದ ಮತ್ತೆ ಹಲವಾರು ಜ್ಞಾನಿಗಳಿಗೆ ಸಂದರ್ಶಿಸಿ ವಿಷಯದ ಬಗ್ಗೆ ಮಾಹಿತಿ ಸಂಗ್ರಹಿಸಿದನು. ಹಲವು ಸಂಧರ್ಭದಗಳಲ್ಲಿ ಮಾರ್ಗದರ್ಶಕರು ನೀಡಿರುವ ಮಾಹಿತಿಗಳು ಅತೀ ಉಪಯುಕ್ತ ವೆನಿಸಿದವು.

ಐತಿಹಾಸಿಕ ಸ್ಥಳಗಳ ಕರಿತು ವಿಷಯ ಸಂಗ್ರಹಣೆ ಮಾಡಿದ ನಂತರ ಮಾರ್ಗದರ್ಶಕರೊಂದಿಗೆ ಚರ್ಚಿಸಿ ಆ ಸ್ಥಳಗಳ ಛಾಯಾ ಚಿತ್ರಗಳನ್ನು ಸಂಗ್ರಹಿಸುವ ನಿರ್ಧಾರಕ್ಕೆ ಬರಲಾಯಿತು. ಇನ್ನೋರ್ವರಿಂದ ಕ್ಯಾಮರಾವನ್ನು ಉರುವೋಲಾಗಿ ಪಡೆದುಕೊಂಡು ತಾಲ್ಲೂಕಿನ ಪ್ರತಿಯೊಂದು ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿ ಛಾಯಾ ಚಿತ್ರಗಳನ್ನು ಸಂಗ್ರಹಸಲಾಯಿತು. ಹಲವಾರು ಬಾರಿ ಈ ಕಾರ್ಯ ಬೆಸರವೆನಿಸಿದರೂ ಮಾರ್ಗದರ್ಶಕರ ಹಿತ ನುಡಿಗಳು ನನಲ್ಲಿ ಚೈತನ್ಯವನ್ನು ತುಂಬಿದವು.

ವ್ಯಾಪ್ತಿ :– ಈ ಕಿರು ಪ್ರಬಂಧದ ಪ್ರಥಮ ಅಧ್ಯಾಯದಲ್ಲಿ ಹುಮನಾಬಾದ ತಾಲೂಕಿನ ಐತಿಹಾಸಿಕ ಸ್ಥಳಗಳ ಕುರಿತು ಸಂಕ್ಷಿಪ್ತ ಮಾಹಿತಿ, ಅಧ್ಯಾಯನದ ಉದ್ದೇಶ ವ್ಯಾಪ್ತಿ, ಮಹತ್ವದ ಕುರಿತು ಮಾಹಿತಿಯನ್ನು ನೀಡಲಾಗಿದೆ.

ಅಧ್ಯಾಯನದ ಎರಡನೆಯ ಅಧ್ಯಾಯದಲ್ಲಿ ಹುಮನಾಬಾದ ತಾಲೂಕಿನ ಭೌಗೋಳಿಕ ಲಕ್ಷಣಗಳು, ಹುಮನಾಬಾದ ತಾಲೂಕಿನ ಇತಿಹಾಸ ಪರಂಪರೆ ಸಂಸ್ಕೃತಿ, ಸಾಹಿತ್ಯ, ಕಲೆ ಶಿಕ್ಷಣ, ಇತ್ಯಾಧಿ ರಂಗಗಳ ಕುರಿತು. ಹುಮನಾಬಾದ ಹೆಸರಿನ ಮೂಲ ಇತ್ಯಾದಿ ವಿಷಯಗಳನ್ನು ಕುರಿತು ಇಲ್ಲಿ ಮಾಹಿತಿಯನ್ನು ಸಂಗ್ರಹಸಿಲಾಗಿದೆ.

ನಿಭಂಧದ ಮೂರನೆ ಅಧ್ಯಾಯದಲ್ಲಿ ಹುಮನಾಬಾದ ತಾಲೂಕಿನಾದ್ಯಾಂತ ಹರಡಿರುವ ಐತಿಹಾಸಿಕ ಸ್ಥಳಗಳ ಕುರಿತು ಅವುಗಳ ಹಿಂದೆ ಹುದುಗಿರುವ ಇತಿಹಾಸ, ಕಲೆ, ಮತ್ತು ವಾಸ್ತುಶಿಲ್ಪದ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಇಲ್ಲಿ ಕ್ರೊಢಿಕರಿಸಲಾಗಿದೆ.

ನಿಂಬಂಧದ ನಲ್ಕನೇಯ ಅಧ್ಯಾಯದಲ್ಲಿ ಹುಮನಾಬಾದ ತಾಲೂಕಿನ ಐತಿಹಾಸಿಕ ಸ್ಥಳಗಳು ಎಂಬ ವಿಷಯದ ತೌಲನಿಕ ಮಾಹಿತಿ ತಾಲೂಕಿನಾದ್ಯಂತ ಹರಡಿರುವ ಹತ್ತು –ಹಲವು ಐತಿಹಾಸಿಕ ಸ್ಥಳಗಳ ಸಮಕಾಲಿನ ಇತಿಹಾಸದ ವಿವರಣೆ ಮತ್ತು ಅವುಗಳ ರಕ್ಷಣೆಯಲ್ಲಿ ಜನತೆಯ ಪಾತ್ರದ ಕುರಿತು ಮಾಹಿತಿಯನ್ನು ಇಲ್ಲಿ ಬಿಚ್ಚಿಡಲಾಗಿದೆ.

ಅಧ್ಯಾಯ ಎರಡು

ಹುಮನಾಬಾದ ತಾಲೂಕಿನ ಭೌಗೋಳಿಕ ಲಕ್ಷಣ ಮತ್ತು ಐತಿಹಾಸಿಕ ಹಿನ್ನಲೆ

ಹುಮನಾಬಾದ ತಾಲ್ಲೂಕ ಪರಿಚಯ

ಕರ್ನಾಟಕದ ಉತ್ತರ ದಿಕ್ಕಿನಲ್ಲಿರುವ ಬೀದರ ಜಿಲ್ಲೆ ಕನ್ನಡಮ್ಮನ ಮುಕುಟವಾಗಿ ಕಂಗೊಳಿಸುತ್ತಿದೆ. ಈ ಜಿಲ್ಲೆಯ ಒಂದು ತಾಲ್ಲೂಕವೇ ಹುಮನಾಬಾದ. ಈ ನಗರಕ್ಕೆ ಪೂರ್ವದಲ್ಲಿ ಜಯಸಿಂಹ ನಗರವೆಂದು ಕರೆಯುತ್ತಿದ್ದರು. ಮುಸ್ಲಿಂ ಆಡಳಿತದಲ್ಲಿ ಜಯಸಿಂಹ ನಗರವು ಹುಮನಾಬಾದ ಎಂಬ ಹೆಸರು ಪಡೆದುಕೊಳ್ಳುತ್ತದೆ. ಮುಂದೆ ಅದೇ ಹೇಸರು ಸ್ಥೀರವಾಗಿ ಉಳಿಯಿತು. ಇದೊಂದು ಐತಿಹಾಸಿಕ ಪಟ್ಟಣವಾಗಿದ್ದು, ಬೀದರ ಗುಲ್ಬರ್ಗಾಗಳ ಮಧ್ಯದಲ್ಲಿ ಬರುತ್ತದೆ ಈ ನಗರದ ಮುಖಾಂತರವೇ ರಾಷ್ಟ್ರೀಯ ಹೆದ್ದಾರಿ ೦೯ ಹಾಯ್ದು ಹೋಗುತ್ತದೆ. ಇದು ಮುಂಬೈನಿಂದ ಹೈದ್ರಾಬಾದಕ್ಕೆ ಸಂಪರ್ಕ ಕಲ್ಪಿಸುತ್ತದೆ.

ಈ ಭೂಮಿಗೆ ಧರಿನಾಡು ಎಂದು ಕರೆಯುತ್ತಾರೆ. ಕೆಂಪು ಮಣ್ಣಿನಿಂದ ಕೂಡಿದ ತಂಪು ಪ್ರದೇಶ ಇದಾಗಿದೆ. ಹನ್ನೆರಡನೆ ಶತಮಾನದಲ್ಲಿ ಬಸವದಿ ಶರಣರು ಕಾಯಕ ಮಾಡಿದ ಪುಣ್ಯ ಭೂಮಿ, ಪಾವನ ನಾಡು ಇದಾಗಿದೆ. ಚಾಲುಕ್ಯ ೬ನೇ ವಿಕ್ರಮಾದಿತ್ಯನಂತಹ ವೀರಾಧಿ ವೀರರು ರಾಜ್ಯವಾಳಿದ ನೆಲದಲ್ಲಿ ವಡ್ಡಾರಾಧಾನೆ ಮಿತಾಕ್ಷರಗಳಂತಹ ಗ್ರಂಥಗಳು ರಚನೆಗೊಂಡು ಸಾಹಿತ್ಯ ಜ್ಯೋತಿ ಇಲ್ಲಿ ಪ್ರಜ್ವಲಿಸಿತು. ವಿಶ್ವ ಸಾಹಿತ್ಯಕ್ಕೆ ವಚನ ಸಾಹಿತ್ಯವೆಂಬ ಅತ್ಯಮೂಲ್ಯ ಕಾಣಿಕೆ ನೀಡಿದ ಪವಿತ್ರ ಭೂಮಿ ಈ ನಮ್ಮ ಬೀದರ ಜಿಲ್ಲೆ.

ಭೌಗೋಳಿಕ ಪರಿಚಯ :–

ಇದು ಕನ್ನಡ ನಾಡಿನ ಉತ್ತರ ಭಾಗದಲ್ಲಿ ನೆಲೆಗೊಂಡಿದೆ, ಈ ತಾಲ್ಲೂಕಿನ ವಿಸ್ತೀರ್ಣವು ೩೮೫.೨೩.ಕಿ.ಮೀ ಇದೆ. ಈ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿ ಬಾಲ್ಕಿ ಮತ್ತು ಬೀದರ ತಾಲ್ಲೂಕಾಗಳಿವೆ, ದಕ್ಷಿಣ ದಿಕ್ಕಿಗೆ ಗುಲ್ಬರ್ಗಾ, ಆಳಂದ ಹಾಗೂ ಚಿಂಚೋಳ್ಳಿ ತಾಲ್ಲೂಕಾಗಳು ಇವೆ. ಪೂರ್ವದಲ್ಲಿ ಆಂದ್ರ ಪ್ರದೇಶ ಪಶ್ಚಿಮದಲ್ಲಿ ಬಸವಕಲ್ಯಾಣ ತಾಲ್ಲೂಕಾಗಳು ಚಾಚಿಕೊಂಡಿವೆ. ಆಡಳಿತದ ದೃಷ್ಟಿಯಿಂದ ಈ ತಾಲ್ಲೂಕವನ್ನು ೬ ಹೊಬಳಿಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ ಹುಮನಾಬಾದ, ಹಳ್ಳಿಖೇಡ (ಬಿ), ನಿರ್ಣ, ದುಬಲಗುಂಡಿ, ಚಿಟಗುಪ್ಪಾ ಹಾಗೂ ಬೇಮಳಖೇಡ. ೨೦೦೧ನೇಯ ಸಾಲಿನ ಜನಗಣತಿಯ ಪ್ರಕಾರ ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ ೨,೯೪,೪೧೩. ಇದರಲ್ಲಿ ಗಂಡಸರು ೧,೫೦,೯೧೪ ಹಾಗೂ ಹೆಂಗಸರು ಸಂಖ್ಯೆ ೧,೪೩,೪೯೯ ಜನ ಸಾಂದ್ರತೆಯು ಒಂದು ಚದುರ ಕಿ.ಮೀ ಗೆ ೨೯೮ ಜನರ ಪ್ರಮಾಣದಲ್ಲಿದೆ, ಹುಮನಾಬಾದ ನಗರದ ಜನಸಂಖ್ಯೆ ೩೬೫೧೧, ಈ ತಾಲ್ಲೂಕಿನಲ್ಲಿ ೮೭ ಹಳ್ಳಿಗಳಿವೆ ಅವುಗಳಲ್ಲಿ ವಸತಿ ಇರುವ ಹಳ್ಳಿಗಳು ೮೪ ,

ಜನವಸತಿ ಇಲ್ಲದ ಹಳ್ಳಿಗಳು ೦೩ ತಾಲ್ಲೂಕಿನಲ್ಲಿ ೩೩ ಪಂಚಾಯಿತಳು ೦೨. ಪುರಸಭೆಗಳು ಇವೆ.

ಬೀದರ ಜಿಲ್ಲೆಯು ರಾಜಧಾನಿ ಬೆಂಗಳೂರುನಿಂದ ೭೦೦ ಕಿ.ಮೀ ಅಂತರದಲ್ಲಿದೆ. ರಾಜ್ಯಗಳ ಪುನರ್ ವಿಂಗಡಣೆಯ ಪ್ರಕಾರ ಬೀದರ ಕರ್ನಾಟಕಕ್ಕೆ ಸೇರಿದಾಗ ಹುಮನಾಬಾದ ತಾಲ್ಲೂಕವಾಗಿ ಮಾರ್ಪಟ್ಟಿತು. ಬೀದರ ಜಿಲ್ಲೆಯ ಮೊದಲಿನ ನಾಲ್ಕು ತಾಲ್ಲೂಕಗಳಲ್ಲಿ ಇದು ಅತ್ಯಂತ ದೊಡ್ಡ ತಾಲ್ಲೂಕ್ಕಾಗಿ ೧೭೬ ಹಳ್ಳಿಗಳಿಂದ ಕೂಡಿತ್ತು. ೧೯೫೬ ನವೆಂಬರ ತಿಂಗಳಲ್ಲಿ ಬಸವಕಲ್ಯಾಣ ಸ್ವಂತಂತ್ರ ತಾಲ್ಲೂಕವಾಗಿ ನಿರ್ಮಾಣಗೊಂಡಿತು, ಆಗ ತಾಲ್ಲೂಕಿನ ೮೯ ಹಳ್ಳಿಗಳು ಬಸವಕಲ್ಯಾಣಕ್ಕೆ ಸೇರಿಕೊಂಡವು ಉಳಿದ ೮೭ ಹಳ್ಳಿಗಳು ಹುಮನಾಬಾದ ತಾಲ್ಲೂಕಿನಲ್ಲಿವೆ.

ಹವಾಗುಣ – ಮಳೆ :–

ಹುಮನಾಬಾದ ತಾಲೂಕಿನಲ್ಲಿ ಸಮಶೀತೋಷ್ಣ ಹವಾಮಾನವಿದ್ದು ಆರೋಗ್ಯದಾಯಕವಾಗಿದೆ. ಇಲ್ಲಿ ಮಂಗಾರು ಮಳೆಯು ಜೂನ ತಿಂಗಳಿನಿಂದ ಪ್ರಾರಂಭವಾಗಿ ಅಕ್ಟೋಬರ ತಿಂಗಳಿಗೆ ಕೊನೆಗೊಳ್ಳುತ್ತದೆ. ಹಿಂಗಾರು ಮಳೆಯು ನವೆಂಬರ್ ನಿಂದ ಡಿಸೆಂಬರ್ ವರೆಗೆ ಇರುತ್ತದೆ. ಬೇಸಿಗೆ ಕಾಲದಲ್ಲಿ ಸ್ವಲ್ಪ ಶಕೆ ಜಾಸ್ತೀಯಾಗಿರುತ್ತದೆ. ಒಣ ಹವೆ ಕಂಡು ಬರುತ್ತದೆ. ಗುಡುಗು ಮಿಂಚಿನ ಮಳೆಗಳು ಹೆಚ್ಚಾಗಿ ಬಂದು ಅಲ್ಲಲ್ಲಿ ಸಿಡಿಲಿನ ಆರ್ಬಾಟ ಹೆಚ್ಚಾಗಿರುತ್ತದೆ. ಈ ತಾಲ್ಲೂಕಿನಲ್ಲಿ ವೃಷ್ಟಮಾಪಕ ಕೇಂದ್ರಗಳು ಒಟ್ಟು ೬ ಇವೆ ಸರಾಸರಿ ಮಳೆಯ ಪ್ರಮಾಣ ೫೮೨.೪ ಮಿ.ಮೀಟರಗಳು, ೧೯೯೮ ರಲ್ಲಿ ಪ್ರಮಾಣ ೧೧೭೬.೭ ಮಿ.ಮೀ ಇದ್ದು. ೨೦೦೦ರಲ್ಲಿ ಅರ್ಧಕ್ಕೆ ಬಂದು ನಿಂತಿರುವುದು ಬರಗಾಲವನ್ನೆ ಸೂಚಿಸುತ್ತದೆ.

ನದಿ –ಬೆಟ್ಟ – ಕಾಡುಗಳು :–

ಈ ತಾಲ್ಲೂಕಿನಲ್ಲಿ ಯಾವ ದೊಡ್ಡ ನದಿಗಳಿಲ್ಲ. ಆದರೆ ಚಿಕ್ಕ ಹಳ್ಳಗಳಿವೆ ಅವುಗಳೆಂದರೆ, ಬಸವತೀರ್ಥ ಹಳ್ಳ, ಮಾಣಿಕ ನಗರ ಹಳ್ಳ, ಉಡಬಾಳ ಹಳ್ಳ, ಮೊದಲಾದವು ಬಸವತೀರ್ಥ ಹಳ್ಳವು ಮಾಣಿಕ ನಗರ ಹಳ್ಳಕ್ಕೆ ಸೇರಿಕೊಂಡು ಹುಡುಗಿ – ಹುಮನಾಬಾದ ನಡುವೆ ದೊಡ್ಡ ಪ್ರಮಾಣದಲ್ಲಿ ಹರಿಯುತ್ತದೆ. ಇದರಿಂದ ಮಧ್ಯಮ ನೀರಾವರಿ ಯೋಜನೆಗೆ ಅನುಕೂಲವಿದೆ. ಈ ತಾಲ್ಲೂಕಿನಲ್ಲಿ ನೂರಾರು ಕೆರೆಗಳಿದ್ದರೂ ಪ್ರಯೋಜನವಾಗಿಲ್ಲ. ಮಳೆಯ ಪ್ರಮಾಣ ಕಡಿಮೆ ಇದ್ದ ಕಾರಣ ಕೆರೆಗಳಿಗೆ ನೀರಲ್ಲ. ಆದುದರಿಂದ ತಾಲ್ಲೂಕಿನಲ್ಲಿ ಬೇಸಾಯ ತೆರೆದ ಬಾವಿಗಳ

ಮೆಲೆಯೇ ಅವಲುಬಿಸಿದೆ ತಾಲ್ಲೂಕಿನಲ್ಲಿ ಸುಮಾರು ೭೨೪೦ ನೀರಾವರಿ ಬಾವಿಗಳಿವೆ.

ಹುಮನಾಬಾದ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶವು ಇದೆ. ಅರಣ್ಯ ಇಲಾಖೆಯ ಉಸ್ತುವಾರಿಯಲ್ಲಿ ಮಾಣಿಕನಗರ , ಧುಮ್ಮನಸೂರ, ಚಾಂಗಲೇರಾ ಅಲ್ಲಿಪುರ, ದೇವಗಿರಿ, ಕರಕನಳ್ಳಿ ಗೋಟ್ಟಂಗೊಟ್ಟಿ ಮೊದಲಾದ ಅರಣ್ಯ ಪ್ರದೇಶಗಳು ಸಸ್ಯ ಕೇಂದ್ರಗಳು ಅಭಿವೃದ್ಧಿ ಹೊಂದುತ್ತಿವೆ. ಅರಣ್ಯದಲ್ಲಿ ಹಲವಾರು ಜಾತಿಯ ಮರಗಿಡಗಳು ಬೆಳೆಯಲಾಗುತ್ತಿದೆ. ಈ ಕಾಡುಗಳಲ್ಲಿ ತೋಳ, ನರಿ, ಜಿಂಕೆ, ಮೊಲ, ಮೊದಲಾದ ಪ್ರಾಣಿಗಳು ಅಲ್ಲಲ್ಲಿ ಕಂಡು ಬರುತ್ತವೆ. ಹಲವಾರು ದಟ್ಟ ಕಾಡಿನಲ್ಲಿ ಹುಲಿ, ಚಿರತೆಗಳು, ಕಾಡು ಹಂದಿಗಳು, ವಾಸವಾಗಿವೆ. ಇಲ್ಲಿಯ ಪಕ್ಷಿ ಸಂಕುಲ ಸಮೃದ್ಧವಾಗಿದೆ.

ಈ ತಾಲ್ಲೂಕಿನಲ್ಲಿ ಖನಿಜ ಸಂಪತ್ತು ಯಾವುದೂ ಕುಡ ಇಲ್ಲ. ಗಟ್ಟಿಯಾದ ಕೆಂಪು ಕಲ್ಲುಗಳು ಮಾತ್ರ ಹೇರಳವಾಗಿ ದೊರೆಯುತ್ತಿವೆ. ತಾಲ್ಲೂಕಿನ ಹಣಕುಣಿ, ಒಳಖಿಂಡಿ, ಜಲಸಂಗವಿ, ಚೀನಕೇರಾ, ಬನ್ನಳ್ಳಿ ಉಡಬಾಳ, ಮೊದಲಾದ ಕಡೆಗಳಲ್ಲಿ ಈ ಕೆಂಪು ಖನಿಜವಿದೆ. ದಿನಾಲು ಸಾವಿರಾರು ಟನ್ ಕಲ್ಲುಗಳು ಇಲ್ಲಿಂದ ಗುಲಬರ್ಗಾ, ಕಮಲಾಪೂರ ಮೊದಲಾದ ಕಡೆ ಸಾಗಿಸಲಾಗುತ್ತದೆ. ಈ ಕಲ್ಲುಗಳಿಂದ ಸುಂದರವಾದ ಮೆನ ಕಟ್ಟಬಹುದು, ಈ ತಾಲ್ಲೂಕಿನಲ್ಲಿ ಒಂದು ಸಹಕಾರ ಸಕ್ಕರೆ ಕಾರ್ಖಾನೆಯಿದ್ದು, ೩ ಖಾಸಗಿ ಕಾರ್ಖಾನೆಗಳಿವೆ. ಅವುಗಳಿಂದ ದೊರೆಯುವ ಕಚ್ಚಾವಸ್ತು ಕಬ್ಬಿನ ಸಿಪ್ಪೆಯಿಂದ ಕಾಗದ ಕಾರ್ಖಾನೆ ನಡೆಸಲಾಗುತ್ತದೆ.

ಜನವರ್ಗಗಳು :–

ಹುಮನಾಬಾದ ತಾಲ್ಲೂಕಿನಲ್ಲಿ ಹಿಂದು –ಮುಸ್ಲಿಂ ಸಂಸ್ಕೃತಿಗಳ ಸಮನ್ವಯವನ್ನು ಕಾಣುತ್ತೇವೆ. ತಾಲ್ಲೂಕಿನಲ್ಲಿ ಎಲ್ಲಾ ಜಾತಿಯ ಜನವರ್ಗಗಳು ಕಂಡು ಬರುತ್ತವೆ. ಲಿಂಗಾಯತ, ಬ್ರಹ್ಮಣ, ಕೋಮಟಿಗ, ಕುರುಬ, ಕಬ್ಬಲಿಗ, ರೆಡ್ಡಿ, ಹಜಾಮ, ಬೇಡರು, ವಡ್ಡರು, ಹೆಳವರು, ಅಗಸರು, ಕುಂಬಾರರು, ಕಂಬಾರರು, ನೇಕಾರರು, ಗೌಳಿಗೆ, ಗೋಸ್ವಾಮಿ, ಬೌದ್ದರು, ಕ್ರಿಶ್ಚಿಯನ್ನುರು, ಲಂಬಾಣಿಗಳು, ಕುಂಚಿಕೊರೆರು, ಬುಡ ಬುಡಕಿಯರು, ಅಲೆ ಮಾರಿ ಜನಾಂಗಗಳಾದ ಬೈಲ ಗಂಬಾರರು, ಪಾಸಿಪರ್ದಿರು, ಬರೆಬರೆರು ಪೋಚೆಮ್ಮನವರು ಹೀಗೆ ಹಲವಾರು ಜನವರ್ಗಗಳಿವೆ. ಈ ತಾಲ್ಲೂಕಿನಲ್ಲಿ ಲಂಬಾಣಿಗಳ ೧೦ ತಾಂಡಾಗಳಿವೆ. ಈ ಜನಶ್ರಮ ಜೀವಿಗಳಾಗಿದ್ದು. ವ್ಯವಸಾಯ ಮುಖ್ಯ ಉದ್ಯೋಗವಾಗಿದ್ದು ಅವರ ಭಾಷೆ ಪ್ರತ್ಯೇಕವಾಗಿದ್ದು, ಅದಕ್ಕೆ ಲಿಪಿಯಿಲ್ಲ. ಇವರು ಕೂಡ ಹಿಂದೂ ಜನಾಂಗವೇ ಆಗಿದ್ದಾರೆ.

ಭೋವಿ ಸಮಾಜ ವಡ್ಡರು, ಭೂಮಿಯಿಂದ ಕಲ್ಲು ತೆಗೆಯುವ ಕರ್ಮಯೋಗಿಗಳು, ಆದರೆ ಇಂದು ಕಲ್ಲು ತೆಗಯುವ ಯಂತ್ರಗಳು ಬಂದು ಅವರ ಉದ್ಯೋಗ ನಿಂತು ಬಿಟ್ಟಿದೆ. ಈಗ ಬೇರೆ ಕಾಯಕ ಅರಸುತ್ತಿದ್ದಾರೆ, ಈ ತಾಲ್ಲೂಕಿನಲ್ಲಿ ರಡ್ಡಿ ಜನಾಂಗ ಪ್ರತಿಯೊಂದು ಊರಿನಲ್ಲಿದ್ದು ವ್ಯವಸಾಯದಲ್ಲಿ ತೊಡಗಿದ್ದಾರೆ ಹೈನುಗಾರಿಕೆಯಲ್ಲಿ ತುಂಬಾ ಪಳಗಿದ ಜನರು ಹಾಲಿನ ಉತ್ಪನ್ನಗಳು ಮಾರಾಟ ಮಾಡುತ್ತಾರೆ.

ಇತಿಹಾಸ :-

ಈ ಧರಿನಾಡನ್ನು ಮೌರ್ಯರು, ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣ ಚಾಳುಕ್ಯರು, ಕಾಕತೀಯರು, ಖಿಲ್ಜಿ, ಬಹುಮನಿ, ಮೋಘಲರು, ಹೈದರಾಬಾದ ನಿಜಾಮ ಮೊದಲಾದವರು ಆಳಿದರು, ಕಲ್ಯಾಣ ಚಾಲುಕ್ಯ ಅರಸನಾದ ೬ನೇ ವಿಕ್ರಮಾದಿತ್ಯನು ಈ ಪ್ರದೇಶದಲ್ಲಿ ಅಭಿವೃದ್ದಿ ಕಾರ್ಯಕ್ಕೆ ಕೊಂಡು ಕನ್ನಡ ಭಾಷೆ, ಶಿಲ್ಪಕಲೆ, ಸಂಗೀತ, ನಾಟಕ, ನೃತ್ಯಕಲೆ ಅತ್ಯಂತ ಎತ್ತರಕ್ಕೆ ಬೆಳೆಸಲು ಸಹಕರಿಸಿದನೆಂದು ಇತಿಹಾಸ ಹೇಳುತ್ತದೆ. ಬಸವಕಲ್ಯಾಣದ ಈಗಿನ ಗೊರಟಾ ಗ್ರಾಮವು ಹಿಂದೆ ಗೋರಂಟೆ ಎಂದು ಪ್ರಸಿದ್ದವಾಗಿತ್ತು. ಅಲ್ಲಿಯ ಸಂಗೀತ ಶಾಲೆ ಭಾರತ ಖಂಡದಲ್ಲೆ ಅತ್ಯಂತ ದೊಡ್ಡದಾಗಿತ್ತು. ಸುಮಾರು ೧೦,೦೦೦ ವಿದ್ಯಾರ್ಥಿಗಳು, ೧,೦೦೦ ಶಿಕ್ಷಕರು ಆ ವಿದ್ಯಾಲಯದಲ್ಲಿದ್ದರೆಂದು ಶಿಲಾಶಾಸನಗಳು ಹೇಳುತ್ತವೆ.

೬ನೇ ವಿಕ್ರಮಾದಿತ್ಯನು ಅನೇಕ ಗುಡಿ ಗುಂಡಾರಗಳು ಕಟ್ಟಿಸಿದನು, ಅವುಗಳಲ್ಲಿ ನಾರಾಯಣಪೂರದ ಶಿಮಂದಿರ ಹಾಗೂ ಹುಮನಾಬಾದ ತಾಲ್ಲೂಕಿನ ಜಲಸಂಗಿ ಗ್ರಾಮದ ಕಲ್ಲೆಶ್ವರ ದೇವಾಲಯಗಳು ಬಹಳ ಪ್ರಸಿದ್ಧವಾಗಿದ್ದವೆಂದು ತಿಳಿದು ಬರುತ್ತದೆ,. ಇವನ ಅವಧಿಯ ಈಗಿನ ಘಾಟಬೋರಳ ಎಂಬ ಗ್ರಾಮ ಘಟ್ಟಿ ಬೋರವಳ್ಳಿ ಎಂಬ ಹೆಸರಿನಿಂದ ಕರೆಯಲ್ಪಡುವ ಅಗ್ರಹಾರವಾಗಿತ್ತು. ಈ ದೊರೆಯ ಕಲಾಸೇವೆ, ಕಲಾ ವೈಭವ ಕಲಾ ಮಂದಿರಗಳ ನಿರ್ಮಾಣ ಉತ್ತಮ ಕೃತಿಗಳ ರಚನೆ ಶಿಲಾಶಾಸನಗಳು ಇಂದಿಗೂ ಸಾರುತ್ತವೆ.

ಈಗಿನ ಹುಮನಾಬಾದ ನಗರವನ್ನು ಚಾಲುಕ್ಯರ ದೊರೆಯಾದ ಎರಡನೇ ಜಯಸಿಂಹನು ಕ್ರಿ.ಶ. ೧೦೧೫ ರಿಂದ ೧೦೪೩ರಲ್ಲಿ ಅಳಿದ್ದನೆಂದು ತಿಳಿದು ಬರುತ್ತದೆ. ಕ್ರಿ.ಶ. ೧೦೪೦ರಲ್ಲಿ ಈ ನಗರಕ್ಕೆ 'ಜಯಸಿಂಹ' ನಗರವೆಂದು ಹೆಸರನಿಟ್ಟು ಈತನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ಆ ಪ್ರಾಚೀನ ಕಾಲದಿಂದ ಈ ಭಾಗದ ಅನೇಕ ಹಳ್ಳಿಗಳು ವ್ಯಾಪಾರದ ಕೇಂದ್ರಗಳಾಗಿದ್ದವು. ಚಿಟಗುಪ್ಪಾ, ಹಳ್ಳಿಖೇಡ(ಬಿ), ಘಟ್ಟಿಬೋರವಳ್ಳಿ, ಕನಕಟ್ಟಾ ಮುಂತಾದ ಗ್ರಾಮಗಳಿಂದ ವ್ಯಾಪಾರ ಭರದಿಂದ

ನಡೆಯುತ್ತಿತ್ತು. ಅನೇಕ ವ್ಯಾಪಾರಗಳು ಎಣಿಕೆ ಸಂಘಗಳನ್ನು ಕಟ್ಟಿಕೊಂಡು ಸುಮಾರು ೫೦೦ ರಿಂದ ಸಾವಿರ ಹೇರೆತ್ತುಗಳನ್ನು ಬಳಸಿಕೊಂಡು ದೂರು ದೂರದ ನಗರಗಳಿಂದ ಅವಶ್ಯಕ ವಸ್ತುಗಳು ಪೂರೈಸುತ್ತಿದ್ದರು, ಅಮರಾವತಿಯಿಂದ ಸಕ್ಕರೆ, ಕುಂಟಾದಿಂದ ಬಂಗಾರ, ಹೈದ್ರಾಬಾದದಿಂದ ಉಪ್ಪು ಹೀಗೆ ಅನೇಕ ಭಾಗಗಳಿಂದ ಸರಕುಗಳು ಹೇರೆತ್ತಿನ ಮೇಲೆ ಹಾಕಿಕೊಂಡು ೫-೬ ತಿಂಗಳವರೆಗೆ ಪ್ರಯಾಣಿಸಿ - ವ್ಯಾಪಾರದಲ್ಲಿ ತೋಡಗಿರುತ್ತಿದ್ದರು.

ಚಾಲುಕ್ಯ ಮೂರನೆಯ ತೈಲಪನ ನಂತರ ಕಳಚೂರಿ ಬಿಜ್ಜಳನು ಅಧಿಕಾರಕ್ಕೆ ಬಂದನು. ಇವನು ಆಳ್ವಿಕೆಯು ಶಾಂತಿ, ಸ್ಥಿರತೆಗಳು ಕಳೆದುಕೊಂಡು ಪ್ರಜೆಗಳು ನೆಮ್ಮದಿಯಿಂದ ಇರದಿದ್ದರೂ ಕೂಡ ಕರ್ನಾಟಕ ಇತಿಹಾಸ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಹತ್ವಪೂರಿತ ಅಧ್ಯಾಯನವೆನಿಸಿತು. ಬಿಜ್ಜಳನ ಮಹಾಮಂತ್ರಿಗಳಾದ ಬಸವಣ್ಣನವರು ರಾಜ್ಯದ ಅನುಭವ ಮಂಟಪವೆಂಬ ಧಾರ್ಮಿಕ ಸಂಸತ್ತನ್ನು ಕಟ್ಟಿ ಬೆಳೆಸಿದರು. ಅನುಭವ ಮಂಟಪಕ್ಕೆ ಅಲ್ಲಮ ಪ್ರಭುಗಳನ್ನು ಅಧ್ಯಕ್ಷರನ್ನಾಗಿ ಮಾಡಿದರು. ಆರ್ಥಿಕ, ಸಾಮಾಜಿಕ ಹಾಗೂ ಸಂಸ್ಕೃತಿಕ ಬೆಳವಣಿಗೆಯೊಂದಿಗೆ ದಾರ್ಮಿಕತೆಯಲ್ಲಿ ಹೊಸ ಅಧ್ಯಾಯ ಪ್ರಾರಂಭಿಸಿದರು, ವೀರಶೈವ ಧರ್ಮ ಪುನರುಜ್ಜೀವನಗೊಳಿಸಿದರು ಅನುಭವ ಮಂಟಪದಲ್ಲಿ ನೂರಾರು ಶರಣರು ಪ್ರತಿನಿತ್ಯ ಸೇರಿಕೊಂಡು ಜೀವನದ ಮೌಲ್ಯಗಳಾದ ಸತ್ಯ, ಅಹಿಂಸೆ, ಪರೋಪಕರ, ಭಕ್ತಿ, ಜ್ಞಾನ ಹಾಗೂ ವೈರಾಗ್ಯಗಳ ಬಗ್ಗೆ ಚಿಂತನೆ ನಡೆಸುತ್ತಿದ್ದರು. ತಮಗೆ ಹೊಳೆದ ಮಾತಿನ ವಿಚಾರಗಳು ವಚನಗಳೆಂಬ ಹೆಸರಿನಲ್ಲಿ ಬರದಿಡುತ್ತಿದ್ದರು. ಎಲ್ಲಾ ಶರಣರು ರಚಿಸಿದ ಇಂತಹ ವಚನ ಸಾಹಿತ್ಯವೇ ಇಂದು ವಿಶ್ವ ಸಾಹಿತ್ಯಕ್ಕೆ ಕನ್ನಡ ನಾಡು ನೀಡಿದ ವಿನೂತನ ಕೊಡುಗೆಯಾಗಿದೆ.

ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ನಾಡಿನ ನಾನಾ ಭಾಗಗಳಿಂದ ಅನೇಕ ಶರಣರು ಕಲ್ಯಾಣಕ್ಕೆ ಬಂದು ಅನುಭವ ಮಂಟಪದ ಸದಸ್ಯರಾದರು, ಕಾಶ್ಮೀರದ ಅರಸ ಮೋಳಿಗೆ ಮಾರಯ್ಯಾ, ಅಪಘಾನಿಸ್ತಾನ ದಿಂದ ಮರುಳ ಶಂಕರದೇವ ನಂತಹ ಶರಣರು ಅಣ್ಣನ ಆಶ್ರಯದಲ್ಲಿ ಕಾಯಕ ನಿಷ್ಠೆಯನ್ನು ಕೈಕೊಂಡು ಬದುಕು ಹಸನಗೊಳಿಸಿದರು. ಹುಮನಾಬಾದ ತಾಲ್ಲೂಕಿನ ಗಡವಂತಿ ಗ್ರಾಮದ ಮುಗ್ಧ ಸಂಗಯ್ಯಾ, ಹಳ್ಳಿಖೇಡ (ಕೆ) ಗ್ರಾಮದ ಶರಣ ಬೊಮ್ಮಣ್ಣ, ಮೋಳಕೇರಾದ ಮೋಳಿಗೆ ಮಾರಯ್ಯ, ಘಟ್ಟಿ ಬೋರವಳ್ಳಿಯ ಘಟ್ಟಿವಾಳಯ್ಯ, ಪ್ರಮುಖರಾಗಿದ್ದಾರೆ ಹುಮನಾಬಾದ ನಗರದಲ್ಲಿ ೧೦೧ ಮಠಗಳಿದ್ದವೆಂದು ತಿಳಿದು ಬರುತ್ತದೆ. ಈ ಮಠಗಳೆಲ್ಲ ಹೀರೆಮಠ ಎಂಬುವದರ ಆಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಕರೆನಮಠ, ಮುರುಘ ಮಠ, ಹುಲಕಂತಿ ಮಠ, ಟೆಂಕಸಾಲಿಮಠ ಮುಂತಾದವು

ಪ್ರಸಿದ್ಧವಾಗಿದ್ದವು, ಈ ಎಲ್ಲಾ ಧಾರ್ಮಿಕ ಚಟುವಟಿಕೆಗಳಿಂದ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ರಂಗಳಲ್ಲಿ ಮಹತ್ತರ ಬದಲಾವಣೆಯುಂಟಾಯಿತು. ಕುಲ, ಜಾತಿ, ಧರ್ಮಗಳಿಗೆ ಹೊಸ ಅರ್ಥ ಹುಟ್ಟಿಕೊಂಡು ಸರ್ವ ಸಮಾನತೆಗೆ ಈ ಕಾಲ ನಾಂದಿಯಾಯಿತು.

ಕಲ್ಯಾಣದ ಕಲಚೂರಿಗಳ ನಂತರ ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ಬಹುಮನಿ ಬರೀದಶಾಹಿ ಮನೆತನಗಳು ಈ ಪ್ರದೇಶವನ್ನು ಆಳಿದವು ಬಹುಮನಿಯ ಅರಸರಲ್ಲಿ ಮೂರನೆ ಮಹಮ್ಮದ ಶಹನ ಕಾಲ ಅವರ ಮನೆತನದ ಕೀರ್ತಿ ಹೆಚಲು ಕಾರಣವಾಯಿತು. ಅವನ ಮಂತ್ರಿ ಮಹ್ಮದ ಗವಾನ ತುಂಬ ಚತುರನಾಗಿದ್ದನು. ಬಹುಮನಿ ಅರಸರ ಕಾಲದಲ್ಲಿ ಈ ಪ್ರದೇಶ ಸಂಪತ್ ಭರಿತವಾಗಿತ್ತು. ಇವರ ನಂತರ ಔರಂಗಜೇಬನು ಸ್ವಲ್ಪ ಕಾಲ ಈ ಭಾಗ ಆಳಿದನು. ಕ್ರಿ.ಶ ೧೭೦೮ರಲ್ಲಿ ಮರಾಠರು ಆಳಿದುರ. ಔರಂಗಜೇಬನ ಮರಣದ ನಂತರ ಮರಾಠಾ ರಾಜ್ಯದಲ್ಲಿ ಆಂತರೀಕ ವ್ಯವಹಾರಲ್ಲಿದ್ದ ಭಯ ತಪ್ಪಿ ಹೋಗಿ ಪೂರ್ಣ ಸ್ವಾತಂತ್ರ್ಯ ದೊರಕಿತು. ಮೋಘಲ್ ಸಾಮ್ರಾಜ್ಯದ ಸಾರ್ವಭೌಮತ್ವನ್ನು ಮಾನ್ಯತೆ ಮಾಡುವೆನೆಂಬ ಕರಾರಿನ ಮೇಲೆ ಮೊಘಲರು ಸಂಬಾಜಿಯ ಮಗ ಸಾಹುವನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದರು. ಅಲ್ಲದೇ ಮರಾಠರು ದಕ್ಷಿಣದ ಆರು ಪ್ರಾಂತಗಳ ಚೌಥಾಯ ವಸೂಲಿ ಮಾಡಲು ಮೊಘಲರು ಅನುಮತಿ ಕೊಟ್ಟರು ಕ್ರಿ.ಶ. ೧೭೦೮ ರ ಜನೆವರಿ ೧೨ರಲ್ಲಿ ಸಾಹು ಪಟ್ಟಕ್ಕೆರಿದನು. ಗಂಗಾಧಾರ ಪ್ರಲ್ಹಾದನನ್ನು ತನ್ನ ಪ್ರತಿನಿಧಿಯನ್ನಾಗಿ ಬಾಜಿರಾಮಪಂತ ಪಿಂಗಳೆಯನ್ನು ಪೇಶ್ವೆಯನ್ನಾಗಿ ಹಾಗೂ ಧನಾಜಿ ಜಾಧಾವನನ್ನು ಸೇನಾಪತಿಯಾಗಿ ನೇಮಿಸಿಕೊಂಡನು.

ಧನಾಜಿ ಜಾಧವನು ನಿರಂತರ ಚೌಥಾಯ್ ಕರ ವಸೂಲಿ ಮಾಡಿದನು. ಆ ಸಮಯದಲ್ಲಿ ಹುಮನಾಭಾದ ನಗರಕ್ಕೆ ಹತ್ತಾರು ಸಲ ಬಂದು ಹೋದನು. ಇವನ ಮರಣದ ನಂತರ ಇವನ ಮಗ ಚಂದ್ರಸೇನ ಜಾಧವ ಸೇನಾಪತಿಯಾದನು. ಇವನು ಹುಮನಾಬಾದ ನಗರಕ್ಕೆ ಹಳೆಯ ಹೆಸರನ್ನೆ ಕೊಟ್ಟು 'ಜಯಸಿಂಹ ನಗರ' ವೆಂದು ಕರೆದನು. ಇವನು ನಂತರ ಇವನ ಮಗನಾದ ರಾಮಚಂದ್ರ ಜಾಧವನು ಹುಮನಾಬಾದ ನಗರವನ್ನು ಅಭಿವೃದ್ಧಿ ಪಡಿಸಿದನು, ಅವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಪಟ್ಟಣದ ಸುತ್ತಲೂ ಕೋಟೆ ಕಟ್ಟಿಸಿದನು.

ಕ್ರಿ.ಶ. ೧೯೪೮ರ ವರೆಗೆ ಈ ಪ್ರದೇಶವನ್ನು ನಿಜಾಮನು ಆಳಿದನು. ಆತನ ಆಳ್ವಿಕೆಯಲ್ಲಿ ಹುಮನಾಬಾದ ಪೈಗಾ ತಾಲ್ಲೂಕಾವಾಗಿತ್ತು. ಇದು ನಿಜಾಮನ ಸರ್ಫ-ಇ-ಖಾಸ್ ಆಗಿದ್ದು, ಇದರ ಉತ್ಪನ್ನ ನಿಜಾಮನ ಖಾಸಗಿ ಜೀವನಕ್ಕೆ ಸೇರುತ್ತಿತ್ತು. ಇದೇ ಸಮಯದಲ್ಲಿ ಚಿಟಗುಪ್ಪಾ ಕೂಡಾ ಪೈಗಾವಾಗಿತ್ತು. ನಿಜಾಮನ ಆಳ್ವಿಕೆಯಲ್ಲಿ

ಈ ಭಾಗ ಯಾವುದೇ ಅಭಿವೃದ್ಧಿ ಕಾಣದೆ ಹಾಳಾಯಿತು. ಕನ್ನಡ ಭಾಷೆಯ ಕೋಟೆಯೊಳಗೆ ಉರ್ದುಶಾಲೆಗಳು ಪ್ರಾರಂಭವಾದವು. ರಾಜಕೀಯ ಭಾಷೆ ಉರ್ದು & ಪರ್ಷಿಯನ್‌ಗಳಾಗಿದ್ದವು.

ನಿಜಾಮನ ಆಡಳಿತದಲ್ಲಿ ಖಾಸಿಂ ರಜ್ವಿ ಎಂಬುವವನ ನೇತೃತ್ವದಲ್ಲಿ ರಜಾಕರರು ಹಿಂದು ಜನರನ್ನು ನಾನಾ ರೀತಿಯಿಂದ ಪೀಡಿಸಲು ಪ್ರಾರಂಭಿಸಿದರು. ಇವರ ಅತ್ಯಾಚಾರಕ್ಕೆ ಬಲಿಯಾಗಿ ಅನೇಕರು ಪ್ರಾಣ ಕಳೆದುಕೊಂಡರು, ಸಾವಿರಾರು ಜನರು ಆಸ್ತಿ -ಪಾಸ್ತಿ ತೊರೆದು ಸೋಲ್ಲಾಪೂರ ಪೂನಾ ಹಾಗೂ ಮುಂಬಯಿಳಿಗೆ ಹೊರಟು ಹೋದರು. ಕ್ರಿ.ಶ. ೧೯೪೨ರಲ್ಲಿ ಹುಮನಾಬಾದ ಆರ್ಯ ಸಮಾಜದ ನೇತಾರರಾದ ಶಿವಚಂದ್ರಜಿ ನೆಲ್ಲಗಿ, ಲಕ್ಷ್ಮಣರಾವ, ರಾಮಜಿರಾವ ಹಾಗೂ ನರಸಿಂಗರಾವ ಮೊದಲಾದವರ ಕೊಲೆಗಳು ರಜಾಕರಿಂದಲೇ ನಡೆದವು ಚಿಟಗುಪ್ಪಾ ಪೈಗಾದಲ್ಲಿಯೂ ಕೂಡಾ ರಜಾಕಾರರು ಗದ್ದಲ ಪ್ರಾರಂಭಿಸಿದರು, ಇಷ್ಟರಲ್ಲಿ ದೇಶದ ತುಂಬೆಲ್ಲಾ ಸ್ವಾಂತಂತ್ರ್ಯದ ಚಳುವಳಿ ಪ್ರಾರಂಭವಾಗಿತ್ತು.

ಆರ್ಯ ಸಮಾಜದ ಕಾರ್ಯಕರ್ತರಾದ ಹಳ್ಳಿಖೇಡ(ಬಿ) ಗ್ರಾಮದ ಭಾಯಿ ಬನ್ಸಿಲಾಲ, ಬಾಯಿ ಶ್ಯಾಮಲಾಲರು ಹಳ್ಳಿ ಹಳ್ಳಿ ತಿರುಗಿ ಜನಜಾಗೃತಿ ಮಾಡಿದರು. ನಿಜಾಮನ ದೌರ್ಜನ್ಯ, ರಜಾಕರರ ಅತ್ಯಚಾರವನ್ನು ಪ್ರತಿಭಟಿಸಿ ಚಳುವಳಿ ಪ್ರಾರಂಭಿಸಿದರು. ನಿಜಾಮ ಸರಕಾರದಲ್ಲಿ ಇಂಗ್ಲೀಷ ಭಾಷೆ ಶಿಕ್ಷಕರಾದ ಶಿವಚಂದ್ರಜಿ ನೆಲ್ಲಗಿಯವರು ಉತ್ತಮ ಸಂಘಟಕರಾಗಿದ್ದರು. ದೇಶ ಪ್ರೇಮಿಗಳಾಗಿದ್ದರು. ಭಾರತ ಸ್ವಾತಂತ್ರ್ಯಕ್ಕಾಗಿ ಅವರು ತಮ್ಮ ಪ್ರಾಣವನ್ನೆ ಬಲಿಕೊಟ್ಟು ಅದನ್ನು ದೊರಕಿಸಿಕೊಟ್ಟರು ಕ್ರಿ.ಶ. ೧೯೩೮ ರಲ್ಲಿಯೇ ಹುಮನಾಬಾದ ನಗರದಲ್ಲಿ ನವ ತರುಣರ ತಂಡವೊಂದು ಗುಂಪುಗೂಡಿ ಸಮಾಜದಲ್ಲಿ ನಡೆದ ಅನ್ಯಾಯದ ವಿರುದ್ಧ ಹೊರಾಡಲು ತೈಯಾರಾಯಿತು. ಈ ಹೋರಾಟ ಸ್ವಾತಂತ್ರ್ಯದಡಿಯಲ್ಲಿದ್ದು ನಿಜಾಮನ ವಿರುದ್ಧವಾಗಿತ್ತು. ಇಂತಹ ತುರಣರಲ್ಲಿ ಶ್ರೀ ಲಕ್ಷ್ಮಣರಾವ ವೀರಪ್ಪ, ಶ್ರೀ ರಾಮಚಂದ್ರ ವೀರಪ್ಪಾ (ಎಂ.ಪಿ) ಕಲ್ಲಪ್ಪ ದೇವಣಿ, ಸದ್ಯೋಜಿ ಸುಣಗಾರ, ಶಿವಲಿಂಗಯ್ಯ ಜಡೆನ್ ಮಠ, ವಿಠಲ್‌ರಾವ ಹಜಾಮ ಹಾಗೂ ಪುಂಡಲಿಕ ಮುಖ್ಯರಾಗಿದ್ದರು. ಈ ಭಾಗದ ಜನರಿಗೆ ರಾಜಕೀಯ ಪ್ರಜ್ಞೆ ಉಂಟು ಮಾಡಿ ನಿಜಾಮನ ವಿರುದ್ಧ ಹಾಗೂ ಖಾಸೀಂ ರಜ್ವಿಯ ರಜಾಕರರ ವಿರುದ್ಧ ಹೋರಾಡಲು ಕಲಿಸಿದ ಸಂಸ್ಥೆಯೆಂದರೆ ಆರ್ಯ ಸಮಾಜ ಎಂದು ಹೇಳಬಹುದು ೧೯೪೮ ಸೆಪ್ಟೆಂಬರ ೧೭ರಂದು ಅಂದರೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು ಒಂದು ವರ್ಷಕ್ಕೆ ಈ ಭಾಗ ನಿಜಾಮನ ಕಪಿಮುಷ್ಠಿಯಿಂದ ಪಾರಾಯಿತು. ಪೋಲಿಸ್ ಕಾರ್ಯಾಚರಣೆಯು ಈ ಭಾಗದ ಒಂದು ಘಟನೆಯಾಗಿ ಇತಿಹಾಸದ ಪುಟಕ್ಕೆ ಸೇರಿತು.

ನಗರ ರಚನೆ –ಸಂಸ್ಕೃತಿ :–

ಬೀದರ ನಗರದ ಪಶ್ಚಿಮ ಭಾಗದಲ್ಲಿ ಸುಮಾರು ೫೦ ಕಿ.ಮೀ ಅಂತರದಲ್ಲಿ ಹುಮನಾಬಾದ ನಗರವಿದೆ. ಈ ನಗರದ ಜನಸಂಖ್ಯೆಯು ಕ್ರಿ.ಶ. ೨೦೦೧ರ ಜನಗಣತಿಯ ಪ್ರಕಾರ ೨,೯೪,೪೧೩ ಇದೆ. ಹಿಂದೆ ಈ ಊರಿಗೆ ಜಯಸಿಂಹ ನಗರವೆಂದು ಹೆಸರಿತ್ತು. ನಂತರದಲ್ಲಿ ಮುಸ್ಲಿಂರ ಆಳ್ವಿಕೆಯಲ್ಲಿ ಹುಮನಾಬಾದ ಎಂಬ ಹೆಸರಾಯಿತು. ಚಾಲುಕ್ಯ ಅರಸನಾದ ಎರಡನೆ ಜಯಸಿಂಹನ ಕಾಲದಲ್ಲಿಯೇ ಈ ಊರು ರಚನೆಗೊಂಡು ಪ್ರಸಿದ್ದ ವ್ಯಾಪಾರ ಕೇಂದ್ರವಾಯಿತು. ಸಾಹು ಮಹಾರಾಜನ ಮಂತ್ರಿಯಾದ ಧನಾಜಿ ಜಾಧವ, ಅವನ ಮಗ ಚಂದ್ರಸೇನ ಜಾಧವರ ಕಾಲದಲ್ಲಿ ಈ ನಗರ ಪುನರುಜ್ಜೀವನ ಪಡೆಯಿತು. ಮುಂದೆ ರಾಮಚಂದ್ರ ಜಾಧವನು ಈ ನಗರವನ್ನು ಪಗಡೆ ಬಜಾರಿನ ಮಾದರಿಯಲ್ಲಿ ರಚಿಸಿ ಹರಪ್ಪ ಪಟ್ಟಣದಂತೆ ಓಣಿ ಓಣಿಗಳಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿಸಿದನು. ನಗರದ ಸುತ್ತಲೂ ಭದ್ರವಾದ ಕೋಟೆ ಕಟ್ಟಿಸಿ ೫ ಅಗಸಿಗಳು ಬಿಡಿಸಿದನು. ಹಣಕುಣಿ ಅಗಸಿ, ಚಿಟಗುಪ್ಪಾ ಅಗಸಿ, ಕಲಬುರ್ಗಿಅಗಸಿ, ಭಾಲ್ಕಿ ಅಗಸಿ, ಹಾಗೂ ದೇವರ ಅಗಸಿ ಎಂದು ಅವುಗಳ ಪ್ರಸಿದ್ಧವಾಗಿದ್ದವು ಸುಂದರವಾಗಿ ನಿರ್ಮಿಸಲಾಗಿದೆ. ಈ ದೇವಾಲಯ ಹತ್ತಿರವೇ ಅರಸನ ಅರಮೆನಯು ಇಲ್ಲಿಯವರೆಗೆ ಇತ್ತು. ಆದರೆ ಅದನ್ನು ಈಗ ನಾಶಪಡಿಸಿ ಅದರ ಸ್ಥಳದಲ್ಲಿ ಕಲ್ಯಾಣ ಮಂಟಪ ಕಟ್ಟುವ ಯೋಜನೆ ನಡೆದಿದೆ.

ಹುಮನಾಬಾದ ನಗರವು ರಾಷ್ಟ್ರೀಯ ಹೆದ್ದಾರಿ ಒಂಬತ್ತರ ಮೇಲೆ ನೆಲೆಸಿದ್ದು ಈಗ ಭರದಿಂದ ಬೆಳೆಯುತ್ತಿದೆ, ನಗರ ಸಭೆಯವರು ವಿವಿಧ ಬಡವಾಣೆಗಳು ರಚಿಸಿ ಆಧುನಿಕ ಸೌಲಭ್ಯವುಳ್ಳ ಮನೆ ನಿರ್ಮಸಿಕೊಳ್ಳಲು ಸಹಕರಿಸುತ್ತಿದ್ದಾರೆ. ಹುಮನಾಬಾದ ನಗರದ ಸುತ್ತಲು ಎರಡು –ಮೂರು ,ಕಿ.ಮೀ ಅಂತರದವರೆಗೆ ನಗರವು ಬೆಳೆದು ನಿಂತಿದೆ. ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಕಾರವು ೪ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹಳ್ಳಿಖೇಡ (ಕೆ) ಗ್ರಾಮದಿಂದ ಪೂರೈಸುತ್ತಿದೆ. ಹಲವಾರು ಖಾಸಗಿ ಶಿಕ್ಷಣ ಸಂಸ್ಥೆಗಳು ನಗರದಲ್ಲಿ ದಂತ ಮಹಾವಿದ್ಯಾಲಯ, ಫಾರ್ಮಸಿ ವಿದ್ಯಾಲಯ, ಪದವಿ ಮಹಾವಿದ್ಯಾಲಯ, ಆರ್ಯವೇದ ಮಹಾವಿದ್ಯಾಲಯಗಳು, ಪ್ರಾರಂಭಿಸಿದೆ ವೃತಿ ಶಿಕ್ಷಣ ಶಾಲೆಗಳು ದೈಹಿಕ ತರಬೇತಿ ಕೇಂದ್ರಗಳು, ಮೊದಲಾದವು ಶಿಕ್ಷಣ ರಂಗವನ್ನು ಅಭಿವೃದ್ಧಿ ಪಡಿಸಿದೆ.

ಬೆಳೆಯುತ್ತಿರುವ ಈ ನಗರದಲ್ಲಿ ಸರಕಾರದ ಎಲ್ಲಾ ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ಮಾದರಿಯಾದ ಸಾರಿಗೆ ಸಂಸ್ಥೆಯ ವಾಹನ ಚಾಲಕ ತರಬೇತಿ ಕೇಂದ್ರ ಈ ನಗರದಲ್ಲಿದೆ ಸಣ್ಣ ಕೈಗಾರಿಕೆಯ ವಲಯವು ಹುಮನಾಬಾದ –ಗುಲ್ಬರ್ಗಾ ರಾಜ್ಯ ಮಾರ್ಗದ ಹತ್ತಿರ

ಬೃಹತಕಾರವಾಗಿ ಬೆಳೆಯುತ್ತಿದೆ. ಬೀದರ ಜಿಲ್ಲೆಯಲ್ಲಿಯೇ ಪ್ರಥಮವಾದ ಈಜುಕೊಳ ಪಕ್ಕದ ಮಾಣಿಕ ನಗರ ಗ್ರಾಮದಲ್ಲಿ ನಿರ್ಮಾಣವಾಗಿದೆ. ಕೇಂದ್ರ ಸರಕಾರವು ಮಂಜೂರು ಮಾಡಿದ ರೇಲ್ವೆ ಮಾರ್ಗವು (ಬೀದರ –ಗುಲ್ಬರ್ಗಾ) ಹುಮನಾಬಾದ ನಗರದಿಂದಲೆ ಹಾಯ್ದು ಹೋಗುತ್ತಿದೆ. ಇದರಿಂದ ವ್ಯಾಪಾರ ವ್ಯವಹಾರ ಭರದಿಂದ ಬೆಳೆಯಲು ಅನುಕೂಲವಾಗುತ್ತದೆ.

ಹುಮನಾಬಾದ ನಗರ ಸಭೆಯು ಊರಲ್ಲಿಯ ಹೆದ್ದಾರಿಯನ್ನು ಜೋಡು ರಸ್ತೆಯಾಗಿ ನಿರ್ಮಿಸಿ ಮಧ್ಯದಲ್ಲಿ ಉನ್ನತ ಪ್ರಖರ ಬೆಳಕಿನ ವಿದ್ಯುತ್ ದೀಪಗಳು ಕೂಡಿಸಲು ಕಾರ್ಯೋನ್ಮುಖವಾಗಿದೆ. ನಗರದಲ್ಲಿ ಒಳ್ಳೆಯ ಉದ್ಯಾನವನ ನಿರ್ಮಿಸುವಲ್ಲಿಯೂ ಅದು ಪ್ರಯತ್ನಿಸುತ್ತಿದೆ. ಇದೀಗ ನಿರ್ಮಾಣಗೊಂಡು ಉದ್ಘಾಟನೆಯ ದಾರಿ ನೋಡುತ್ತಿರುವ ಪುರಸಭೆಯ ಕಟ್ಟಡ ತೇರ ಮೈದಾನದ ಪಕ್ಕದಲ್ಲಿ ತನ್ನ ವೈಭವ ಮರೆಯುತ್ತಿದೆ. ತಹಸೀಲ ಕಾರ್ಯಲಯದ ಎದುರುಗಡೆ ಮಿನಿ ವಿಧಾನ ಸಭೆಯು ನಿರ್ಮಾಣ ಹಂತದಲ್ಲಿದೆ. ಹೀಗೆ ನಗರ ಪ್ರಗತಿಯ ಪಥದಲ್ಲಿವೆ.

ಒಕ್ಕಲುತನ :–

ಈ ತಾಲ್ಲೂಕಾ ವ್ಯವಸಾಯ ಪ್ರಧಾನವಾದ ತಾಲ್ಲೂಕು ಇಲ್ಲಿ ನೂರಕ್ಕೆ ಎಪ್ಪತ್ತೈದು ಜನರು ಒಕ್ಕಲುತನವನ್ನೆ ಅವಲಂಬಿಸಿದ್ದಾರೆ. ಈ ತಾಲ್ಲೂಕಿನಲ್ಲಿ ಯಾವುದೇ ನೀರಾವರಿ ಯೋಜನೆ ಇಲ್ಲ. ಹೀಗಾಗಿ ವ್ಯವಸಾಯ ಮಳೆಯನ್ನು ಆಶ್ರಯಿಸಿದೆ, ಅಲ್ಲಲಿ ತೆರೆದ ಬಾವಿಗಳಿಂದ ತೋಟಗಾರಿಕೆ ಕಾರ್ಯನಡೆಯುತ್ತಿದೆ. ಮಳೆ ಆಧಾರಿತ ಬೆಳೆಗಳೆಂದರೆ ಜೋಳ, ಸಜ್ಜೆ, ತೊಗರಿ, ನವಣೆ, ಉದ್ದು, ಹೆಸರು, ಕಡಲೆ ಹಾಗೂ ತೃಣಧಾನ್ಯಗಳು ನೀರಾವರಿಯಿಂದ ಕಬ್ಬು, ಭತ್ತ ಹಾಗೂ ಕಾಯಿಪಲ್ಲೆಗಳು ಬೆಳೆಯುತ್ತಾರೆ. ಇತ್ತಿಚಿಗೆ ವಾಣಿಜ್ಯ ಬೆಳೆಗಳಾದ (ಹಸಿ ಶುಂಠಿ), ಅರಿಸಿ, ಗೋಬಿ, ಬಾಳೆ, ಎಣ್ಣೆ ಕಾಳುಗಳು ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ದ್ರಾಕ್ಷಿ, ರೇಷ್ಮೆ ಬೆಳೆಗಳು ಕೂಡ ರೈತರು ಬೆಳೆಯಲು ಪ್ರಾರಂಭಿಸಿದ್ದಾರೆ. ಈ ತಾಲ್ಲೂಕಿನ ಚಿಟ್ಟಗುಪ್ಪ, ಹುಡುಗಿ, ನಂದಗಾವ ಮೊದಲಾದ ಊರುಗಳು ತರಕಾರಿ ಬೆಳೆಗಳಗೆ ಪ್ರಸಿದ್ಧಿಯಾಗಿವೆ.

ಒಟ್ಟು ೪೬,೩೦೦ ಹೆಕ್ಟೇರ್‌ಗಳಷ್ಟು ಬೆಳೆ ಬೆಳೆಸಲು ಗುರಿ ಇಟ್ಟು ಕೊಂಡು ೪೫,೦೩೮ ಹೆಕ್ಟೇರ್‌ಗಳಷ್ಟು ಸಾಧನೆ ಮಾಡುವ ಈ ತಾಲ್ಲೂಕಿನ ರೈತರು ತುಂಬಾ ಶ್ರಮ ಜೀವಿಗಳು, ಒಕ್ಕಲುತನಕ್ಕೆ ರೈತರು ಹೆಚ್ಚಾಗಿ ತಿಪ್ಪೆಗೊಬ್ಬರ ಉಪಯೋಗಿಸುತ್ತಾರೆ, ಈ ಗೋಬ್ಬರ ಹಾಗೂ ಹೈನುಗಾರಿಕೆಯ ಸಲುವಾಗಿ ಎತ್ತು, ಎಮ್ಮೆ, ಆಕಳುಗಳು ಸಾಕುತ್ತಾರೆ. ಕುರಿಗಳು ಹಾಗೂ ಕೋಳಿಗಳ ಗೋಬ್ಬರ ಕೂಡ ಹೊಲಗಳಿಗೆ

ಬಳಸಲಾಗುತ್ತಿದೆ. ವ್ಯವಸಾಯ ಈ ಭಾಗದಲ್ಲಿ ಹೆಚ್ಚಾಗಿ ಎತ್ತುಗಳಿಂದಲೆ ನಡೆಯುತ್ತದೆ. ಇತ್ತೀಚಿಗೆ ಭೂಮಿ ಉಳಲು ಟ್ರ್ಯಾಕ್ಟರ್ ಯಂತ್ರಗಳ ಬಳಕೆ, ರಾಶಿ ಮಾಡಲು ಯಂತ್ರಗಳ ಬಳಕೆ ಅಧಿಕವಾಗುತ್ತಿದೆ. ಪಶು ಸಂಗೋಪನೆಯು ಒಕ್ಕಲುತನದ ಇನ್ನೊಂದು ಭಾಗವಾಗಿದೆ. ಹೈನುಗಾರಿಕೆಯಿಂದ ಹಾಲಿನ ಉದ್ಯಮ ಹಳ್ಳಿಗಳಿಂದ ಪಟ್ಟಣಗಳ ವರೆಗೆ ಭರದಿಂದ ಸಾಗಿದೆ. ಈ ತಾಲ್ಲೂಕಿನ ಹುಡುಗಿ ಗ್ರಾಮವು ಹಾಲಿನ ಉದ್ಯಮದ ಪ್ರಮುಖ ಕೇಂದ್ರವಾಗಿದೆ. ಇಲ್ಲಿಂದ ಹಾಲು ಪ್ರತಿನಿತ್ಯ ಗುಲ್ಬರ್ಗಾಕ್ಕೆ ಸರಬರಾಜು ಆಗುತ್ತದೆ.

ಈ ತಾಲ್ಲೂಕು ಮಳೆಯಾಶ್ರೀತ ವ್ಯವಸಾಯ ಮಾಡುತ್ತಿರುವ ಕಾರಣ ಸರಕಾರವು ರೈತಾಪಿ ಜನರಿಗೆ ಯೋಗ್ಯ ರೀತಿಯ ಬೆಳೆ ಬೆಳೆಯಲು ಸಲಹೇ ಸೂಚನೆಗಳು ಕೊಡಲು ಗ್ರಾಮ ಸೇವಕರನ್ನು ನೇಮಕ ಮಾಡಿದೆ. ಇವರು ಉತ್ತಮ ಬೀಜಗಳು, ಯಂತ್ರಗಳು, ಕೃತಕ ಗೋಬ್ಬರಗಳು, ಕೀಟನಾಶಕಗಳು ಸುಲಭ ಬೆಲೆಯಲ್ಲಿ ಹಾಗೂ ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸಲು ಸಹಾಯಕರಾಗಿದದರೆ, ರೈತರ ಆರ್ಥಿಕ ಸಹಾಯಕ್ಕಾಗಿ, ಸೇವಾ ಸಹಕಾರ ಬ್ಯಾಂಕಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು, ಇತರ ಖಾಸಗಿ ಸಂಘ ಸಂಸ್ಥೆಗಳು ವ್ಯವಸ್ಥಿತ ರೀತಿಯಲ್ಲಿ ಕಾರ್ಯ ಮಾಡುತ್ತಿವೆ. ಕಬ್ಬಿನ ಬೆಳೆಯನ್ನು ಸಕಾಲಕ್ಕೆ ಕಟಾವು ಮಾಡಿ ಸಕ್ಕರೆ. ಕಾರ್ಖಾನೆಗಳು ರೈತರಿಗೆ ಕಬ್ಬು ಸಾಗಿಸಲು ಅನುಕೂಲ ಮಾಡಿಕೊಟ್ಟಿವೆ ಬೀದರ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ಹಾಗೂ ನಾರಂಜಾ ಸಕ್ಕರೆ ಕಾರ್ಖಾನೆಗಳು ಈ ವರ್ಷದಿಂದ ಕಾರ್ಯ ಪ್ರಾರಂಭಿಸುತ್ತಿವೆ. ಒಟ್ಟಾರೆ ಕೃಷಿ ಉತ್ಪನ್ನ ಹೆಚ್ಚಿಸಿ ರೈತರ ಆರ್ಥಿಕ ಸ್ಥಿತಿ ಉತ್ತಮ ಪಡಿಸಲು ಸರಕಾರ ಪ್ರಯತ್ನಿಸುತ್ತಿದೆ.

ಪಶುಸಂಗೋಪನೆ :–

ಒಕ್ಕಲುತನ ಹಾಗೂ ಪಶು ಸಂಗೋಪನೆಯು ಒಂದೆ ನಾಣ್ಯದ ಎರಡು ಮುಖಗಳಿದ್ದಂತೆ ಒಕ್ಕಲುತನದಲ್ಲಿ ದನಕರುಳ ಪಾತ್ರ ಪ್ರಾಚೀನ ಕಾಲದಿಂದ ಮಹತ್ವದ ಸ್ಥಾನ ಪಡೆದಿದೆ. ಹಾಲಿನ ಉತ್ಪನ್ನಗಳಿಗೆ ದನಕರುಗಳೆ ಆಧಾರವಾಗಿದೆ. ಹುಮನಾಬಾದ ತಾಲೂಕಿನಲ್ಲಿ ೧೯೯೭ ಗಣತಿಯ ಪ್ರಕಾರ ಒಟ್ಟು ದನಗಳ ಸಂಖ್ಯೆ ೫೨,೮೧೮ ಇರುತ್ತವೆ. ಇವುಗಳಲ್ಲಿ ಎಮ್ಮೆಗಳು ೨೭, ೮೨೨ ಕರುಗಳಲು ೧೬,೪೦೮ ಆಡುಗಳು ೨೭,೯೦೩ ಕೋಳಿಗಳು, ೪,೩೧,೧೯೯ ಇರುತ್ತವೆ. ಒಕ್ಕಲುತನಕ್ಕೆ ಬೇಕಾಗುವ ಉತ್ತಮ ತಳಿಯ ಹೊರಿಗಳನ್ನು ಹಳ್ಳಿಖೇಡ (ಬಿ) ಹತ್ತಿರದ ದೇವಣಿ ಪಶು ಅಭಿವೃದ್ಧಿ ಕೇಂದ್ರಗಳಲ್ಲಿ ಬೆಳೆಸುತ್ತಾರೆ. ಇದಲ್ಲದೆ ಹಳ್ಳಿಯ ಜವರಿ ತಳಿಗಳು ಒಕ್ಕಲುತನದಲ್ಲಿ ಮೊದಲಿನಿಂದಲು ಬಳಸಲಾಗುತ್ತಿದೆ.

ಎಮ್ಮೆಗಳ ಸಂಖ್ಯೆ ಅಧಿಕವಾಗಿರುವದರಿಂದ ಹಾಗೂ ಜರ್ಸಿ ಹಸುಗಳ ಬಳಕೆಯಿಂಧ ಹಾಲು ಹೆಚ್ಚಾಗಿ ದೊರೆಯುತ್ತದೆ. ಆದಕಾರಣ ಹುಡುಗಿ ಕರಿಬಸವೇಶ್ವರ ಹಾಲು ಉತ್ಪಾದಕರ ಸಂಘ ಈ ಹಾಲನನು ಡ್ಯೆರಿಗಳಿಗೆ ಸಂಗ್ರಹಿಸಿ. ರಾಜ್ಯದ ಬೇರೆ ಬೇರೆ ಭಾಗಗಳಿಗೆ ಕಳಿಸುತ್ತದೆ. ತಾಲ್ಲೂಕಿನ ಕೋಳೀ ಫಾರ್ಮಗಳಲ್ಲಿ ಹೆಚ್ಚಾಗಿ ಹೈಬ್ರಿಡ್ ಕೋಳಿ ಸಾಕಾಣಿ ಅಭಿವೃದ್ದಿ ಹೊಂದುತ್ತಿದೆ. ಪಶುಗಳ ಚಿಕಿತ್ಸೆಗಾಗಿ ತಾಲ್ಲೂಕಿನಲ್ಲಿ ಪಶು ಆಸ್ಪತ್ರೆ, ಸಂಚಾರಿ ಪಶು ಚಿಕಿತ್ಸಾಲಯ ಪ್ರಾಥಮಿಕ ಪಶು ಚಿಕಿತ್ಸಾಲಯ, ಕೃತಕ ಗರ್ಭಧಾರಣೆ ಕೇಂದ್ರಗಳು ಹಾಗೂ ಪ್ರಧಾನ – ಗ್ರಾಮ ಯೋಜನೆಗಳು ಆರಂಭಿಸಲಾಗಿದೆ. ತಾಲ್ಲೂಕಿನ ಮನ್ನಾಏಖೇಳ್ಳಿ, ದುಬಲಗುಂಡಿ, ಚಿಟಗುಪ್ಪಾ ಕೋಡಂಬಲ್, ಬೇಮಳಖೇಡಾ, ಹಳ್ಳಿಖೇಡ (ಬಿ), ಘಾಟಬೋರಳ ಹಾಗೂ ನಿರ್ಣಾಗಳಲ್ಲಿ ಪಶು ಚಿಕಿತ್ಸಾಲಗಳು ಕಾರ್ಯ ನಿರ್ವಹಿಸುತ್ತಿವೆ

ಕೈಗಾರಿಕೆಗಳು :–

ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯು ಹುಮನಾಬಾದ ನಗರದ ಪಶ್ಚಿಮ ದಿಕ್ಕಿನಲ್ಲಿ ಗುಲ್ಬರ್ಗಾ ರಸ್ತೆಯ ಪಕ್ಕಾದಲ್ಲಿ ೬೫೦೦ ಎಕರೆ ಭೂಮಿಯನ್ನು ಸ್ವಾಧಿನ ಪಡಿಸಿಕೊಂಡಿದೆ ಅದೇ ರೀತಿ ಧುಮ್ಮನಸೂರ ಗ್ರಾಮದ ಹೊರವಲಯದಲ್ಲಿ ಬೀದರ ರಸ್ತೆಯ ಪಕ್ಕಕ್ಕೆ ಭೂಮಿಯನ್ನು ಖರೀದಿಸಿದೆ ಅಲ್ಲಿ ಸುಮಾರು ೧೧೭ಪ್ಲಾಟಗಳು ತಯಾರಿಸಿ ಕರ್ಣಗ್ಯಾಸ್ ಸಿಲೆಂಡರ್ ಮಾನ್ಯಪ್ಯಾಕ್ಚರಿಂಗ್ ಕಂಪನಿ ಸ್ಪೀನಿಂಗ್ ಮಿಲ್, ಸ್ಟೋನ್ ಪಾಲಿಸಿಂಗ್, ದಾಲಮಿಲ್, ಟೈರಗಳ ತಯಾರಿಕೆ ಮೊದಲಾದವುಗಳು ಪ್ರಾರಂಭವಾಗಿದೆ.

ಹುಮನಾಬಾದ ನಗರದ ವಾಂಜೀರಾ ಬಡಾವಣೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗೆ ಉತ್ತೇಜನ ಕೊಡಲು ಸರಕಾರದ ವತಿಯಿಂದ ಕುಟೀರಗಳು ಸ್ಥಾಪಿಸಲಾಗಿದೆ. ಇಲ್ಲಿ ರೇಷ್ಮೆ ನೂಲು ತೆಗೆಯುವ ಗಂಗಾ ಸಿಲ್ಕ ಇಂಡಸ್ಟ್ರೀಸ್ ಹಾಗೂ ಅತ್ಯುತ್ತಮ ರೀತಿಯ ಬ್ರ್ಯಾಂಡ್‌ವುಳ್ಳ ಸ್ಪೆನ್ಸರ್ ಬ್ರೆಡ್ ಕಾರ್ಖಾನೆಗಳು ಭರದಿಂದ ಕಾರ್ಯ ಪ್ರಾರಂಭಿಸಿವೆ. ಬಟ್ಟೆಗಳಿಗೆ ಬೇಕಾದ ಹುಕ್‌ಗಳ ಕಾರ್ಖಾನೆ, ಫರ್ನಿಚರ್ ಕಾರ್ಖಾನೆಗಳು ಕೂಡ ತಮಮ್ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತವೆ.

ಈ ತಾಲ್ಲೂಕಿನಲ್ಲಿ ಪ್ರಾರಂಭದಿಂದಲು ಗೃಹ ಕೈಗಾರಿಕೆಗಳು ಸಣ್ಣ ಪ್ರಮಾಣದಲ್ಲಿ ತಮ್ಮ ಕಾರ್ಯ ನಡೆಸುತ್ತ ಬಂದಿವೆ. ಅವುಗಳಲ್ಲಿ ಮುಖ್ಯವಾದವುಳೆಂದರೆ, ನೇಕಾರಿಕೆ, ಕಡ್ಡಿ ಪೆಟ್ಟಿಗೆ ತಯಾರಿಕೆ, ಸುಣ್ಣ ತಯಾರಿಕೆ,

ಕೆಲಸ ಚಮ್ಮಾರಿಕೆ, ಕುಂಬಾರಿಕೆ, ಬಡಿಗತನ, ಸಾಮಿಲ್ಸ, ದಾಲ್ ಮಿಲ್ಸ್ ಕಬ್ಬಿಣ ಸಾಮಾನು ಮಾಡುವುದು ಮುಂತಾದವು .

ತಾಲೂಕಿನ ಚಿಟಗುಪ್ಪಾ ಗ್ರಾಮದಲ್ಲಿ ಪ್ರಾಚೀನ ಕಾಲದಿಂದ ಕೈಮಗ್ಗದ ಬಟ್ಟೆಗಳು ತೈಯಾರಿಸಲಾಗುತ್ತದೆ. ಇಲ್ಲಿ ೧೭೫ ಕೈ ಮಗ್ಗಗಳಿವೆ. ಅದೇ ರೀತಿ ದುಬಲಗುಂಡಿಯಲ್ಲಿ ೭೫ ಹಾಗೂ ಹಳ್ಳಿಖೇಡ (ಬಿ) ಯಲ್ಲಿ ೮ ಮಗ್ಗಗಳಿವೆ. ಪ್ರಾರಂಭದಲ್ಲಿ ಪಿಟ್‌ಲೂಮ್ ಮಗ್ಗ ಹೊಂದಿದ್ದ ಈ ಊರುಗಳು ಈಗ ಫ್ರೇಂಲೂಮ್ ಮಗ್ಗಗಳು ಸರಕಾರದ ಸಹಾಯದಿಂದ ಪಡೆದಿರುತ್ತವೆ. ಚಿಟಗುಪ್ಪಾ ನಗರದಲ್ಲಿ ಕೈಮಗ್ಗ ಉದ್ಯಮ ಅಭಿವೃದ್ಧಿ ಪಡಿಸಲು ಸರಕಾರ ೩೦ ಕುಟೀರಗಳ ಕಾರ್ಯಗಾರ ಆರಂಭಿಸಿ ಅವರಿಗೆ ಯೋಗ್ಯ ಬೆಲೆಯಲ್ಲಿ ನೂಲು ಒದಗಿಸಿ, ತೈಯಾರಾದ ಬಟ್ಟೆಯನ್ನು ಯೋಗ್ಯ ಬೆಲೆಯಲ್ಲಿ ಖರೀದಿಸುವ ವ್ಯವಸ್ಥೆ ಮಾಡಲಾಗಿದೆ.

ಈ ತಾಲ್ಲೂಕಿನ ಮಿನಕೇರಾ ಗ್ರಾಮದಲ್ಲಿ ಹಾಲಿನಿಂದ ಖವಾ ತಯಾರಿಸುವ ಭಟ್ಟಿ ಇದೆ. ಇಲ್ಲಿ ತಯಾರಾದ ಖವಾ ಹೈದ್ರಾಬಾದ, ಸೋಲಾಪೂರ, ಮುಂಬೈವರೆಗೆ ತಲುಪತ್ತದೆ. ತಾಲ್ಲೂಕಿನಲ್ಲಿ ೬ ಸುಣ್ಣದ ಭಟ್ಟಿಗಳು ೫ ಕಡ್ಡಿ ಪೆಟ್ಟಿಗೆ ತಯಾರಿಸುವ ಕಾರ್ಖಾನೆಗಳು, ಕಾಲಾಸೋನಾ ಎಂಬ ಬಟ್ಟೆ ಒಗೆಯುವ ಸಾಬೂನು ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಇಲ್ಲಿಯ ಸಿಂಧನಕೇರಾದಲ್ಲಿ ಉಪ್ಪಿನ ಕಾಯಿ ಕಾರ್ಖಾನೆ ಮಾಣಿಕನಗರದಲ್ಲಿ ಹಪ್ಪಳ ತಯಾರಿಕೆ ತಮ್ಮ ಕಾರ್ಯಭರದಿಂದ ನಡೆಸುತ್ತಿವೆ.

ಚಿಟಗುಪ್ಪದಲ್ಲಿ ಚರ್ಮದ ಕೈಗಾರಿಕೆ ಮೊದಲಿನಿಂದಲೂ ತುಂಬಾ ಪ್ರಸಿದ್ಧಿ ಪಡೆದಿದೆ. ಇಲ್ಲಿನ ಕುಶಲ ಕರ್ಮಿಯೊಬ್ಬನು ೩೦ ಗ್ರಾಮ ತೂಕದ ಚಡಾವ್ ಎಂಬ ಚಪ್ಪಲಿಗಳು ತಯಾರಿಸಿ ಭಾರತದ ಪ್ರಥಮ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಅವರಿಗೆ ಪ್ರೀತಿಯ ಕಾಣಿಕೆಯಾಗಿ ಸಲ್ಲಸಿದ್ದನಂತೆ ಆದ ಕಾರಣ ಸರಕಾರ ಈ ಉದ್ಯಮ ಅಭಿವೃದ್ಧಿ ಪಡಿಸಲು ಧುಮ್ಮನಸೂರ ಗ್ರಾಮದಲ್ಲಿ ೩೦ ಚರ್ಮ ಹದ ಮಾಡುವ ಕಾರ್ಖಾನೆಗಳು ನಿರ್ಮಿಸಿವೆ. ಆದರೆ ಅವುಗಳು ಯಾರು ಉಪಯೋಗಿಸದೆ ಹಾಳುಬಿದ್ದು ಹೋಗಿವೆ.

ಹುಮನಾಬಾದ ನಗರವು ಕಬ್ಬಿಣದ ತಿಜೋರಿ ತೈಯಾರಿಸುವುದರಲ್ಲಿ ಉತ್ತರ ಕರ್ನಾಟಕದಲ್ಲಿ ತುಂಬಾ ಹೆಸರುವಾಸಿಯಾಗಿತ್ತು. ಇಲ್ಲಿಯ ತಿಜೋರಿಗಳಿಗೆ, ಕೀಲಿಗಳಿಗೆ, ಮಂಚಗಳಿಗೆ ತುಂಬಾ ಬೇಡಿಕೆ ಇದೆ ಬಾಲಾಜಿ ಹಾಗೂ ಮಾಣಿಕ ಪ್ರಭು ಮೆಟಲ್ ವರ್ಕ್ಸ ಶಾಪಗಳು ಇವುಗಳು ತೈಯಾರಿಸುತ್ತವೆ.

ಹುಮನಾಬಾದ ತಾಲ್ಲೂಕಿನಲ್ಲಿ ಕಬ್ಬು ಹೆಚ್ಚಾಗಿ ಬೆಳೆಯುವುದರಿಂದ ಹಳ್ಳಿಗಳಲ್ಲಿ ಬೆಲ್ಲ ತಯಾರಿಸುವ ಗಾಣಗಳಿದ್ದು ಈಗ ಅವುಗಳ ಸ್ಥಳದಲ್ಲಿ ಯಾಂತ್ರಿಕೃತ ಕ್ರಿಶ್ಚರ್‌ಗಳು ಬಂದಿವೆ. ಇವುಗಳಿಂದ ಕಡಿಮೆ ಸಮಯದಲ್ಲಿ ಹೆಚ್ಚು ಪ್ರಮಾಣದ ಬೆಲ್ಲ ತಯಾರಿಸುತ್ತಾರೆ. ಇಂತಹ ಕ್ರಿಶ್ಚರ್ ಯಂತ್ರಗಳು ತಾಲ್ಲೂಕಿನಲ್ಲಿ ಪ್ರತಿ ಹಳ್ಳಿಗಳಲ್ಲಿ ಇಂದು ಕಾಣಬಹುದಾಗಿದೆ. ಇದಲ್ಲದೆ ತಾಲ್ಲೂಕಿನಲ್ಲಿ ೩ ಖಾಂಡ ಸಾರಿ ಸಕ್ಕರೆ ಕಾರ್ಖಾನೆಗಳು ಹಾಗೂ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಸಕ್ಕರೆ ತಯಾರಿಕೆಯಲ್ಲಿ ನಿರತವಾಗಿವೆ. ಈ ತಲ್ಲೂಕಿನ ಕನಕಟ್ಟಾ ಗ್ರಾಮದಲ್ಲಿ ಕನಕಟ್ಟಾ ಬೋರಾ ಎಂಬ ಸಕ್ಕರೆ ತಯಾರಿಸುತ್ತಿದ್ದರು. ಅಲ್ಲದೆ ಬೆಲ್ಲ ತಯಾರಿಸುವ ಪ್ರತಿಯೊಂದು ಊರಿನಲ್ಲಿ ಬೆಲ್ಲದ ಕೆಂಪು ಸಕ್ಕರೆ, ಬೆಲ್ಲದ ಉಂಡಿಗಳು ತಯಾರಿಸುತ್ತಾರೆ. ದುಬಲಗುಂಡಿಯ ಬೆಲ್ಲದ ಉಂಡಿಗಳು ತುಂಬಾ ಪ್ರಸಿದ್ಧವಾಗಿವೆ. ಶ್ರೀ ವೀರಭದ್ರೇಶ್ವರ ಜಾತ್ರೆಯಲ್ಲಿ ಉಂಡಿಯ ಅಂಗಡಿಗಳು ಪ್ರಾರಂಭವಾಗಿ ಶಿವಾರಾತ್ರಿಯ ಹಬ್ಬದವರೆಗೆ ವ್ಯವಹಾರ ನಡೆಸುತ್ತವೆ.

ಹುಮನಾಬಾದ ನಗರದಿಂದ ಒಂದೇರಡು ಫರ್ಲಾಂಗ ಅಂತರದಲ್ಲಿ ಡೆಕ್ಕನ್ ಕೆಮಿಕಲ್ಸ್ ಫ್ಯಾಕ್ಟರಿ ಇದೆ. ತಾಲ್ಲೂಕಿನ ಹುಡಗಿ ಗ್ರಾಮದಲ್ಲಿ ಕರಿಬಸವೇಶ್ವರ ಹಾಲಿನ ಡೈರಿ ಇದೆ. ಚರ್ಮಕಾರರಿಗೆ ಕುಟೀರಗಳು ಹೆಣ್ಣು ಮಕ್ಕಳ್ಳಿಗೆ ಹೊಲಿಗೆ ಯಂತ್ರಗಳು, ಹಗ್ಗ ಮಾಡುವವರಿಗೆ ಹಗ್ಗದ ಯಂತ್ರಗಳು ಸರಕಾರದಿಂದ ಕಡಿಮೆದರದಲ್ಲಿ ಹಾಗೂ ಪುಕ್ಕಟೆಯಾಗಿ ಒದಗಿಸಲಾಗುತ್ತದೆ. ಅವರಿಗೆ ತರಬೇತಿಯನ್ನು ಕೊಡಲಾಗುತ್ತದೆ. ಈ ರೀತಿಯಾಗಿ ಹುಮನಾಬಾದ ನಗರವು ತನ್ನ ಕೈಗಾರಿಕೆ ಅಭಿವೃದ್ಧಿಯಲ್ಲಿ ಧಾಪುಗಾಲು ಇಡುತ್ತಿದೆ.

ಶಿಕ್ಷಣದ ಪ್ರಗತಿ :-

ಶಿಕ್ಷಣದ ಪ್ರಗತಿಯಲ್ಲಿ ರಾಜ್ಯದ ಇನ್ನುಳಿದ ಭಾಗಗಳಿಗಿಂತ ಈ ಭಾಗ ತುಂಬಾ ಹಿಂದುಳಿದಿದ್ದು ನಿಜಾಮನ ಆಡಳಿತದಲ್ಲಿ ಶಿಕ್ಷಣದ ಮಾಧ್ಯಮ ಉರ್ದು ಭಾಷೆಯಾಗಿತ್ತು. ಶಿಕ್ಷಣದ ಮಾಧ್ಯಮ ಉರ್ದುವಾದರೂ ಮೆನ ಮಾತು ಕನ್ನಡವಾಗಿತ್ತು. ೧೮೫೫ರಲ್ಲಿ ಆರಂಭವಾದ ನಿಜಾಮರ ಶಿಕ್ಷಣ ಖಾತೆಯು ಸುಮಾರು ೯೦ ವರ್ಷಗಳ ವರೆಗೆ ಕಾರ್ಯ ನಿರ್ವಹಿಸಿತು. ಇಲ್ಲಿ ಶಿಕ್ಷಕರಾದವರು ಹೆಚ್ಚಾಗಿ ಉರ್ದು ಬಲ್ಲವರೇ ಕಾಣಸಿಗುತ್ತಾರೆ. ನಿಜಾಮನ ಆಳ್ವಿಕೆಯಲ್ಲಿ ಉರ್ದುವಿನ ಜೋತೆಗೆ ಪರ್ಷಿಯನ್ ಭಾಷೆಯೂ ಕೂಡ ಚಲಾವಣೆಯಲ್ಲಿತ್ತು. ಮುಂದೆ ಇಂಗ್ಲೀಷರ ಕಾಲದಲ್ಲಿ ಶಿಕ್ಷಣದಲ್ಲಿ ಇಂಗ್ಲೀಷ ಭಾಷೆ ಕಲಿಯಲು ಅನುವು ದೊರೆಯಿತು. ೧೯೫೬ರಲಲಿ ಭಾಷಾವಾರು ಪ್ರಾಂತಗಳು ರಚನೆ ಯಾದ ಮೇಲೆ ಪ್ರತಿಯೊಂದು ರಾಜ್ಯದಲ್ಲಿ ಆಯಾ ಜನರ ಆಡು ಭಾಷೆವು ಶಿಕ್ಷಣದ ಅಧಿಕೃತ

ಭಾಷೆಯಾಗಿ ಹಳ್ಳಿ ಹಳ್ಳಿಗೆ ಕನ್ನಡ ಶಾಲೆಗಳು ಪ್ರಾರಂಭವಾದವು. ಈಗ ಹುಮನಾಬಾದ ತಾಲ್ಲೂಕಿನಲ್ಲಿ ೨೦ ಶಿಶು ವಿಹಾರಗಳು, ೨೧೧ ಅಂಗನವಾಡಿಗಳು, ೩೩ ಕಿರಿಯ ಪ್ರಾಥಮಿಕ ಶಾಲೆಗಳು, ೧೫೨ ಹಿರಿಯ ಪ್ರಾಥಮಿಕ ಶಾಲೆಗಳು, ೪೦ ಪ್ರೌಢ ಶಾಲೆಳು ಇವೆ. ಹುಮನಾಬಾದ ನಗರದಲ್ಲಿ ೧೦ ಚಿಟ್ಟಗುಪ್ಪಾದಲ್ಲಿ, ದುಬಲಗುಂಡಿ, ಬೇಮಳಖೇಡಾ, ತಾಳಮಡಗಿ, ಹಳ್ಳಿಖೇಡ(ಬಿ), ಮನ್ನಾಏಖೇಳ್ಳಿ, ನಿರ್ಣಾ, ಮತ್ತು ಹಳ್ಳಿಖೇಡ (ಕೆ), ಚಾಂಗಲೇರಾ, ಮುಂತಾದ ಗ್ರಾಮಗಳಲ್ಲಿನ ಕಿರಿಯ ಮಹಾವಿದ್ಯಾಲಯಗಳು ಸೇರಿ ಸುಮಾರು ೨೦ ಕಿರಿಯ ಮಹಾವಿದ್ಯಾಲಗಳು ಇವೆ. ವಿವೇಕಾನಂದ ಶಿಕ್ಷಣ ಸಂಸ್ಥೆ, ದೀಕ್ಷಾ ಭೂಮಿ ಶಿಕ್ಷಣ ಸಂಸ್ಥೆ, ಸಿದ್ದಗಂಗಾ ಶಿಕ್ಷಣ ಸಂಸ್ಥೆ, ಮತ್ತು ಸರಕಾರಿ ಪ್ರಥಮ ದರ್ಜೆಯ ಮಹಾವಿದ್ಯಾಲಯ ಹಿಡಿದುಕೊಂಡು ಹುಮನಾಬಾದ ಪಟ್ಟಣದಲ್ಲಿಯೇ ೫ ಮಹಾವಿದ್ಯಾಲಗಳಿವೆ. ಪಟ್ಟಣದ ಹೊರಗಡೆ ಹಳ್ಳಿಖೇಡ (ಬಿ) ಗ್ರಾಮದಲ್ಲಿನ ಅಂಬೇಡ್ಕರ್ ಮಹಾವಿದ್ಯಾಲಯ, ಚಿಟಗುಪ್ಪಾದಲ್ಲಿನ ಅಯ್ಯಪ್ಪಾ ಮಹಾವಿದ್ಯಾಲಯ ಹಾಗೂ ಸರಕಾರಿ ಪ್ರಥಮ ದರ್ಜೆಯ ಮಹಾವಿದ್ಯಾಲಯ ಮನ್ನಾಏಖೇಳ್ಳಿಯಲ್ಲಿನ ಚಂದ್ರಶೇಖರ ಪಾಟೀಲ ಮಹಾವಿದ್ಯಾಲಯ ಮಾಣಿಕ ನಗರದ ಮಾಣಿಕ ಪ್ರಭು ಮಹಾವಿದ್ಯಾಲಯ ಹೀಗೆ ಹುಮನಾಬಾದ ತಾಲ್ಲೂಕಿನಲ್ಲಿ ಒಟ್ಟ ೧೦ ಮಹಾವಿದ್ಯಾಲಯಗಳು, ಅದೇ ರೀತಿ ೦೫ ಡಿ.ಈಡ್ ಕಾಲೇಜು, ೦೫ ಬಿ,ಎಡ್ ಕಾಲೇಜು, ೦೧ ಎಮ್ಎಡ್ ಕಾಲೇಜು ಅದೇ ರೀತಿ ಎಮ್ಎಸ್‌ಡ್ಲ್ಯೂ ಕಾಲೇಜು, ೧ಎಮ್‌ಬಿಎ ಕಾಲೇಜು, ತಾಂತ್ರಿಕ ಶಿಕ್ಷಣ ನೀಡಲು ೧೦ ಕೈಗಾರಿಕಾ ತರಬೇತಿ ಕೇಂದ್ರಗಳು, ೦೧ ಜಿ.ಟಿ.ಟಿ.ಸಿ. ಕಾಲೇಜು, ೦೧ ಪಾಲಿಟೆಕ್ನಿಕ್ ಕಾಲೇಜು , ಸಹ ಇದೆ. ಹಾಗೇ ೦೧ ದಂತ ಮಹಾವಿದ್ಯಾಲಯ ೦೧ ಔಷಧ ಮಹಾವಿದ್ಯಾಲಯ, ೦೧ ನರ್ಸಿಂಗ್ ಕಾಲೇಜು ಸಹ ಇದೆ.

ಇಷ್ಟೆಲ್ಲಾ ಶಾಲಾ ಕಾಲೇಜುಗಳು ಇದ್ದರೂ ಕೂಡಾ ಶಿಕ್ಷಣ ಪ್ರಸಾರ, ಪ್ರಾಚಾರ ಭರದಿಂದ ನಡೆದರು ಕೂಡ ಸಾಕ್ಷರತೆಯ ಪ್ರಮಣ ಮಂದಗತಿಯಲ್ಲಿಯೇ ಇದೆ. ತಾಲ್ಲೂಕಿನಾದ್ಯಂತ ಸಾಕ್ಷರತೆಯ ಕೇಂದ್ರಗಳು ಪ್ರಾರಂಭಿಸಿ ಜನರಲ್ಲಿ ವಿದ್ಯೆಯ ಬಗ್ಗೆ ನವ ಚೈತನ್ಯ ಮೂಡಿಸಿವೆ. ಅನೇಕರನ್ನು ನವಸಾಕ್ಷರರನ್ನಾಗಿ ಪರಿವರ್ತಿಸುವ ಕಾರ್ಯ ಭರದಿಂದ ಸಾಗಿದೆ. ಈ ಸಾಕ್ಷರತಾ ಅಭಿಯಾನದಲ್ಲಿ ಎಲ್ಲಾ ಜಾತಿ, ವರ್ಗದವರಿಗೆ ಶಿಕ್ಷಣ ಪಡೆಯುವ ಅವಕಾಶ ಸರಕಾರ ಒದಗಿಸಿದೆ. ಹಿಂದುಳಿದ ಜಾತಿ ಜನಾಂಗದವರಿಂದಲೆ ಹಲವಾರು ಶಾಲೆ ಕಾಲೇಜುಗಳು ಪ್ರಾರಂಭವಾಗಿವೆ. ಈ ಹಿನ್ನೆಲೆಯಲ್ಲಿ ಹುಮನಾಬಾದ ಹಾಗೂ ಹಳ್ಳಿಖೇಡ (ಬಿ)ಗಳಲ್ಲಿ ಅಂಬೇಡ್ಕರ್ ಪ್ರೌಢ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ.

ಮಹಳೆಯರ ಶಿಕ್ಷಣ ಪ್ರಗತಿಗಾಗಿ ಪ್ರತ್ಯಕೆವಾದ ಶಾಲಾ ಕಾಲೇಜುಗಳು ಈ ತಾಲೂಕಿನ್ನಲಿವೆ ಹುಮನಾಬಾದ ನಗರದಲ್ಲಿ ಬಾಲಕಿಯರ ೨ ಪ್ರೌಡ ಶಾಲೆಗಳು ೧ ಕಿರಿಯ ಕಾಲೇಜು ಹಾಗೂ ಸರ್ವೋದಯ ಬಾಲಕೀಯರ ಕಿರಿಯ ಮಹಾವಿದ್ಯಾಲಯ ರಾಮಚಂದ್ರ ವೀರಪ್ಪಾ ಮಹಿಳಾ ಮಹಾವಿದ್ಯಾಲಯ ಸರೋಜನಿ ನಾಯ್ಡು ಮಹಿಳಾ ಬಿ.ಎಡ್ ಕಾಲೇಜ, ಚಿಟಗುಪ್ಪ ನಗರದಲ್ಲಿ ೧ ಪ್ರೌಡ ಶಾಲೆ ಇದೆ. ಇದರಿಂದ ಮಹಿಳೆಯರ ಸಾಕ್ಷಾರತಾ ಪ್ರಮಾಣ ಅಭಿವೃದ್ಧಿ ಸಾಧಿಸುತ್ತಿದೆ.

ಮಾಣಿಕ ನಗರದಲ್ಲಿ ಹಿಂದಿ ಪ್ರೌಢ ಶಾಲೆ, ಘಾಟಬೋರಳದಲ್ಲಿ ಮರಾಠಿ ಪ್ರೌಢ ಶಾಲೆ ಹುಮನಾಬಾದ ಹಾಗೂ ಚಿಟಗುಪ್ಪಾದಲ್ಲಿ ಉರ್ದು ಪ್ರೌಢ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಕನ್ನಡ ಭಾಷೆ ಜೋತೆಗೆ ಹಿಂದಿ, ಮರಾಠಿ ಹಾಗೂ ಉರ್ದು ಭಾಷೆಗಳು ಬೆಳವಣಿಗೆ ಸಾಧಿಸುತ್ತಿವೆ. ಮಾಣಿಕನಗರ ಹಾಗೂ ಹುಮನಾಬಾದ ನಗರಗಳಲ್ಲಿ ಮತ್ತು ಸಿಂಧನಕೇರಾ ಕ್ರಾಸ್ ಹತ್ತಿರ ಇಂಗ್ಲೀಷ ಮಾಧ್ಯಮದ ಕಿರಿಯ ಕಾಲೇಜುಗಳು ಪ್ರಾರಂಭವಾಗಿವೆ. ಇದಲ್ಲದೇ ಹುಮನಾಬಾದ ನಗರದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳು ಶಿಕ್ಷಣ ನೀಡುವ ಕಾರ್ಯದಲ್ಲಿ ನಿರತವಾಗಿವೆ. ೨೦೦೧ ಜನಗಣತೀಯ ಪ್ರಕಾರ ಹುಮನಾಬಾದ ತಾಲೂಕಿನ ಸಾಕ್ಷಾರತೆಯ ಪ್ರಮಾಣ ಒಟ್ಟು ಶೇಕಡಾ ೬೨% ಇದೆ. ಇದರಲ್ಲಿ ಗಂಡಸರದ್ದು ೩೬ % ಇದರೆ , ಹೆಗಂಸರದು ೨೬ % ಇದೆ.

ವಿದ್ವಾಂಸರು :-

ಹುಮನಾಬಾದ ತಾಲೂಕಿನಲ್ಲಿ ಅನೇಕ ಪ್ರತಿಭಾವಂತ ಕವಿಗಳು, ಕಲಾವಿದರು, ಜಾನಪದ ವಿದ್ವಾಂಸರು ನಾಟಕ ತಜ್ಞರು ಆಗಿ ಹೊಗಿದ್ದಾರೆ. ಧುಮ್ಮನಸೂರಿನ ಸಿದ್ದ ಪ್ರಭುಗಳು, ಚಿಟಗುಪ್ಪಾದ ಶಿವಪ್ಪಾ ಭೂತಾಳೆ ಮೊದಲಾದವರು ಸಣ್ಣಾಟಗಳು ರಚಿಸಿದ್ದಾರೆ. ಅದರ ಜೋತೆಗೆ ತತ್ವಪದಗಳು ಬರೆದಿದ್ದಾರೆ. ಈಗಲು ಕೂಡ ಅನೇಕ ಕವಿಗಳನ್ನು ನಾವು ಗುರುತಿಸಬಹುದು. ಹುಡಗಿಯ ದಿವರಗತ ಬಸವರಾಜ ಸೈನೀರ , ಗಡವಂತಿಯ ಬಂಡೇಪ್ಪಾ ಖುಬ್ಬಾ, ಮಾಣಿಕರಾವ ಧನಶ್ರೀ, ಎಚ್ ಕಾಶೀನಾಥ ರಡ್ಡಿ, ಡಾ॥ ಸೋಮನಾಥ ಯಳವಾರ, ದೇಶಾಂಶ ಹುಡಗಿ ಮೊದಲಾದವರು ಜಾನಪದ ಕವಿಗಳು ಹಾಗೂ ಕಲಾವಿದರ ಸಂಖ್ಯೆಯು ಹೆಚ್ಚಾಗಿದೆ. ಈ ನಾಡಿನಲ್ಲಿ ವಚನ ಸಾಹಿತ್ಯದ ವಿಶಿಷ್ಠವಾದ ಪರಂಪರೆ ಸುಮಾರು ೯೦೦ ವರ್ಷಗಳಿಂದ ಬೆಳದು ಕೊಂಡು ಬಂದಿದ್ದೆ.

ಸಂಸ್ಕೃತಿ :-

ಹುಮನಾಬಾದ ತಾಲೂಕಿನ ಜನರು ಆರೋಗ್ಯವಂತರು ಕಾರಣವೇಂದರೆ ಹೊಲದಲ್ಲಿ ದುಡಿಯುವ ಶ್ರಮಜೀವಿಗಳು ಪಟ್ಟಣದವರಿಗಿಂತ ಹಳ್ಳಿಯ ಜನರು ಗಟ್ಟಿಗರು. ಈ ತಾಲ್ಲೂಕಿನ ಸುತ್ತ ಮುತ್ತ ಆಂದ್ರಾ ಹಾಗೂ ಮಹಾರಷ್ಟ್ರದ ಜನಸಂಪರ್ಕ ಇರುವುದರಿಂದ ಮರಾಠಿ, ತೇಲಗು ಭಾಷೆಯ ಅನೇಕ ಶಬ್ದಗಳು ಕನ್ನಡ ಭಾಷೆಯಲ್ಲಿ ಮಿಶ್ರಣಗೊಂಡಿವೆ. ಮುಸ್ಲಿಂ ಅರಸರ ಆಳ್ವಿಕೆಯಿಂದ ಉರ್ದು ಶಬ್ದಗಳು ಕೂಡ ಕನ್ನಡದಲ್ಲಿ ಕಲೆತ್ತುಕೊಂಡಿವೆ. ಇಲ್ಲಿನ ಜನರ ಉದ್ಯೋಗ ಒಕ್ಕಲುತನ ಈ ಒಕ್ಕಲುತನ ಮುಖ್ಯವಾಗಿ ಮಳೆಯನ್ನು ಅವಲಂಬಿತವಾಗಿದೆ. ಮಳೆಯು ಅನಿಶ್ಚಿತವಾಗಿರುವುದರಿಂದ ಒಕ್ಕಲಿಗರ ಸ್ಥಿತಿ ಗಂಬೀರವಾಗಿದೆ. ಆದರೆ ದೇವರ ಮೇಲಿನ ಭಕ್ತಿಗೇನು ಧಕ್ಕೆಯಾಗಿಲ್ಲ. ದಸರಾ ಹಬ್ಬದಲ್ಲಿ ತುಳಜಾಪೂರಕ್ಕೆ ಕಾಲನಡುಗೆಲ್ಲಿಯೇ ಸಾವಿರಾರು ಜನರು ನೂರಾರು ಕಿ.ಮೀ ಅಂತರ ಕ್ರಮಿಸುತ್ತಾರೆ. ಹಳ್ಳಿಗಳಲ್ಲಿ ಒಕ್ಕಲುತನಕ್ಕೆ ಸಂಬಂಧಿಸಿದ ಬಡಗಿತನ, ಕಂಬಾರಿಕೆ, ಕುಂಬಾರಿಕೆ, ಬಣ್ಣಗಾರಿಕೆ, ನೇಕಾರಿಕೆಗಳು ಒಳೆಯ ಸ್ಥೀತಿಯಲ್ಲಿದವು. ಈಗ ಕೈಗಾರಿಕೆಳೆಲ್ಲಾ ಮುಲೇ ಗುಂಪಾಗಿ ಪ್ರತಿಯೋಂದು ಹಳ್ಳಿಯಲ್ಲಿಯೂ ಭಯಾನಕಾ ಸ್ಥಿತಿ ಬಂದಿದೆ.

ಬಡತನ ಬಹಳಿರಲ್ಲಿ ಬಹಳೆ ಮ್ಕಕಳ ಇರಲಿ ಎಂಬ ಗೃಹಿಣೀಯೂ ತನ್ನ ಬಡತನ ಅಧಿಕವಾಗಿದ್ದರೂ ಕೂಡಾ ಜನಪದ ಕಲೆಯನ್ನು ಆಶ್ರಯಿಸಿಯೇ ಬದುಕಿದ್ದಾಳೆ. ಊರೂರಿಗೆ ಬಯಲಾಟಗಳು, ಕೋಲಾಟಗಳು, ಆಡುತ್ತಾರೆ. ಏಕತಾರಿ ಪದಗಳು, ಭಜನೆ ಹಾಡುಗಳು ಹಾಡುವವರು ಇದ್ದಂತೆ ಕೇಳುವವರು ಇದ್ದಾರೆ. ಭೂತೆರಾಟದಂತಹ ಜನಪದ ಕನ್ನಡನ ಗೀತೆಗಳು ರಾತ್ರಿಯಲ್ಲಾ ಕುಳಿತು ಕೇಳುವ ದೃಶ ಸಾಮಾನ್ಯವಾಗಿದೆ. ಅದೇ ರೀತಿ ಗೊಂದಲಿಗರ ಕಥೆಗಳು ಕೇಳುತ್ತಾರೆ. ಹಳ್ಳಿಗಳಲ್ಲಿ ಸೈಕಲ್ ಹಾಗೂ ಟಿ.ವ್ಹಿ.ಎಸ್. ದ್ವಿ ಚಕ್ರ ವಾಹನಗಳು ಹೆಚ್ಚಾಗಿ ಬಳಸುತ್ತಾರೆ. ಅದರೆ ಎತ್ತಿನ ಬಂಡಿಗಳು ಕೇವಲ ಒಕ್ಕಲುತನ ಕೆಲಸಕ್ಕೆ ಸೀಮಿತವಾಗಿದೆ. ಊರೂರಿಗೆ ಜಾತ್ರೆಗಳು ನಡೆಯುತ್ತಿದ್ದರೂ ಮೊದಲಿನ ವೈಭವ ಕಳೆದುಕೊಂಡಿವೆ ಹಳ್ಳಿಗಳಲ್ಲಿ ಹಿಂದೂ, ಮುಸ್ಲಿಂರಲ್ಲಿ ಕೋಮು ಸೌಹಾರ್ದತೆ ಇದೆ. ವೇಷ -ಭೂಷಣಗಳಲ್ಲಿ ಎರಡು ಜನಾಂಗ ವ್ಯತ್ಯಾಸವಿಲ್ಲದಂತೆ ಸಾಮ್ಯತೆಯಿದೆ. ಹಳ್ಳಿಗಳಲ್ಲಿ ಮೊಹರಂ ಹಬ್ಬವನ್ನು ಹಿಂದುಗಳೇ ಆಚರಿಸುತ್ತಾರೆ. ಮುಸ್ಲಿಂರೂ ಕೂಡಾ ಹೋಳಿ ಹಬ್ಬದಲ್ಲಿ ಭಾಗಿಯಾಗುತ್ತಾರೆ. ಹಳ್ಳಿಯ ಮುಸ್ಲಿಂರು ದಿನ ನಿತ್ಯದಲಿ ಉರ್ದುವಿಗಿಂತ ಕನ್ನಡ 'ಮಾತುಗಳೇ ಹೆಚ್ಚಾಗಿ ಆಡುತ್ತರೆ.

ಭಾಷೆ :-

ಬೀದರ ಜಿಲ್ಲೆಯ ಭಾಷೆಯು ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ವಿಚಿತ್ರವಾಗಿದ್ದು,ಇದಕ್ಕೆ ಹುಮನಾಬಾದ ತಾಲ್ಲೂಕಾ ಹೊರತಾಗಿಲ್ಲ. ಈ ತಾಲ್ಲೂಕಿನ ಕನ್ನಡ ಭಾಷೆಯ ಮೇಲೆ ಉರ್ದು, ಮರಾಠಿ, ತೇಲಗು, ಹಾಗೂ ಇಂಗ್ಲೀಷ ಭಾಷೆಗಳ ಪ್ರಭಾವ ಹೆಚ್ಚಾಗಿದ್ದು, ಮಿಶ್ರ ಕನ್ನಡವಾಗಿದೆ. ಇಲ್ಲಿಯ ಜನರು ಹಳೆಗನ್ನಡದ ಅನೇಕ ಶಬ್ದಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಹುಮನಾಬಾದ ತಾಲ್ಲೂಕಿನ ಜನರು ತಮ್ಮ ದಿನನಿತ್ಯದ ಕನ್ನಡ ಭಾಷೆಯ ಬಳಕೆಯಲ್ಲಿ ಸರ್ವನಾಮಗಳು ವಿಚಿತ್ರವಾಗಿ ಬಳಸುತ್ತಾರೆ. ಉದಾಹರಣೆಗೆ ಅವನು, ಇವನು, ಇವಳು, ಅವಳು, ಅದು,ಇದು, ಎಂಬುದಕ್ಕೆ ಬದಲಾಗಿ ಅಂವ, ಇಂವ, ಅಕಿ, ಇಕಿ, ಕದು, ಕಿದು, ರೂಡಿಯಲ್ಲಿವೆ. ಈ ಶಬ್ದಗಳಿಗೆ ವಿಭಕ್ತಿ ಪ್ರತ್ಯಯ ಹಚ್ಚಿದರೆ ಕಂವನೆ, ಕಿಂವನೆ, ಕಕಿಂದು, ಕಿಕಿಂದು, ಕದಕ್ಕೆ, ಕಿದಕ್ಕೆ, ಎಂದು ರೂಪಗೊಳ್ಳತ್ತದೆ.

ಈ ತಾಲ್ಲೂಕಿನಲ್ಲಿ ಕನ್ನಡದ ಅಪಭ್ರಂಶ ಶಬ್ದಗಳು ಹೆಚ್ಚಾಗಿ ಬಳಸುತ್ತಾರೆ. ಉದಾಃ- ಮಹಾನವಮಿ, ಕೋಟೆ, ಬಸ್ ಮಾರ್ಕ, ಬಯಕೆ ಎಂಬ ಶಬ್ದಗಳಿಗೆ ಬದಲಾಗಿ ಮಾನಂಬಿ, ಕ್ವಾಟಿ, ತೀಸ್ ಮಾರ್ಕ, ಬೆಂಕಿ ಎಂಬ ಶಬ್ದಗಳು ಬಳಸುತ್ತಾರೆ, 'ಎ' ಕಾರಂತ ಶಬ್ದಗಳು 'ಇ' ಕಾರಂತವಾಗಿ ಉಚ್ಚರಿಸುತ್ತಾರೆ.

ಉದಾಃ ಆನೆ, ಒಂಟೆ, ಕುದರೆ, ಮನೆ, ಎಲೆ, ತಲೆ, ಕತ್ತೆ, ಕಾಗೆ, ಜಾತ್ರೆ, ಪಾತ್ರೆ, ಮೊದಲಾದ ಶಬ್ದಗಳನ್ನು ಆನಿ, ಒಂಟಿ, ಕುದರಿ, ಮನಿ, ಎಲಿ, ತೆಲಿ, ಕತ್ತಿ, ಕಾಗಿ, ಜಾತ್ರಿ, ಪಾತ್ರಿ, ಹೀಗೆ ಈ ಕಾರಂತವಾಗಿ ಬಳಸುತ್ತಾರೆ.

ಇಲ್ಲಿಯ ಜನರ ಭಾಷೆಯಲ್ಲಿ ಅನ್ಯ ಭಾಷಾ ಶಬ್ದಗಳು ಹೆಚ್ಚಾಗಿ ಬಳಕೆಯಾಗುತ್ತವೆ. ಕನ್ನಡದ ಅಂಕಿಗಳು ಯಾರು ಕೂಡಾ ತಪ್ಪಿಯೂ ಉಚ್ಚರಿಸುವದಿಲ್ಲ. ದಿನನಿತ್ಯದ ವ್ಯವಹಾರದಲ್ಲಿ ದಹಾ, ಬೀಸ್, ತೀಸ್, ಚಾಳಿಸ್, ಪನ್ನಾಸ್, ಶಂಬೂರ, ಪಾನಸೇ, ಹಾಜಾರ, ಲಾಕ್ ಎಂದು ಹಿಂದಿ ಅಂಕಿಗಳೂ ಹೇಳುತ್ತಾರೆ. ಅದರಂತೆ ಮರಾಠಿ ಶಬ್ದಗಳಾದ ಮೊಳ(ತೋಟ, ಶಿವಾರ (ಭಾಗ) ಪರಂತಾ (ಆದರೆ) ಶಬ್ದಗಳು ಬಳಕೆಯಲ್ಲಿವೆ, ತೆಲುಗು ಶಬ್ದಗಳು ಕನ್ನಡದಲ್ಲಿ ಮಿಳಿತವಾಗಿವೆ.

ಈ ತಾಲ್ಲೂಕಿನಲ್ಲಿ ಜನಪದರ ಮಾತುಗಳಲ್ಲಿ ಹೋತ್ರಾಳಿ, ರಜಗಿಲ್, ಸರಿಹೋಗು, ಧರಿಪ್ರಾಂತ ಮೊದಲಾದ ಹಳೆಗನ್ನಡದ ಶಬ್ದಗಳು ಸಾಕಷ್ಟು ದೊರೆಯುತ್ತವೆ. ಒಂದೊಂದು ಶಬ್ದಕ್ಕೆ ಹತ್ತಾರು ಅರ್ಥ ಕೊಡುವ ಮಾತುಗಳು ಕೇಳಿದರೆ ಈ ಜನ ಎಂಥಾ ಮೇಧಾವಿಗಳು ಎಂಬ ಕವಿರಾಜ ಮಾರ್ಗಕಾರನ

ನೆನಪಾಗುತ್ತದೆ. ಉದಾಃ- ಹೆಚ್ಚು ಎಂಬ ಶಬ್ದಕ್ಕೆ ತೋಲ್, ಮನಾರ, ಅನಗಡ, ಬಕ್ಕುಳ್, ರಗಡ್, ಢಿಗಾರಿ, ದುನ್ಯಾದ್, ಕಂಡಾಬಟ್ಟಿ, ತಪ್ಪಾತಾರ ಮಸ್ತ್, ಮನಗಂಡ ಹೀಗೆ ಬಳಸಲಾಗುತ್ತದೆ. ಉರ್ದುವಿನ ಹಮ್ ಬಿ, ತುಮ್ ಬಿ, ಎಂಬಂತಹ ಶಬ್ದಗಳು ಕನ್ನಡದ ಮೇಲೆ ಬರೀ, ನಾಬೀ, ನೀಭಿ, ಅಂವಭಿ, ಎಂಬಂತಹ ಸರ್ವನಾಮಗಳು ಹುಟ್ಟಿಕೊಂಡಿವೆ ಭಾಷಾ ಶಾಸ್ತ್ರಜ್ಞರು ಇಲ್ಲಿಯ ಭಾಷೆಯ ಬಗ್ಗೆ ಉತ್ತಮ ರೀತಿಯ ಸಂಶೋಧನೆ ಮಾಡಬೇಕಾಗುತ್ತದೆ.

ಅಧ್ಯಾಯ ಮುರು

ಹುಮನಾಬಾದ ತಾಲೂಕಿನ ಐತಿಹಾಸಿಕ ಸ್ಥಳಗಳು

ಹುಮನಾಬಾದ ತಾಲೂಕಿನ ಐತಿಹಾಸಿಕ ಸ್ಥಳಗಳು

ಹುಮನಾಬಾದ

ಬೀದರ ಜಿಲ್ಲೆ ತಾಲ್ಲೂಕು ಸ್ಥಾನವಾಗಿರುವ ಹುಮನಾಬಾದ ರಾಷ್ಟ್ರೀಯ ಹೆದ್ದಾರಿ ೯ ರ ಮೇಲಿದೆ ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿರುವ ಈ ತಾಲ್ಲೂಕು ಇಂದು ಬೀದರ ಜಿಲ್ಲೇಯ ದ್ವಾರಬಾಗಿಲುವಾಗಿರುವಂತೆ, ಹಿಂದೆ ೧೨ ಯೋಜೆನಗಳವರೆಗೆ ಹಬ್ಬಿದ್ದ ಕಲ್ಯಾಣಪಟ್ಟಣಕ್ಕೆ ಹೆಬ್ಬಾಗಿಲು ಎನಿಸಿತ್ತು. ಲಾಲಧರಿ ಎಂದು ಕರೆಯಲ್ಪಡುವ ಈ ಸ್ಥಾನ ಕಾಲ್ಯಾಣ ಕ್ರಾಂತಿಯಲ್ಲಿ ಕಹಳೆಯೂದಿರುವ ಪ್ರದೇಶವಾಗಿದೆ. ಹಚ್ಚ ಹಸಿರಿನ ಗಿಡಮರ ಸಿಹಿ ನೀರಿನ ತಾಣ, ಹಿತವಾದ ವಾತಾವರಣವುಳ್ಳ ಇದು ಶಿವಕ್ತರ ನಾಡು, ಅಲ್ಲಾನ ನಮಾಜು ಆಡುವವರ ಬೀಡು, ಬುದ್ಧ, ಬಸವ, ಮಹಾವೀರ, ಯೇಸುಕ್ರಿಸ್ತ, ಅಂಬೇಡ್ಕರ್, ಮಾಣಿಕ ಪ್ರಭು ಮೊದಲಾದ ಮಹಾಪುರುಷರು ತತ್ವಗಳನ್ನು ಸಾರುತ್ತರುವ ಸಾಂಸ್ಕೃತಿಕ ನಗರ ಭಕ್ತಿ – ಜ್ಞಾನ – ಕ್ರಿಯೆಗಳ ಸಂಗಮದಂತಿರುವ ಹುಮನಾಬಾದ ಕಲ್ಯಾಣದ ಪ್ರಣತೆಗೆ ಭಕ್ತಿರಸದ ತೈಲವನೆರೆಯುತ್ತಿರುವ ಕ್ಷೇತ್ರ ಭಾರತದ ರಾಜಕೀಯ ಸಾಮಾಜಿಕ, ಆರ್ಥಿಕ, ದಾರ್ಮಿಕ, ಮತ್ತು ಸಾಂಸ್ಕೃತಿಕ ಚರಿತ್ರೆಗೆ ತನ್ನದೇ ಆದ ಕಾಣಿಕೆ ಇತ್ತಿರುವ ಇದು 'ವೀರಭದ್ರೇಶ್ವರ' ದೇವರ ವಿಶಿಷ್ಟ ಸ್ಥಾನವಾಗಿದೆ.

'ಜಹಸಿಂಗಪುರ' ಎಂಬುದು ಹುಮನಾಬಾದ ಪ್ರಾಚೀನ ಹೆಸರು. ಚಾಲುಕ್ಯ ದೊರೆ ಎರಡನೆಯ 'ಜಯಸಿಂಹ' (ಕ್ರಿ. ಶ. ೧೦೧೫–೧೦೪೨)ನ ಆಳ್ವಿಕೆಯ ಕಾಲದಲ್ಲಿ ಈ ಊರಿನ ನಿರ್ಮಾಣವಾಗಿರುವಂತಿದೆ –[೧] ಚಾಲುಕ್ಯ ಜಯಸಿಂಹನ ಯಾವುದೇ ಒಂದು ವಿಜಯದ ನೆನಪನ್ನು ಈ ಹೆಸರು ಹೊತ್ತುನಿಂತಿರುವುದನ್ನು ಅಲ್ಲಗಳೆಯಲಾಗದು. ಆ ನಂತರದ ಕಾಲದಲ್ಲಿ ಮುಸ್ಲಿಂ ಅರಸರ ಕಾಲದಲ್ಲಿ ಹುಮಾಯೂನ್ ಆಬಾದ ಎಂದು ಬದಲಾವಣೆಗೊಂಡಿತು. ಸ್ಥಳೀಯ ಶ್ರೀ ವೀರಭದ್ರೇಶ್ವರ ಪುರಣದಲ್ಲಿ ಈ ಊರನ್ನು ಜಯಸಿಂಹಪುರವೆಂದು, ಕೆಲವು ಕಡೆ ಪಾಯಸಪುರವೆಂದೂ ಕರೆಯಲಾಗಿದೆ. ವೀರಭದ್ರನನ್ನು ಜಯಸಿಂಹನೆಂದು ಕರೆಯುವುದರಿಂದ ಈ ಊರಿನ ಹೆಸರಿಗೂ ವೀರಭದ್ರನಿಗೂ ಅನ್ವರ್ಥಕತೆಯಿರುವುದನ್ನು ಸಹ ಗಮನಾರ್ಹವಾಗುತ್ತದೆ.

ಈ ಊರಿನ ಇತಿಹಾಸವು ಅತ್ಯಂತ ರೋಚಕವಾಗಿದೆ. ಹುಮನಾಬಾದಿನ ರಾಜಕೀಯ ಇತಿಹಾಸದಲ್ಲಿ ಚಾಲುಕ್ಯರು, ಕಾಕತೀಯರು, ಖಿಲ್ಜಿ, ಬಹುಮನಿ ಅರಸರು, ಮೊಗಲರು, ಹೈದರಾಬಾದ ನಿಜಮರ ಆಳ್ವಿಕೆ ಪ್ರಮುಖವಾಗಿದೆ.

ಅದರಲ್ಲೂ ಆರನೆಯ ವಿಕ್ರಮಾದಿತ್ಯ ಹಾಗೂ ಮೊಗಲರ ಅಧಿಪತ್ಯವನ್ನು ಒಪ್ಪಿಕೊಂಡಿದ್ದ, ಪೇಶ್ವೆಯ ಮಂತ್ರಿ ಧಾನಜಿ ಜಾಧವ ಹಾಗೂ ಅವನ ಮಗ ಚಂದ್ರಸೇನ ಜಾಧವ ಹಾಗೂ ಹೈದ್ರಾಬಾದ ನಿಜಾಮರು ಈ ಊರಿನ ಇತಿಹಾಸದಲ್ಲಿ ಅತ್ಯಂತ ಸ್ಮರಣೀಯರು. ಧಾನಾಜಿ ಜಾಧವನು ಪೇಶ್ವೆಯ ವಿಶ್ವಾಸಾರ್ಹ ಮಂತ್ರಿ ಚೌಥಾಯ್ ಕರ್ ವಸೂಲಿ ಮಾಡಿ ಪೇಶ್ವೆಗೆ ಸಲ್ಲಿಸುತ್ತಿದ್ದನು. ಇದರಿಂದ ಸಂತೃಪ್ತನಾಗಿದ್ದ ಪೇಶ್ವೆ ಧಾನಾಜಿ ಜಾಧವನಿಗೆ ಈ ಭಾಗದ ಕೆಲವು ಊರುಗಳನ್ನ ಉಂಬಳಿಯಾಗಿ ನೀಡಿದ್ದನು. ಅದರಲ್ಲಿ ಜಯಸಿಂಹಪುರವೂ ಒಂದು ಮುಂದೆ ಧಾನಾಜಿಯ ಮಗ ಚಂದ್ರಸೇನನು ಈ ಊರಿನ ಪ್ರಾದೇಶಿಕ ಮಹತ್ವವನ್ನರಿತು ಇಲ್ಲಿಯೇ ನೆಲೆ ನಿಂತಿರುವುದಾಗಿ ತಿಳಿದು ಬರುತ್ತದೆ. ಇದನ್ನು ಸಮರ್ಥಿಸಲು ಒಂದು ಐತಿಹ್ಯವೂ ಇಲ್ಲಿ ಜನಜನಿತವಾಗಿದೆ.

ಚಂದ್ರಸೇನ ಜಾಧವನು ತಂದೆಯಂತೆ ವೀರನೂ, ಶೂರನು ಆಗಿದ್ದನು. ಮೇಲಾಗಿ ಯುದ್ಧ, ಕ್ರೀಡೆ-ಬೇಟೆಯಾಟಗಳಲ್ಲಿ ನಿಪುಣನೆನಿಸಿದ್ದನು. ಆತನು ಒಮ್ಮೆ ಬೇಟೆಯಾಡುತ್ತ ಈ ಪ್ರದೇಶದ ಸುತ್ತ ಮುತ್ತಲಿನ ಕಾಡಿನಲ್ಲಿ ಬರುವಾಗ, ಆತನ ಬೇಟೆನಾಯಿಗಳು ಕೆಲವು ಮೊಲಗಳನ್ನು ಬೆನ್ನಟ್ಟಿ ಓಡಿಸಿಕೊಂಡು ಬಂದವು, ಮುಂದೋಡಿ ಹೋಗುತ್ತಿದ್ದ ಮೊಲಗಳು ಜಹಸಿಂಗಪುರದ ಹತ್ತಿರಬಂದ ತಕ್ಷಣ ಆ ನಾಯಿಗಳಿಗೆ ಎದುರುನಿಂತು, ಅವುಗಳನ್ನೆ ಅಟ್ಟಿಸಿಕೊಂಡು ಬರುವುದನ್ನು ಕಂಡ ಚಂದ್ರಸೇನ, ಗಂಡು ಮೆಟ್ಟಿನ ನೆಲವಿದು ಎಂದು ನಿಶ್ಚಯಿಸಿ ನೆಲದ ಈ ಮಹತ್ವವನ್ನು ತಿಳಿದು ಇಲ್ಲಿಯೇ ವಾಸ್ತವ್ಯ ಹೂಡಲು ನಿರ್ಧರಿಸಿದನಂತೆ, ಆನಂತರ ಆತನ ಮಗ ರಾಜರಾಮಚಂದ್ರನು ಇಲ್ಲೊಂದು ಅರಮೆನಯನ್ನು ಕಟ್ಟಿಸಿ, ಆ ಊರಿನ ಸುತ್ತಲು ಎತ್ತರವಾದ ಕೋಟೆ, ಕೊತ್ತಳಗಳನ್ನು ನಿರ್ಮಿಸಿ, ಆ ಕೋಟೆಗೆ ಐದು ಅಗಸೆಗಳನ್ನು ನಿರ್ಮಿಸಿರುವುದಾಗಿ ತಿಳಿದು ಬರುತ್ತದೆ. ಅಳಿದುಳಿದ ಕೋಟೆ, ಕೊತ್ತಳ ಹಾಗೂ ಅಗಸೆ ಬಾಗಿಲುಗಳನ್ನು ಇಂದಿಗೂ ಕಾಣಬಹುದಾಗಿದೆ. ಈ ಕೋಟೆಯ ಉತ್ತರ ದಿಕ್ಕಿನ ಭಾಲ್ಕಿ ಅಗಸೆಯ ಬಲಭಾಗಕ್ಕಿರುವ ಒಂಟೆ, ಕುದುರೆ, ಗಜಶಾಲೆಗಳಿಗೆ ಹೊಂದಿಕೊಂಡೇ ಶ್ರೀ ವೀರಭದ್ರೇಶ್ವರ ದೇವಸ್ಥಾನ ಕಂಗೊಳಿಸುತ್ತದೆ.[-೨]

ರಾಮಚಂದ್ರ ಜಾಧವನ ಕಾಲದಲ್ಲಿ ಜಯಸಿಂಗಪುರವು ಜಯಸಿಂ ನಗರವಾಗಿ ಅಭಿವೃದ್ಧಿಯಾಗಿರುವುದು ಸುಸ್ಪಷ್ಟ ಇದನ್ನೇ ಪುರಾಣಕವಿ ಮಡಿವಾಳ ಶಿವಯೋಗಿಯು.

ವಸುಧೆ ದೇವಿಗೆ ನೆಸಲ ಬೊಟ್ಟಂ
ತೆಸೆವುದಾ ಜಯಸಿಂಗ ನಗರವು
ಶಶಿಧರನ ಕರುಣದಲಿ ಬಾಳ್ವದುಪುರವು ಬಹುಭಂದ

ಪಶುಪತಿಯ ಹಸ್ತದಲಿ ಪಡಿಸಿದಿಹ
ಮಿಸುಗಿಗರಿ ಕೋದಂಡದಂತಿಗೆ
ರಸಿಕಾರಾ ಕ್ಷೆಣ್ಣೆಸೆವುದಾ ಪುರ ಬಣ್ಣಿಸಲಳವೇ –[೩]

ಎಂದು ಹೊಗಳಿರುವುದನ್ನು

ಗಮನಿಸಬೇಕು ಪುರವಿದ್ದದ್ದು ಈತನ ಕಾಲದಲ್ಲಿ ನಗರವಾಗಿ ಬೆಳೆದಿದೆ. ಅರಮನೆ ಸುತ್ತ ಕೋಟೆ, ಎತ್ತರವಾದ ಕೋತ್ತಲಗಳು, ಅಲ್ಲಲ್ಲಿ ಕೇತ್ತಿಸಿಟ್ಟ ಶಿಲೆಗಳು, ಗಚ್ಚಿನ್ ಬಲವನ್ನು ಕಟ್ಟಡಗಳಿಗೆ ಉಪಯೋಗಿಸಿರುವುದು ತಿಳಿದು ಬರುತ್ತದೆ. ಕೊತ್ತಳಗಳ ಮೇಲೆ ಸಾಲು ಡೆಂಕಣಿ, ಅವುಗಳ ಮೇಲೆ ಕಪ್ಪಾದ ಪೀರಂಗಿ, ಮದ್ದಿನ ಕಲ್ಲುಗಳನ್ನು ಇಟ್ಟಿರುವ ಸಂಗತಿಯನ್ನು ಜೀರ್ಣಾವಸ್ಥೆಯಲ್ಲಿರುವ ಅವುಗಳನ್ನು ಈಗಲೂ ಕಾಣಬಹುದು.

ಶ್ರೀ ವೀರಭದ್ರೇಶ್ವರ ದೇವಸ್ಥಾನ :–

ಪ್ರಾಚೀನವಾದ ಈ ಶಿವದೇವಾಲಯದಲ್ಲಿ ರಾಜರಾಮ ಚಂದ್ರನ ಕಾಲದಲ್ಲಿಯೇ ಶ್ರೀ ವೀರಭದ್ರೇಶ್ವರನ ಮೂರ್ತಿಯನ್ನು ಪಕ್ಕದ ಗಡವಂತಿ ಗ್ರಾಮದಿಂದ ಕರೆತಂದು ಇಲ್ಲಿ ಸ್ಥಾಪಿಸಲಾಗಿದೆ ಎಂದು ಹೇಳಲಾಗುತ್ತದೆ. ಶಿವಭಕ್ತನಾಗಿದ್ದ ರಾಮಚಂದ್ರನ ಕನಸಿನಲ್ಲಿ ಅಶರೀರವಾಣಿವೆಂದು ಶ್ರೀ ವೀರಭದ್ರೇಶ್ವರನನ್ನು ತಂದು ಜಹಸಿಂಹ ನಗರದ ಶಿವದೇವಾಲಯದಲ್ಲಿ ಸ್ಥಾಪಿಸಬೇಕೆಂದು ಹೇಳಿತು. ಆಗ ಸಮೀಪದ ಗಡವಂತಿ ಗ್ರಾಮದಲ್ಲಿದ್ದ ಶ್ರೀ ವೀರಭದ್ರ ದೇವರ ಮೂರ್ತಿ, ಈ ರಾಜನ ಗಮನ ಸೆಳದಿತ್ತು. ಆ ಸುಂದರವಾದ ಮೂರ್ತಿಯೇ ಇಲ್ಲಿ ನೆಲಸಲು ಆಶಿಸಿ ರಾಜನಿಗೆ ಆಜ್ಞೆ ಮಾಡಿತ್ತು ಎನಿಸಿತ್ತು. ಅಂತೆಯೇ ಅದನ್ನು ಜಯಸಿಂಗನಗರಕ್ಕೆ ತರಲು ರಾಜನು ವಿಚಾರಿಸಿದನು. ಆದರೆ ಆ ಗ್ರಾಮದ ಜನರು ಅದನ್ನು ಕೊಡಲು ನಿರಾಕರಿಸಿದರು, ರಾಜನು ತನ್ನ ಮನದ ಆಸೆ ಹಾಗೂ ಅಶರೀರವಾಣೀಯ ಪ್ರಸ್ತಾಪ ಮಾಡಿ ಆ ಜನರಿಗೆ ಒಂದು ವಿಚಾರ ತಿಳಿಸಿದನು. ಅದೇನಂದರೆ ಆ ವೀರಭದ್ರನ ಮೂರ್ತಿಯನ್ನು ಒಂದು ಎತ್ತಿನ ಬಂಡಿಯಲ್ಲಿಡುವುದು, ಆ ಬಂಡಿ ಮುಂದೆ ಹೋಗದೆ ಇಲ್ಲಿಯೇ ನಿಂತಿದ್ದರೆ ಅದನ್ನು ಗಡವಂತಿಯಲ್ಲಿಯೇ ಇರಿಸೋಣ, ಆದರೆ ಅದು ಇಲ್ಲಿ ನಿಲ್ಲದೆ ಜಯಸಿಂಹನಗರಕ್ಕೆ ತೆರಳಿದರೆ ಅಲ್ಲಿ ಈ ಮೂರ್ತಿಯನ್ನು ಸಂಸ್ಥಾಪಿಸೋಣ ಎಂದನಂತೆ. ಆಗ ಅದನ್ನು ಒಪ್ಪಿಕೊಂಡು ಗಡವಂತಿ ಜನ ದೈವ ಪರೀಕ್ಷೆಯಲ್ಲಿ ನಿರಂತರಾದರು.

ದೈವನಿಯಮದಂತೆ ಆ ಬಂಡಿ ಜಯಸಿಂಹನಗರಕ್ಕೆ ಬಂದದ್ದರಿಂದ ಆ ಗಡವಂತಿಯ ವೀರಭದ್ರನ ಮೂರ್ತಿಯನ್ನು ಇಲ್ಲಿ ತಂದು ಸಂಸ್ಥಾಪಿಸಲಾಗಿದೆ ಎನ್ನಲಾಗುತ್ತದೆ. –[೪]

ಹೀಗಾಗಿ ಹಿಂದೆ ಚಿಕ್ಕದಾಗಿದ್ದ ಈ ದೇವಾಲಯವು ತ್ರಿಕೂಟ ದೇವಾಲಯವಾಗಿ ವಿಸ್ತಾರಗೊಂಡು ರಾಮಚಂದ್ರ ಜಾಧವ ರಾಜನ ಕಾಲದಲ್ಲಿ ಅಭಿವೃದ್ಧಿಗೊಂಡಿತು. ಮೊದಲಿನ ಈ ಗರ್ಭಗುಡಿಯುಳ್ಳ ಚಿಕ್ಕ ದೇವಾಲಯವು ಉತ್ತರಾಭಿಮುಖವಾಗಿದ್ದು, ಅದರ ರಚನೆಯು ಭಾರತೀಯ ವಾಸ್ತುಶಿಲ್ಪದ ಹಳೆಯ ಮಾದರಿಯಲ್ಲಿಯೇ ಇದೆ. ನಂತರದಲ್ಲಿ ರಾಮಚಂದ್ರ ದೊರೆಯು ಈ ದೇವಾಲಯವನ್ನು ಪೂರ್ವಾಭಿಮುಖವಾಗಿಸಿ ಶಿವದೇವಾಲಯದ ಎದುರಲ್ಲಿ ವರಭದ್ರಕಾಳಿಯ ಗುಡಿಯನ್ನು ನಿರ್ಮಿಸಿದನು. ಆ ರಾಜನ ಕಾಲದಲ್ಲಿ ಎತ್ತರವಾದ, ಶಿಖರ, ಗರ್ಭಗುಡಿ, ಸುಕಾನಾಸಿ ಹಾಗೂ ಸುತ್ತ ಪ್ರಾಂಗಣ, ಮಂಟಪ ಶಾಲೆ ಹಾಗೂ ಸುಂದರವಾದ ಹೊಂಡವನ್ನು ಪಡೆದ ಇದು ಶೋಭಿಸತೊಡಗಿತ್ತು. ಕ್ರಿ.ಶ. ೧೭೩೦ರ ಸುಮಾರಿನಲ್ಲಿ ಹೊಸರೂಪ ಪಡೆದಿರುವ ಈ ದೇವಸ್ಥಾನವು ಕಾಲಕಳೆದಂತೆ ಹಲವು ಜನ ಭಕ್ತರಿಂದ ಅಭಿವೃದ್ಧಿ ಹೊಂದತ್ತ ಸಾಗಿದ್ದು, ಈಗ ಭವ್ಯವಾದ ಮಂದಿರವಾಗಿ ನಿಂತಿರುವುದನ್ನು ಕಾಣಬಹುದಾಗಿದೆ. ಅದರ ಬೆಳವಣಿಗೆಯಲ್ಲಿ ಪ್ರಮುಖರಾಗಿರುವ ಶ್ರೀ ಭೀಮರಾವ ಪಾಟೀಲ ವಕೀಲರು, ಲಿಂ ಲೋಕ ಮಣಿ ಹಲವಾಯಿ, ಲಿಂ ಶ್ರೀ ಹಾವಗೆಪ್ಪಾ ಗೌಡ ಪಾಟೀಲ, ಮಾಜಿ ಮಂತ್ರಿಗಳಾದ ಶ್ರೀ ಬಸವರಾಜ.ಎಚ್. ಪಾಟೀಲರನ್ನು ಇಲ್ಲಿ ಸ್ಮರಿಸಲೇಬೇಕು. ಹಲವು ಜನ ಹುಮನಾಬಾದಿನ ನಾಗರಿಕರ ಸಹಕಾರವೂ ಇದಕ್ಕಿದೆ.

ಪೂರ್ವ ದಿಕ್ಕಿಗೆ ಮುಖ್ಯ ದ್ವಾರವಿರುವ ಶ್ರೀ ವೀರಭದ್ರೇಶ್ವರ ದೇವಾಲಯವು ಯೋಜನಬದ್ಧವಾಗಿ ನಿರ್ಮಿತವಾಗಿದ್ದು ಅತಿಭವ್ಯ ಮತ್ತು ಅತಿ ಸುಂದರವಾಗಿದೆ ಈಗ ಅದರ ಮುಂಭಾವು ಅಕರ್ಷಕವಾಗಿದ್ದು, ಅದನ್ನು ೫ ಹಂತಗಳಲ್ಲಿ ನಿರ್ಮಿಸಿರುವುದು ಎದ್ದು ಕಾಣುತ್ತದೆ, ಮೊದಲ ಹಂತದ ಐದು ಕಮಾನಗಳಲ್ಲಿ ಹೂ ಬಳ್ಳಿಯಿಂದ ಕೂಡಿರುವ ಸುಂದರವಾದ ಚಿತ್ತಾರಗಳಿದ್ದು, ಎರಡನೆಯ ಹಂತದಲ್ಲಿ ಹದಿನಾರು, ನಾಲ್ಕನೆಯ ಹಂತದಲ್ಲಿ ಹನ್ನೆರಡು ಹಾಗೂ ಕೊನೆಯ ಹಂತದಲ್ಲಿ ವೈವಿಧ್ಯಮಯವಾದ ಮೂರ್ತಿಗಳನ್ನು ಕೆತ್ತಲಾಗಿದೆ. ಒಟ್ಟು ಸುಮಾರು ೧೫೦ಕ್ಕಿಂತ ಹೆಚ್ಚು ಮೂರ್ತಿಗಳಿರುವುದನ್ನು ಕಾಣಬಹುದು ಎಲ್ಲಕ್ಕೂ ಮೇಲಿನ ಹಂತದಲ್ಲಿ ನಾಗರ ಹೆಡೆ ಹಾಗೂ ನಾಲ್ಕು ದಿಕ್ಕಿಗೆ ನಂದಿ ವಿಗ್ರಹಗಳನ್ನು ಕೂಡ್ರಿಸಲಾಗಿದೆ.

ಸುತ್ತಿ ಗೋಪುರ ಮೇಲೆ ಕಳಸಗ
ಳೆತ್ತಿ ಕೋಣೆಗೆ ನಂದಿ ಸ್ಥಾಪಿಸಿ
ಯುತ್ತ ನೋಡಲು ಭೋಜನದ ಸಾಲೆಗಳು ವೃತ್ತಗಳು
ಚಿತ್ರ ಮಂಟಪ ಮುಂಗಡೆಯೊಳು
ಅತ್ತಿ ಬಾಹದ್ರ್ವಾರ ಮೇಲಕೆಯತ್ತ ಬಹು ಭೋಧ್ಯದಲ್ಲಿ
ಮಂಟಪದೊಳಗೆ ನವವಾದ್ಯ-[೫]

ಎಂದು ಪುರಾಣ ಕವಿ ದೇವಾಲಯದ ಗೋಪುರದ ಭಾಗವನ್ನು ವರ್ಣಿಸಿದ್ದಾನೆ. ಈ ವರ್ಣನೆಗಿಂತಲೂ ಸುಂದರ ಹಾಗೂ ಭವ್ಯವಾಗಿರುವ ದೇವಾಲಯದ ವಾಸ್ತುಶಿಲ್ಪ ನೋಡುಗರ ಕಣ್ಮನ ಸೆಳೆಯುತ್ತದೆ. ಎತ್ತರವಾದ ಗುಡಿಯ ಗೋಪುರ, ಅದರ ಮೇಲೆ ಚಿನ್ನದ ಕಳಸ, ನಾಲ್ಕು ಮೂಲೆಯಲ್ಲಿ ನಂದಿಯ ಸ್ಥಾಪನೆ, ಅವುಗಳಿಂದ ಮೇಲೆ ಹಂತ ಹಂತವಾಗಿ ಕಾಣುವ ನೂರಾರು ಮೂರ್ತಿಗಳ ಸಾಲುಗಳ ಚಿತ್ರ ನೋಡುವಂತಿದೆ. ದೇವಾಲಯದ ಪ್ರಾಂಗಣದ ಸುತ್ತಲು ಇರುವ ಭೋಜನ ಶಾಲೆಗಳು ಪೂರ್ವ ಹಾಗೂ ದಕ್ಷಿಣ ದಿಕ್ಕಿನಲ್ಲಿರುವ ಎರಡು ದೊಡ್ಡದ್ವಾರ ಬಾಗಿಲುಗಳು, ಆ ದ್ವಾರಗಳಿಗೆ ಬೃಹತ್ತಾದ ಬಾಗಿಲುಗಳನ್ನು ಅತ್ತಿ ಕಟ್ಟಿಗೆಯಿಂದ ತಯಾರಿಸಲಾಗಿದೆ.

ಪೂರ್ವ ದಿಕ್ಕಿನಿಂದ ದೇವಸ್ಥಾನಕ್ಕೆ ಬರುವ ಎಲ್ಲರಿಗೂ ಈ ದೇವಸ್ಥಾನದ ಆಧಿದೇವತೆಯಾದ ಶ್ರೀ ವೀರಭದ್ರೇಶ್ವರನ ಸುಂದರವಾದ ಮೂರ್ತಿಯು ಅತಿ ದೂರದಿಂದಲೇ ಭಕ್ತರಿಗೆ ಕಾಣುವಂತಿದೆ. ಆತನ ಎದುರಿಗೆ ನಂದಿ ಎಡಭಾಗದಲ್ಲಿ ವರಭದ್ರ ಕಾಳಿಯ, ಹಾಗೂ ಭೀಮಭಾಗದಲ್ಲಿ ಶಿವನ ಲಿಂಗವಿರುವ ಈ ಕ್ಷೇತ್ರ ಭಕ್ತಿಯ ಆಗರವಾಗಿದೆ. ನವವಾದ್ಯಗಳ ಸೇವೆ ಹಾಗೂ ರುದ್ರ ಪೂಜಾ ವಿಧಿ ವಿಧಾನಗಳು ಈಗಲೂ ಸಾರಗಸವಾಗಿ ಜರುಗುತ್ತಿದ್ದು ಭಕ್ತರ ಮನಸೂರೆಗೊಳ್ಳುತ್ತಿವೆ. ಈ ಗುಡಿಯ ಪ್ರಾಂಗಣವು ದರ್ಶನೀಯವಾಗಿದೆ. ದೇವಾಲಯದ ಬಲಗಡೆಯಲ್ಲಿ ಬಹು ಪಾವಟಿಗೆಗಳುಳ್ಳ ಆಳವಾದ ಹೊಂಡವಿದ್ದು. ಅದರಲ್ಲಿ ಒಂದು ನಂದಿ ವಿಗ್ರಹವಿರುವುದು ವಿಶೇಷವಾಗಿದೆ. ಎಡಗಡೆಯಲ್ಲಿ ಒಂದು ಭಾವಿಯಿದೆ. ಗುಡಿಯ ಸುತ್ತಲು ಭಕ್ತರ ಪೂಜೆ ನೈವೇದ್ಯ ಹಾಗೂ ವಾಸಸ್ಥಾನಕ್ಕೆ ಎಲ್ಲ ಸವಲತ್ತುಗಳಿರುವ ಪಾಕ ಶಾಲೆಗಳಿದ್ದು, ಪ್ರಾಶಾಂತವಾದ ವಾತಾವರಣವನ್ನು ಅನುಭವಿಸಬಹುದು.

ತ್ರಿಕೂಟ ಗರ್ಭಗೃಹಗಳಿರುವ ಮುಖ್ಯ ಮಂಟಪದ ಮುಂದೆ ಅತ್ಯಂತ ವಿಸ್ತಾರವಾದ ರಂಗಶಾಲೆಯಿದ್ದು, ದೇವಸ್ಥಾನದ ಭವ್ಯತೆಯನ್ನು ದರ್ಶಿಸುತ್ತದೆ. ಎತ್ತರವಾದ ಉಕ್ಕಿನ ಕಂಬಗಳ ಮೇಲೆ ಕಬ್ಬಿಣದ ಭೀಮುಗಳನ್ನು ಹಾಕಿ ಕಟ್ಟಲಾದ ಛಾವಣಿ, ಕೆಳಗೆ ಹಾಸಲಾಗಿರುವ ಸಂಗ ಮರಿಕಲ್ಲು, ವಿಶಾಲವಾದ ರಂಗಶಾಲೆ ಭಕ್ತಿಭಾವವನ್ನು ಉಕ್ಕಿಸುತ್ತದೆ. ಪ್ರಶಾಂತವಾದ ಇಲ್ಲಿ ಸಾವಿರಾರು ಜನ ಏಕಕಾಲಕ್ಕೆ

ಕುಳಿತುಕೊಳ್ಳಬಹುದು. ದೇವಸ್ಥಾನದಲ್ಲಿ ಜರುಗುವ ಪ್ರವಚನ, ಪುರಾಣ, ಮಂಗಲ ಕಾರ್ಯಗಳಿಗೆ ವೇದಿಕೆ ಹಾಗೂ ಪ್ರೇಕ್ಷಕರ ಗ್ಯಾಲರಿಯಾಗಿರುವ ಇದು, ದೇವಾಲಯದ ಮುಖ ಮಂಟಪವಿದ್ದು, ನಂದಿ , ವಿಗ್ರಹದ ಮುಂಭಾಗದಲ್ಲಿ ೨೦ ಕಲ್ಲು ಗಂಬಗಳಳ್ಳು ಮುಖ ಮಂಟಪಕ್ಷತ್ತಿ ಪ್ರದಕ್ಷಿಣಾ ಪಥವನ್ನು ನಿರ್ಮಿಸಲಾಗಿದೆ. ವಿಶಾಲವಾಗಿರುವ ರಂಗಮಂಟಪದ ಪೂರ್ವದಲ್ಲಿ ಮಹದ್ವಾರ್ಕಕೆ ಹೊಂದಿಕೊಂಡಂತಿರುವ ಎರಡು ಮಾಲಗಂಬಗಳಿದ್ದು. ಅದರಲ್ಲಿ ಬಲಗಡೆಯ ಕಂಬದ ತುದಿ ಭಾಗದಲ್ಲಿ ಹಿಡಿದು ಸೂಕಿದರೆ ಅದು ಅಲ್ಲಾಡುತ್ತಿರುವ ತಾಂತ್ರಿಗಾರಿಕೆ ಗಮನಸೆಳೆಯುತ್ತದೆ. ನವೀನ ತಂತ್ರಜ್ಞಾನವುಳ್ಳ ಇದು ಇಂದಿನ ಇಂಜಿನಿಯರರನ್ನು ದಿಗ್ಮೂಢಗೊಳಿಸುತ್ತದೆ. ೧೮ನೇ ಶತಮಾನದ ವಾಸ್ತತಂತ್ರಿಕ್ಕೆ ನವೀನ ಮಾದರಿಯಾಗಿರುವ ಇದು ಈ ದೇವಸ್ಥಾನದ ದರ್ಶನೀಯ ಸಂಗತಿ ಎನಿಸಿದೆ.

ಮುಖ್ಯ ಗಭೃಗೃಹದಲ್ಲಿರುವ ವೀರಭದ್ರ ದೇವರ ಮೂರ್ತಿ ನಯನ ಮನೋಹರವಾಗಿದ್ದು, ಭವ್ಯವಾಗಿದೆ ಐದು ಅಡಿ ಎತ್ತರವಾಗಿರುವ ಈ ಮೂರ್ತಿಯ ಮುಖವು ಪ್ರಸನ್ನವಾಗಿದ್ದು, ಸ್ವಲ್ಪ ಬಲಕ್ಕೆ ವಾಲಿದಂತೆ ಕಾಣುತ್ತದೆ. ಕೈಯಲ್ಲಿ ಖಡ್ಗ ಕೊರಳಲ್ಲಿ ಲಿಂಗ, ನಡುವಿಗೆ ಸರಪಳ್ಳಿ, ಉಡುದಾರ, ತಲೆಗೆ ಕೀರಿಟವಿರುವ ಈ ದೇವತೆಗೆ ಕಾಸು ಕಟ್ಟಿ ಪೂಜೆ ಮಾಡಿದಾಗ ಮತ್ತೆ ಮತ್ತೆ ನೋಡಬೇಕೆನಿಸುತ್ತದೆ ಶ್ರೀ ವೀರಭದ್ರನ ಮೂಲ ಮಂಟಪವು ಇಪ್ಪತ್ತು ಕಲ್ಲು ಕಂಬಳಿಂದ ನಿರ್ಮಾಣಗೊಂಡಿದ್ದು, ಈ ಕಂಬಗಳನ್ನು ಸೋಗಸಾಗಿ ಕೆತ್ತಲಾಗಿದೆ. ದೇವಸ್ಥಾನದ ಸೌಂದರ್ಯವನ್ನು ಇವು ಹೆಚ್ಚಿಸಿರುವುದರ ಜೋತೆಗೆ ಅವು ವೀರಭದ್ರ ದೇವರ ದಿವ್ಯತೆಯನ್ನು ಎತ್ತಿ ತೋರಿಸುತ್ತವೆ.

ವೀರಭದ್ರನ ಚರಿತ್ರೆ :-

ಪರಮ ವೀರಭದ್ರ ದಕ್ಷನಾ
ಶಿರವ ಹರಿದು ಸಕಲ ದಿವಿಜರನು
ಮುರಿದು ಭಂಗವ ಮಾಡಿ ಹರನ ಕರುಣವಂ ಪಡಿದು
ಧರಿಯ ಜನವರಿವಂತೆ ನಿಂಮಯ
ವರ ಪುರಾಣದ ರಚಿಸಿ ನಿತ್ಯದಿ
ಕರುಣದಿಂದಲಿ ಕವಿತ ಗುಣವಿತೆನ್ನ ರಕ್ಷಿಸುವು[೬]

ಎಂದು ಹುಮನಾಬಾದ ವೀರಭದ್ರೇಶ್ವರ ಪುರಾಣವನ್ನು ಬರೆಯಲು ಆರಂಭಿಸುವ ಕವಿಯು ಪೌರಾಣಿಕ ಚರಿತ್ರೆಯನ್ನೇ ಆಧಾರವಾಗಿಟ್ಟುಕೊಂಡು ಇಲ್ಲಿಯ ವೀರಭದ್ರನ ಚರಿತ್ರೆಯನ್ನು ತಿಳಿಸುತ್ತಿದ್ದಾನೆ ಸ್ಕಂದ ಪುರಾಣದ ದಕ್ಷಕಾಂಡದ ಕಥೆಯೇ

ಇಲ್ಲಿ ಹೇಳುಲಾಗಿದ್ದರು ಲಿಂಗ ಪರಾಣದ ಹಾಗೂ ಜನಪದ ಕಥೆಗಳ ಪ್ರಭಾವವೂ ಇಲ್ಲಿ ಕಾಣುತ್ತದೆ.

ಜಾತ್ರೆ :-

ಶ್ರೀ ವೀರಭದ್ರೇಶ್ವರ ಜಾತ್ರೆಯು ಜನೆವರಿ ತಿಂಗಳಲ್ಲಿ ಅತ್ಯಂತ ವಿಜ್ರಂಭಣೆ ಹಾಗೂ ವೈಭದದಿಂದ ಜರುಗುತ್ತದೆ. ಪ್ರತಿ ವರ್ಷ ಜನೆವರಿ ೧೪ ರಿಂದ ೨೬ರ ವರೆಗೆ ಜರುಗುವ ಈ ಜಾತ್ರೆ ತುಂಬಾ ವಿಶೇಷವಾಗಿರುತ್ತದೆ. ೧೩ ದಿನಗಳ ಕಾಲ ಜರುಗುತ್ತಿರುವ ಈ ಜಾತ್ರೆಯಲ್ಲಿ ಪ್ರತಿದಿನ ಒಂದೊಂದು ಧಾರ್ಮಿಕ ಚಟುವಟಿಕೆಳು ಜರುಗುತ್ತವೆ. ಶಲ್ಯ ಸುಡುವುದು, ಆನೆಯ ಮೆರವಣಿಗೆ, ಎತ್ತಿನ ಗಾಡಿಯ ಮೆರವಣಿಗೆ, ಉಚ್ಚಾಯಿ ತೇರಿನ ಮೆರವಣಿಗೆ, ಪಲ್ಲಕಿ ಉತ್ಸವ, ನಂದಿ ಕೊಲು ಕುಣಿತ, ಜನಪದ ಕಲೆಗಳ ಪ್ರದರ್ಶನ, ಪೂಜೆ, ಅಗ್ನಿ ತುಳಿಯುವುದು, ರಥೋತ್ಸವ ಮುಂತಾದ ಧಾರ್ಮಿಕ ಆಚರಣೆಗಳು ಇಲ್ಲಿ ಜರುಗುತ್ತವೆ, ಇಡೀ ಊರಿನ ಜನರು ಯಾವುದೇ ಭೆದ-ಭಾವವಿಲ್ಲದೆ ಈ ಕಾರ್ಯದಲ್ಲಿ ಭಾಗವಹಿಸುತ್ತಾರೆ.

ಜನೆವರಿ ೧೦ ಹಾಗು ೧೧ ರಂದು ಶ್ರೀ ವೀರಭದ್ರೇಶ್ವರನ ಮೂರ್ತಿಗೆ ಎಣ್ಣೆ ಮಜ್ಜನ ಮಾಡಿಸುವುದರೊಂದಿಗೆ ಜಾತ್ರೆ ಕಾರ್ಯಕ್ರಮ ಆರಂಭಗೊಳ್ಳುತ್ತದೆ. ದಿನಾಂಕ : ೧೪ ರಂದು ಸಂಜೆ ದೇವರ ಪಲ್ಲಕಿ ಮೆರವಣಿಗೆಯೋಂದಿಗೆ ಜೇರ ಪೇಟೆಯ ಗೌಡರ ಮನೆಯ ಎದುರು ಶಲ್ಯ ಸುಡುವುದು ನಡೆಯುತ್ತದೆ. ಹಾಗೆಯೇ ಆ ಪಲ್ಲಕಿ ಮೆರವಣಿಗೆಯು ತೇರು ಮೈದಾನಕ್ಕೆ ಬಂದು ಅಲ್ಲಿಯೂ ಒಂದು ಶಲ್ಯವನ್ನು ಸುಡಲಾಗುತ್ತದೆ. ಇದು ವೀರಭದ್ರನ ಮದುವೆಯಲ್ಲಿ ಆರತಿ ಬೆಳಗುವಾಗ ಶಲ್ಯಸುಟ್ಟು ಹೋಗಿ ಆತನ ಲಗ್ನಕ್ಕೆ ಅಡಚಣೆಯಾಗಿ ಆ ಮದುವೆ ನಡೆಯಲಿಲ್ಲ ಎಂಬ ನೆನಪನ್ನು ಉಳಿಸಿಕೊಂಡಿರುವ ಒಂದು ಆಚರಣೆಯಾಗಿದೆ ಎಂದು ಹೇಳಲಾಗುತ್ತದೆ. ಆದರೆ ಜಾತ್ರೆಯಲ್ಲಿ ಶಲ್ಯಗೆ ಬೆಂಕಿ ಹಚ್ಚಿ ಅದನ್ನು ಮೇಲೆ ಹಾರಿಸಿ ಒಗೆಯುತ್ತಾರೆ, ಅದು ಯಾರ ಕೈ ಸೇರುತ್ತದೆಯೇ ಅವರಿಗೆ ಅದೃಷ್ಟ ಒಲೆಯುತ್ತದೆ ಎಂಬ ನಂಬಿಕೆಯೂ ಇಲ್ಲಿ ಬಲವಾಗಿದೆ. ದಿನಾಂಕ : ೧೫ ರಿಂದ ೧೯ರ ವರೆಗೆ ದೇವರ ಅತ್ಯಂತ ಸರಳವಾದ ಪಲ್ಲಕ್ಕಿ ಮೆರವಣಿಗೆಯ ಜೋತೆಯಲ್ಲಿ ಕಟ್ಟಿಗೆಯ ಮೆರವಣಿಗೆ ನಡೆಯುತ್ತದೆ. ಹಿಂದೆ ರಾಜ ರಾಮಚಂದ್ರನು ಈ ಜಾತ್ರೆಯಲ್ಲಿ ತಪ್ಪದೆ ಭಾಗವಹಿಸಿ, ಆನೆಯ ಮೇಲೆ ಕುಳೀತುಕೊಂಡು, ದೇವರ ಪಲ್ಲಕ್ಕಿಯೊಂದಿಗೆ ಮೆರವಣಿಗೆಯಲ್ಲಿ ಬರುತ್ತಿದ್ದನು, ಅದನ್ನು ತುಂಬಾ ವ್ಯವಸ್ಥೆಯೊಂದಿಗೆ ನಡೆಸಿಕೊಂಡು ಹೋಗುತ್ತಿದ್ದ ಕಾರಣಕ್ಕಾಗಿ ಜನ ಆ ರಾಜನ ನೆನಪಿಗಾಗಿ ಈ ಆನೆಯನ್ನು ಕಾಲಾನಂತರದಲ್ಲಿ ಬಳಸಿಕೊಂಡು ಬಂದಿರುವುದು ಇಲ್ಲಿಯ ವಿಶೇಷವಾಗಿದೆ.

ಜನೆವರಿ ೨೦ ರಿಂದ ೨೪ರ ವರೆಗೆ ಉಚಾಯಿ ಮೆರವಣಿಗೆ (ಅಂದರೆ ಸಣ್ಣದೊಂದು ತೇರನ್ನು ನಗರದ ಪ್ರಮುಖ ಬೀದಿಗಳಲ್ಲಿ ಎಳೆಯಲಾಗುತ್ತದೆ) ನಡೆಯುತ್ತದೆ. ಈ ತೇರಿನಲ್ಲಿ ಊರಿನ ಹೀರೆಮಠದ ಸ್ವಾಮಿಗಳು ಆಶೀನರಾಗಿರುವುದೊಂದು ವಿಶೇಷತೆ ಎನ್ನಬಹುದು.

೨೫ ನೇಯ ತಾರೀಖು ಈ ಜಾತ್ರೆಯ ಪ್ರಮುಖ ದಿನ ಬೆಳಗ್ಗೆ ಅಗ್ನಿ ಪೂಜೆಯ ಕಾರ್ಯಕ್ರಮ, ೨೬ರ ಬೆಳಗಿನ ಸಮಯದಲ್ಲಿ ಅಗ್ನಿ ತುಳಿಯುವ ಕಾರ್ಯಕ್ರಮ ಜರುಗುತ್ತದೆ. ವೀರಭದ್ರನು ಶಿವನ ಆಜ್ಞೆಯಂತೆ ದಕ್ಷಬ್ರಹ್ಮನ ತೊತ್ತಳದುಳಿದು ಹಾಳು ಮಾಡಿದುದರ ಸಂಕೇತವಾಗಿ ಅಗ್ನಿ ತುಳಿಯುತ್ತಾರೆ. –[೭]

ಇಲ್ಲಿ ವೀರಭದ್ರೇಶ್ವರನ ಭಕ್ತರು ಅದಕ್ಕೆ ಅಗ್ನಿ ತುಳಿಯುವುದು ಎನ್ನಲಾಗುತ್ತದೆ. ಅಂದು ವಿಶೇಷ ಅಲಂಕಾರಗೊಂಡಿರುವ ವೀರಭದ್ರೇಶ್ವರನ ಮೂರ್ತಿಯನ್ನು ವಿಜೃಂಭಣೆಯಿಂದ ಮೆರವಣಿಗೆಯಲ್ಲಿ ತುಳಿಯುತ್ತಾರೆ. ತುಂಬಾ ಶೃಂಗಾರಗೊಂಡ ರಸ್ತೆಯಲ್ಲಿ, ದೀವಟಿಗೆಗಳು, ಲೈಟಗಳ ಮಧ್ಯದಲ್ಲಿ ವಿವಿಧ ತಂಡಗಳ ಕಲಾ ಪ್ರದರ್ಶನ, ಮದ್ದು ಸುಡುವ ಕಾರ್ಯಕ್ರಮದಲ್ಲಿ ಈ ಮರೆವಣಿಗೆ ಸಾಗುತ್ತದೆ. ಸಾವಿರ ಸಾವಿರ ಜನ ಈ ಸಂದರ್ಭದಲ್ಲಿ ಆ ದೇವನ ಪೂಜಿಸಿ, ಶಲ್ಯ ಹೊದಿಸಿ ಸಂತೋಷಗೊಳ್ಳುತ್ತಾರೆ, ಹೂವಿನ ಹಾರ, ಕಾಯಿ ಕರ್ಪೂರ, ಪೇಡೆ ಮಂಡಕ್ಕಿಗಳನ್ನು ಅರ್ಪಿಸಿ ಮಂಗಳಾರತಿ ಮಾಡಿ ಪ್ರಯಾಣಕ್ಕೆ ಹಚ್ಚುವ ಈ ಸಂದರ್ಭವು ಶ್ರೀ ವೀರಭದ್ರನು ಯುದ್ಧಕ್ಕೆ ಹೊಟಿರುವುದನ್ನು ಸೂಚಿಸುತ್ತದೆ. ಈ ಮೆರವಣಿಗೆಯಲ್ಲಿ ಶಾಲಾ ಮಕ್ಕಳ ಅನೇಕ ಕಲಾ ತಂಡಗಳು ಸದಸ್ಯರು ಸರದಿಯಲ್ಲಿ ತಮ್ಮ ಕಾಲಾ ಉತ್ಸಹವನ್ನು ತೋರಿಸುತ್ತಾ ಹೋಗುತ್ತಾರೆ. ೨೬ರ ರಾತ್ರಿಯು ಇದೇ ತೆರನಾದ ವೈಭವ, ವಿಶೇಷತೆಗಳು ಜರುಗುತ್ತಿದ್ದು ೨೭ರ ಬೆಳಗಿನ ಸಮಯದಲ್ಲಿ ತೇರನ್ನು ಎಳೆಯಲಾಗುತ್ತದೆ. ಗುಡಿಯಿಂದ ಸುಮಾರು ೧ ಕಿಲೋ ಮೀಟರ ದೂರದಲ್ಲಿರುವ ತೇರ ಮೈದಾನದಲ್ಲಿಯೇ ಅಗ್ನಿ ಕುಂಡವಿದೆ, ಪ್ರತಿ ವರ್ಷ ಲಕ್ಷಕಿಂತ ಹೆಚ್ಚು ಜನ ಭಕ್ತರು ವಗ, ವರ್ಣ ಲಿಂಗ, ವಯಸ್ಸಿನ ಭೇದ ಭಾವಿಲ್ಲದೆ ಅಗ್ನಿ ತುಳಿಯುತ್ತಾರೆ. ಒಂದು ಲಕ್ಷಕಿಂತ ಹೆಚ್ಚು ಜನರು ಈ ಜಾತ್ರೆಯಲ್ಲಿ ಪಾಲ್ಗೊಂಡು ಎತ್ತರದ ಲೋಹದ ಈ ತೇರನ್ನು ಹೂ–ಹಾರ ಹಾಗೂ ವಿದ್ಯುತ್ ದೀಪಗಳಿಂದ ವಿಶೇಷವಾಗಿ ಅಲಂಕರಿಸುತ್ತಾರೆ. ನೋಡುಗರ ಮನದಲ್ಲಿ ಭಕ್ತಿ, ಭಾವ ಹೊಮ್ಮಿಸುವ ಈ ಜಾತ್ರೆಯು ರಾತ್ರಿಯಲ್ಲಿ ನಡೆಯುತ್ತಿರುವುದು ವಿಶೇಷವಾಗಿದೆ. ಹಾಗಾಗಿ ಮದ್ದು ಸುಡುವುದು, ಆಕಾಶದೀಪ ಹಾರಿಸುವುದು, ರಾತ್ರಿಯಲ್ಲಿ ಹೊಸ ಜಗತ್ತನ್ನು ಸೃಷ್ಟಿಸಿ ಇಲ್ಲಿ ತೋರುತ್ತವೆ.

ಊರಿಗೆ ಊರೇ ಸಹಭಾಗಿಯಾಗಿ ಜರುಗುವ ಈ ಜಾತ್ರೆಯಲ್ಲಿ ಗೌಡರು, ಕುಲಕರ್ಣಿ, ಹಿರೆಮಠದ ಸ್ವಾಮಿಗಳು, ಮಠಪತಿಯವರು, ಪತ್ರಿಯವರು, ಅಕ್ಕಸಾಲಿರು, ಕಂಬಾರ-ಕುಂಬಾರರು, ಬಡಗ-ನಾವಿದರು, ಪೂಜಾರಿ-ಬಜಾರದ ಜನರು, ಗುಡಿಸುವವರು, ದೀವಿಟಿಗೆ ಹೊರವವರು ಮೊದಲಾದ ಅನೇಕ ಸಕ್ರಿಯೆಯಿಂದ ಭಾಗವಹಿಸುತ್ತಾರೆ.ಈಗಂತೂ ಯುವಕರ ದಂಡೇ ಈ ಕಾರ್ಯಕ್ಕೆ ಸಿದ್ದವಾಗಿದ್ದು, ಜಾತ್ರೆಯ ಕ್ರಿಯಾಚರಣೆಗೆ ತಮ್ಮ ಹೆಗಲು ನೀಡಿ ಸಹಕರಿಸುತ್ತದೆ. ಒಟ್ಟಿನಲ್ಲಿ ಸಾಂಸ್ಕೃತಿಕ ಸಿರಿಯುಳ್ಳ ಈ ಜಾತ್ರೆಯು ಬೀದರ ಜಿಲ್ಲೆಯಲ್ಲಿ ವಿಶೇಷವಾಗಿದ್ದು, ಒಂದು ಅಪೂರ್ವ ಸಂಸ್ಕೃತಿಯನ್ನು ವತ್ತಿ ತೋರುವ ನೆಲೆಯಾಗಿದೆ ಎನ್ನಬಹುದು.

ಅಡಿ ಟಿಪ್ಪಣೆಗಳು :-

೧. ಸೋಮನಾಥ ಯಾಳವಾರ, ಸಂ. ಹುಮನಬಾದ ಶ್ರೀ ವೀರಭದ್ರ ಪು.೫

೨. ಸೋಮನಾಥ ಯಾಳವಾರ, ಸಂ. ಹುಮನಾಬಾದ ಶ್ರೀ ವೀರಭದ್ರ, ಪ್ರ.೭

೩. ಅದೇ. ಪು. ೭

೪. ಬಿ.ಬಿ. ಪೂಜಾರಿ, ವೀರಭದ್ರ. ಪು.೬

೫. ಪೂರ್ವೋಕ್ಷ, ಪು.೧೦

೬. ಅದೇ , ಪು.೧೨

೭. ಬಿ.ಬಿ. ಪೂಜಾರಿ, ವೀರಭದ್ರ. ಪು. ೩೭.

ಆಧಾರ ಗ್ರಂಥಗಳು :-

೧. Lord Veerabhadreshwar – Shri Bhimarao Patil

೨. ಅಪ್ರಕಟಿತ ವೀರಭದ್ರೇಶ್ವರ ಪುರಾಣ.

೩. ವೀರಭದ್ರ – ಡಾ. ಬಿ.ಬಿ. ಪೂಜಾರ.

೪. ಭಕ್ತ ವತ್ಸಲ – ಡಾ. ಬಿ.ಬಿ. ಪೂಜಾರ.

೫. ಶ್ರೀ, ವೀರಭದ್ರ ದೇವರ ಚರಿತೆ – ರಾಗಿ ಶರಣಬಸಯ್ಯಾ

೬. ಹುಮನಾಬಾದ ತಾಲೂಕು ದರ್ಶನ –ಸಂ. ಸೋಮನಾಥ ಯಾಳವಾರ.



ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾಬಾದ



ಶ್ರೀ ವೀರಭದ್ರೇಶ್ವರ ದೇವಸ್ಥಾನದ ಗರ್ಭ ಗೃಹ ದಲ್ಲಿರುವ ವೀರಭದ್ರೇಶ್ವರ ಮೂರ್ತಿ





ಹುಮನಾಬಾದ ಬಸವತೀರ್ಥ ಮಠ

'ಹನ್ನೆರಡು ಗ್ರಾಮದಳತೆಯು ಮುನ್ನತಿಯ ಕಲ್ಯಾಣಪರವಂ -[೧] ಎಂಬ ಭೀಮಕವಿಯ ಹೇಳಿಕೆಯಂತೆ, ಶರಣರ ಕಾಲದಲ್ಲಿ ಕಲ್ಯಾಣದ ವ್ಯಾಪ್ತಿ ಹನ್ನೆರಡು ಗ್ರಾಮದಳತೆಯದಾಗಿತ್ತು. ಈ ಹನ್ನೆರಡು ಯೋಜನೆಯಡಿಯಲ್ಲಿ ಬರುವ ಪ್ರದೇಶ ಹುಮನಾಬಾದದ ಬಸವತೀರ್ಥ, ಹುಮನಾಬಾದದಿಂದ ಸುಮಾರು ಮೂರು ಕಿ.ಮೀ ದೂರದಲ್ಲಿರುವ ಈ ಕ್ಷೇತ್ರದಲ್ಲಿ ಒಂದು ಮಠವಿದೆ. ಅದಕ್ಕೆ 'ಬಸವತೀರ್ಥ ಮಠ' ವೆಂದು ಹೆಸರು ಹಚ್ಚ ಹಸುರಿನ ನಿಸರ್ಗದ ಮಧ್ಯದಲ್ಲಿರುವ ಈ ತಾಣ ಪ್ರೇಕ್ಷಣೀಯ ಸ್ಥಳವಾಗಿದೆ. ಹನ್ನೆರಡನೆಯ ಶತಮಾನದ ಕಲ್ಯಾಣ ಕಾಂತ್ರಿಯ ಹರಿಕಾರ ಶರಣ ಜನ ಹೃದಯದಂತಿದ್ದ ಬಸವಣ್ಣನವರ ಸ್ಮಾರಕ ಅಂತೆಯೇ ಇದಕ್ಕೊಂದು ವಿಶೇಷವಾದ ಮಹತ್ವವಿದೆ.

ಬಸವಣ್ಣನವರು ಈ ಸ್ಥಾನದಲ್ಲಿ ಇದುಕೊಂಡು, ಒಂದು ದಿನ ಇಷ್ಟಲಿಂಗ ಪೂಜೆ ನೆರವೇರಿಸಿಕೊಂಡು ಹೋಗಿದ್ದಾರೆಂದು ಪ್ರತೀತಿಯಿದೆ. ಬಸವಾದಿ ಪ್ರಮಥರು ಇಷ್ಟಲಿಂಗ ಪೂಜೆ ಮಾಡಿಕೊಳ್ಳತ್ತಿರುವಾಗ ಒಂದು ಹಿಡಿಪಾದೋದಕವು ನೆಲಕ್ಕೆ ಚೆಲ್ಲಿತ್ತು ಅದನ್ನು ಶರಣರು ಸವರಿ ಮೈಯಿಗೆ ಹಚ್ಚಿಕೊಳ್ಳುತ್ತಾ ಹೊದರು. ಎಲ್ಲಾ ಶರಣರು ನೆಲವನ್ನು ಸವರಿದ್ದರಿಂದ ಅಲ್ಲಿ ಒಂದು ಗುಂಡವಾಗಿ ರೂಪಗೊಂಡು ಅದರಲ್ಲಿ ನೀರು ಬಂತು. ಅವಾಗ ಅದು ತೀರ್ಥ ಎನಿಸಿತು. ಬಸವಣ್ಣನವರಿಂದ ಈ ತೀರ್ಥರೂಪಗೊಂಡಿರುವುದರಿಂದ ಇದಕ್ಕೆ ಬಸವತೀರ್ಥ ಎಂಬ ಹೆಸರು ಅನ್ವರ್ಥಕವಾಯಿತು. ಈಗಲೂ ಸಹ ಆ ಗುಂಡದ (ಈಗ ಭಾವಿಯಾಗಿದೆ) ನೀರು ಟೆಂಗಿನ ಹಾಲಿನಂತಿದ್ದು ಸದಾ ಅದರಲ್ಲಿ ನೀರುತ್ತದೆ. ಅಲ್ಲಿಗೆ ಹೋದ ಪ್ರಾವಾಸಿಗರು ಆ ನೀರನ್ನು ಸವಿದು ಅದರ ಗುಣಗಾನ ಮಾಡುತ್ತಲೆ ಬರುತ್ತಾರೆ. ವಿಶಾಲವಾದ ಮಾವಿನ ತೋಪಿನಲ್ಲಿರುವ ಈ ಬಸವತೀರ್ಥವು ಅಲ್ಲಿಗೆ ಭೇಟ್ಟಿ ಕೊಟ್ಟು ಜನರ ಮೇಲೆ ಧನ್ಯತೆಯ ಪ್ರಭಾವನ್ನು ಮೂಡಿಸುತ್ತದೆ. ಕಲ್ಯಾಣ ಬಿಟ್ಟು ಬಸವಣ್ಣನವರು ಕೂಡಲ ಸಂಗಮಕ್ಕೆ ಹೋಗುವ ಸಂದರ್ಭದಲ್ಲಿ ಇಲ್ಲಿ ತಂಗಿ ಹೋಗಿರಬಹುದು ಎನಿಸುತ್ತದೆ.

ಬಸವತೀರ್ಥದ ಉಲ್ಲೇಖವನ್ನು ಹರಿಹರಾದಿ ಕವಿಗಳ ಕಾವ್ಯಗಳಲ್ಲಿ ಕಾಣಲಾಗದು. ಸಿಂಗಿರಾಜನ 'ಅಮಲ ಬಸವ ಪುರಾಣ' ದಲ್ಲಿ ಇದರ ಉಲ್ಲೇಖವಿದೆ. ನಲವತೆಂಟ್ಟು ಸಂಧಿಗಳಷ್ಟು ಸುದೀರ್ಘವಾಗಿರುವ ಈ ಪುರಾಣ ಕಾವ್ಯವು ಬಸವಣ್ಣನವರ ಜೀವನ ವೃತ್ತಾಂತಕ್ಕೆ ಮೀಸಲಾಗಿದೆ. ಬಸವಣ್ಣನವರ ಇತರ ವಿಷಯಗಳಿಗೆ ಹೆಚ್ಚ ಗಮನ ಹರಿಸದೆ ಆತ ಮೆರೆದನೆನ್ನಲಾದ ಅರವತ್ನಾಲ್ಕು ಪವಾಡಗಳನ್ನು ವರ್ಣಿಸುತ್ತಾನೆ. ಆದರೂ ಪವಾಡಗಳನ್ನು ಜೀವನದ ವಾಸ್ತವಿಕ

ಚಿತ್ರಗಳೊಂದಿಗೆ ಹಣೆದು ಸಾಮಾನ್ಯರಂತೆಯೇ ಬಸವಣ್ಣನೂ ಕಷ್ಟಗಳನ್ನು ಎದುರಿಸುಬೇಕಾಯಿತೆಂಬುದನ್ನು ಆತ ಹೇಳಲು ಮರೆಯುವುದಿಲ್ಲ. ಇದರಿಂದಲೇ ಈ ಕೃತಿಗೆ ಮಹತ್ವವಿದೆ. ಇದರಲ್ಲಿಯ ಒಂದು ಪವಾಡದ ನಿರೂಪಣೆಯ ಪ್ರಸಂಗದಲ್ಲಿ 'ಬಸವತೀರ್ಥ'ದ ಪ್ರಸ್ತಾಪವಿದೆ. ಸಿಂಗಿರಾಜನ 'ಬಸವತೀರ್ಥ'ದ ಪ್ರವೇಶವುನ್ನು ಮತ್ತಿಗಟ್ಟೆ ಎಂಬ ಕರೆಯುತ್ತಾನೆ. (ಇಲ್ಲಿ ಆ ಕಾಲದಲ್ಲಿ ಮತ್ತಿಗಿಡಗಳು ಬಹಳವಾಗಿ ಬೆಳಯುತ್ತಿದ್ದರು) ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಬಸವಣ್ಣನವರು ಕೆಲವು ಶರಣರೊಂದಿಗೆ ಇಲ್ಲಿ ಬಂದು ತಂಗಿದ್ದರು. ಆ ಸಂದರ್ಭದಲ್ಲಿ ಅವನೊಂದಿಗೆ ಹೆಂಡತಿ ನೀಲಾಂಬಿಕೆ ಮಗ ಬಾಲ ಸಂಗಯ್ಯ ಜೋತೆಯಲ್ಲಿದ್ದರು, ಶಿವಪೂಜೆ ಮಾಡಿ ಕೊಳ್ಳವಾಗ 'ಪಾದೋದಕದ ಹನಿ' ನೆಲಕ್ಕರುಳಿ ಸಕಲ ಶರಣರು ಅದನ್ನು ಒರಸಿ ಮೈಗೆ ಹಚ್ಚಿಕೊಂಡಿದ್ದರಿಂದ ಅಲ್ಲಿ ಗುಂಡಾವಾಗಿ ಅದರಲ್ಲಿ ನೀರು ಬಂದಿದ್ದು ಅದು ತೀರ್ಥವಾದದ್ದು ಒಂದಾದರೆ, ಇನ್ನೋಂದು ಪವಾಡವನ್ನು ಹೀಗೆ ಹೇಳುತ್ತಾನೆ ಕವಿ ಅದೇ ಸಂದರ್ಭದಕ್ಕೆ ಬಾಲ ಸಂಗಯ್ಯನನ್ನು ಒಂದು ಹಾವು ಕಚ್ಚಿ ದರ್ಮರಣ ಸಂಭವಿಸಿದ್ದು, ಆ ಹಾವು ಸಮೀಪದ ಹುತ್ತವನ್ನು ಸೇರಿಕೊಂಡದ್ದು ಗಮನಿಸಿ, ಕೆಲವರು ಆ ಹಾವು ಹೊಡೆಯಲಲು ಪ್ರಯತ್ನಿಸಿದ್ದು, ಅಲ್ಲಿ ಪೆಟ್ಟಿಗೆಯಲಿ ಬಂಗಾರ ಕಂಡು, ಕೆಲವರು ಅದನು ಕಲ್ಯಾಣದಲ್ಲಿ ಮಾರಲು ಹೋಗಿ ಚಾಡಿಕೋರರಿಂದ ಬಿಜ್ಜಳನಿಗೆ ಸಿಕ್ಕಿಬಿದ್ದು ಬಸವನ ಮೇಲೆ ಆಪಾದನೆ ಬರುವುದು ನಂತರ ಬಿಜ್ಜಳ ಪೆಟ್ಟಿಗೆ 'ಒಡೆದು ನೋಡಿದರೆ ಹಾವು ಕಾಣಿಸುವುದನ್ನು ತಿಳಿಸುತ್ತಾನೆ. ಬಿಜ್ಜಳನು ಬಂದು ಬಸವಣ್ಣನಲ್ಲಿ ಕ್ಷೆಮ ಕೇಳಿ, ಅವರನ್ನು ಕೂಡಲ ಸಂಗಮಕ್ಕೆ ಕಳಿಸಿಕೊಡವ ದೃಶ್ಯವಿದೆ, ಆ ಸಂದರ್ಭದಲ್ಲಿ ಪೆಟ್ಟಿಗೆಯನ್ನು ಮರಲು ಹೋದವನನ್ನು ಶೀಲವಂತ ಶಾಂತಯ್ಯನೆಂದು ಉಲ್ಲೇಖಿಸಲಾಗಿದೆ. ಪುರಾಣಕಾರನ ಈ ಹೇಳಿಕೆಗೆ ಮೂಲ ಆಧಾರ ಎಲ್ಲಿಯದು ಎಂಬುದನ್ನು ಶೋಧಿಸಬೇಕಾಗಿದೆ. ಇದನ್ನು ಪುರಾಣದ ಒಂದು ಪವಾಡದ ಕಲ್ಪನೆಯನ್ನಲು ಬೇರೆ ಆಧಾರಗಳು ಬೇಕು.

ಅದು ಎನೆ ಇರಲಿ ಈ ಸ್ಥಾನವು ಬಸವಣ್ಣನವರು ಕೆಲವು ಶರಣರ ಜೋತೆಗೆ ಬಂದು ತಂಗಿ ಹೋಗಿರುವ ಪವಿತ್ರ ಸ್ಥಾನ ಎಂಬುದಕ್ಕೆ ಎರಡು ಮಾತಿಲ್ಲ. ಈಗ ಇದೇ ಸ್ಥಾನದ ಮುಂಭಾಗದಲ್ಲಿ ಒಂದು ಮಠವನ್ನು ಕಟ್ಟಲಾಗಿದ್ದು, ಮಠವು ಸುಮಾರು ೬ನೇ ಶತಮಾನದ ಹಿಂದಿನದಿರಬಹುದು. ಈ ಮಠವನ್ನು ಹುಮನಾಬಾದದ ಪ್ರಸಿದ್ದ ಮನೆತನವಾದ 'ತಾಂಡೂರ'ವರ ಮೂಲ ಪುರುಷರು ಕಟ್ಟಿಸಿಕೊಟ್ಟಿದ್ದು ಪ್ರತಿ ವರ್ಷ ಮಠದ ನಿಶಾನೆಯನ್ನು ಅವರೇ ಕಟ್ಟುತ್ತಿದ್ದಾರೆ. ಬಸವ ಸಂಪ್ರದಾಯದ ಈ ಮಠಕ್ಕೆ ಈಗಾಗಲೇ ಕ್ರಿಯಾ ಮೂರ್ತಿ ಸಿದ್ಧ ಬಸವಸ್ವಾಮಿ, ವೈರಾಗ್ಯತಿಗಳಾಗಿ ಲಿಂಗೈಕ್ಯರಾಗಿದ್ದಾರೆ ಈಗ ಈ ಮಠದ ಪೀಠಾಧಿಪತಿಗಳಾಗಿ ಶ್ರೀ ಚನ್ನಬಸವಸ್ವಾಮಿ ವಿರಕ್ತಮಠ ಅವರು ಬಸವಾದಿ ಶರಣರ ತತ್ವ ಚಿರತನೆಯ ಪ್ರಸಾರ

ಹಾಗೂ ಪ್ರಚಾರದಲಿ ಸೇವೆ ಸಲ್ಲಿಸುತ್ತ ಇಂಗಳೇಶ್ವರದಲ್ಲಿರುವರು. ಅವರ ಶಿಷ್ಯ ಡಾ॥ ಸಿದ್ಧಲಿಂಗಸ್ವಾಮಿಗಳು ಮಠಕ್ಕೆ ಮುಂದಿನ ಅಧಿಪತಿಗಳು. ಇದು ಈ ಭಾಗದ ಬಸವಸ್ಮೃಣೆಯ ಒಂದು ಮುಖ್ಯ ಕೇಂದ್ರ ಎಂಬುದನ್ನು ಅರಿಯಬಹುದು. ಮಠದಲ್ಲಿ ೪ ಸ್ವಾಮಿಗಳ ಸಮಾಧಿಗಳಿವೆ ಸಿದ್ಧ ಬಸವರ ಮೂರ್ತಿಯಿದೆ.

ಅಡಿ ಟಿಪ್ಪಣಿಗಳು :–

೧. ಸೋಮನಾಥ ಯಾಳವಾರ, ಬೀದರ ಜಿಲ್ಲ ಶರಣ ಸ್ಮಾರಕಗಳು ಪು. ೬೨

೨. ಅದೇ, ಪು. ೬೩

೩. ಅದೇ, ಪು. ೬೩



ಬಸವತೀರ್ಥದಲ್ಲಿರುವ ಪ್ರಾಚೀನ ಮಠ





ಬಸವತೀರ್ಥದಲ್ಲಿರುವ ತೀರ್ಥಗುಂಡಾ (ಬಾವಿ)



ಬಸವತೀರ್ಥದ ಈಗಿನ ಮಠ





ಮೋಳಕೇರಾ

ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಐತಿಹಾಸಿಕ ಸ್ಥಳಗಳಲ್ಲಿ ಮೋಳಕೇರಾ ಅತ್ಯಂತ ಪ್ರಮುಖ ಸ್ಥಳವಾಗಿದೆ. ಇದು ತಾಲ್ಲೂಕಾ ಕೇಂದ್ರದಿಂದ ಕೇವಲ ೬ ಕಿ.ಮೀ. ದೂರದ ರಾಷ್ಟ್ರೀಯ ಹೆದ್ದಾರಿ ೯ರ ಮೇಲಿದೆ, ಇದು ಒಂದು ಐತಿಹಾಸಿಕ, ಧಾರ್ಮಿಕ & ಪ್ರೇಕ್ಷಣೀಯ ಸ್ಥಳವಾಗಿದೆ, ಈ ಗ್ರಾಮ ಅತ್ಯಂತ ರಮಣೀಯ ಹಾಗೂ ನೈಸರ್ಗಿಕ ಸೌಂದರ್ಯದಿಂದ ಕಂಗೊಳಿಸುವ ಸ್ಥಳ ಹಲವು ದೇವಾಲಯಗಳ, ಗುಹೆಗಳ ನೆಲ ಈ ಗ್ರಾಮದಲ್ಲಿ ಮೋಳಿಗೆ ಮಾರಯ್ಯ, ವೀರಭದ್ರ, ರೇವಪಯ್ಯ, ಲಕ್ಷ್ಮೀ ಹೀಗೆ ಹಲವಾರು ದೇವಾಲಯಗಳಿವೆ. ಈ ಗ್ರಾಮ ಐತಿಹಾಸಿಕ ಸ್ಥಳವಾಗಿ ಮಾರ್ಪಡಲು ಇಲ್ಲಿರುವ ಮೋಳಿಗೆ ಮಾರಯ್ಯನವರ ಗವಿ.

ಇದು ಭೂಮ್ಯಾಂತರ್ಗತವಾದ ಗವಿ ಮೆಟ್ಟಿಲುಗಳ ಮೂಲಕ ಇಳಿಯಬೇಕು. ಜಂಬಿಟ್ಟಿಗೆಯ

ಪ್ರಸ್ಥಭೂಮಿಯೋಳಗೆ (Plateam) ಈ ಗುಹೇಯನ್ನು ಕೋಣೆ ಹಾಗೂ ಸ್ತಂಭ (Room & Pillar Method) ಎಂಬ ಗಣಿಗಾರಿಕೆ. ವಿಧಾನದಲ್ಲಿ ಕೊರೆಯಲಾಗಿದೆ. ಸುಮಾರು ೫೦ ಅಡಿಗಳಷ್ಟು ಉದ್ದಗಲ ಬಾಗಿರುವ ಈ ಗವಿ ತುಂಬಾ ವೈಶಿಷ್ಟಯ ಪೂರ್ಣವಾಗಿದೆ. ಇಲ್ಲಿಯೇ ಮೊಳಿಗೆಯ ಮಾರಯ್ಯ ದಂಪತಿಗಳು ವಾಸವಾಗಿದ್ದರು, ಆದರಿಂದ ಈ ಸ್ಥಾನಕ್ಕೆ ಕಾಶ್ಮೀರದ ದೊರೆಯಾಗಿದ್ದ ಮಹಾದೇವ ಭೂಪಾಲನು ಶರಣನಾಗಿದ್ದ, ಅವರ ಸ್ಮಾರಕವಾಗಿ ಪ್ರಾಚೀನ ಕಾಲದಿಂದಲೂ ಉಳಿದು ಬಂದಿರುವ ಗವಿಯಿದು.

ಮೋಳಗೆ ಮಾರಯ್ಯನವರ ಚರಿತ್ರೆ :-

ಮೋಳಗೆ ಮಾರಯ್ಯನವರ ಚರಿತ್ರೆಯನ್ನು ಅರಿಯಲು ಎರಡು ಪ್ರಮುಖ ಘಟ್ಟಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಒಂದು ಭಾಗ ಕಾಶ್ಮೀರ ಜಿವನಕ್ಕೆ ಸಂಬಂಧಿಸಿದ್ದು, ಇನೋಂದು ಕಲ್ಯಾಣ ಜೀವನಕ್ಕೆ ಸಂಬಂಧಿಸಿದ್ದು.

ಪುರಾಣಕಾರರು ಅವರ ಜೀವನವನ್ನು ಇನ್ನೂಳಿದ ಶರಣರಂತೆಯೇ ಪವಾಡಗಳ ಪರಂಪರೆಯಲ್ಲಿ ಮುಳುಗಿಸದೆ ಬಿಟ್ಟಿಲ್ಲ. ಆ ಪವಾಡಗಳ ಹಿನ್ನೆಲೆಯಲ್ಲಿರುವ ಸತ್ಯವನ್ನು ಕಾಣುವುದು ಕಷ್ಟವೇನಲ್ಲ ವಿವಿಧ ಪುರಾಣಗಳಲ್ಲಿ ಬಂದಿರುವ ಅವರ ಜೀವನ ಚರಿತ್ರೆಯ ಮುಖ್ಯಂಶಗಳನ್ನ ಇ ಕೆಳಗಿನಂತೆ ಸಂಕ್ಷೇಪಿಸಿ ಹೇಳಬಹುದು .

ಮೊಳಿಗೆ ಮಾರಯ್ಯನವರು ಕಾಶ್ಮೀರದ ಮಾಂಡವ್ಯಪರು ಗಂಗಾದೇವಿಯೆಂಬ ಧರ್ಮಪತ್ನಿ & ಲಿಂಗಾರತಿಯೆಂಬ ಮಗನೊಡನೆ ಗೃಹಸ್ಥ ಜೀವನ ನಡೆಸಿಕೊಂಡು ಜಂಗಮ ಸೇವೆ ಮಾಡುತ್ತಾ ಮಹಾದೇವ ಭೂ ಪಾಲನು ಸವಾಪಾದ (ಸಪಾದಲಕ್ಷ) ದೇಶಾಧಿಪತಿಯನಿಸಿದ್ದನು ಇವನಲ್ಲಿ ೬೦೦೦ ಜಂಗಮ ಸಮೂಹವಿತ್ತು. ಶೂನ್ಯ ಸಂಪಾದನೆಯಲ್ಲಿ ಬರುವ ಮೋಳಿಗೆ ಮಾರಯ್ಯನ ಸಂಪಾನೆಯಲಿ ಗುಳುರು ಸಿದ್ದವೀರಣ್ಣಾರ್ಯರು.

ಮೋಳಿಗೆ ಮಾರಯ್ಯನೆಂಬ ಶರಣನು
ಕಾಶ್ಮೀರ ದೇಶಾಧಿಪತಿತ್ವದಿಂದರುತಿರ್ದು–[೨]

ಈ ಒಂದು ಹೇಳಿಕೆ ನೋಡಿದಾಗ ಮೋಳಿಗೆ ಮಾರಯ್ಯ ಕಾಶ್ಮೀರ ರಾಜ್ಯದವನು ಎಂದು ಹೇಳಬಹುದು.

ಒಮ್ಮೆ ಬಸವಣ್ಣನವರು ಬಣಜಿಗನ ವೇಷ ಧರಿಸಿ ಒಂದು ಈ ಜಂಗಮರನ್ನೆಲ್ಲ ಕಲ್ಯಾಣಕ್ಕೆ ಕರೆದುಕೊಂಡು ಬಂದರು. ಜಂಗಮರಲ್ಲಿ ಅತ್ಯಂತ ಭಕ್ತಿಯಿಂದ ಇದ್ದ ಮಹಾದೇವ ಭೂಪಾಲನಿಗೆ ಜಂಗಮರು ಹೊರಟು ಹೋದ ಸುದ್ದಿ ಕಳವಳಕ್ಕೀಡು ಮಾಡಿತು.

ಬಸವಣ್ಣನೆ ಜಂಗಮರನ್ನು ಕರೆದಕೊಂಡು ಹೋಗಿದ್ದಾನೆ ಎಂಬ ಸುದ್ದಿಯನ್ನು ಕೇಳಿದ ಭೂಪಾಲ ಬಸವಣ್ಣನನ್ನು ಕೊಂದು ಬರಲು ನಿಜಲಿಂಗ ಚಿಕ್ಕಯ್ಯನೆಂಬುವನನ್ನು ಕಲ್ಯಾಣಕ್ಕೆ ಕಳುಹಿಸುತ್ತಾನೆ. ಅವನು ಜಂಗಮ ವೇಷ ಧರಿಸಿ ಬಸವಣ್ಣನ ಮಹಾಮನೆಯನ್ನು ಪ್ರವೇಶ ಮಡಿ ಅವನನ್ನು ಕೊಲ್ಲಲು ಸಮಯ ಕಾಯುತ್ತಿದ್ದರು. ಒಂದು ದಿನ ಕೊಲ್ಲಲು ಸಿದ್ದತೆಗಳನೆಲ್ಲ ಮಾಡಿಕೊಂಡು ಬಸವಣ್ಣನ ಎದುರಿಗೆ ಹೋಗಿ ನಿಂತೊಡನೆ ಬಸವಣ್ಣನವರ ಪುರುಷ್ಯ (ದಿವ್ಯ) ದೃಷ್ಟಿಗೆ ಬಿದ್ದನು. ಕುಡಲೆ ಅವನ ದುಷ್ಟ ಭಾವನೆಗಳೆಲ್ಲ ತೊಲಗಿ ಮನಸ್ಸು ಪರಿವರ್ತನೆಯಾಗಿ ಬಸವಣ್ಣನಿಗೆ ನಮಸ್ಕರಿಸಿ ಕ್ಷಮೆ ಬೇಡಿ ಕಲ್ಯಾಣದಲ್ಲಿಯೇ ಕಾಯಕ ಸದ್ಭಾವದಿಂದ ಜೀವನ ಸಾಗಿಸತೊಡಗಿದ.

ಇತ್ತ ಕಾಶ್ಮೀರದಲ್ಲಿ ಮಹಾದೇವ ಭೂಪಾನು, ಕೆಲವು ದಿನಗಳ ಕಾಲ ಚಿಕ್ಕಯ್ಯನ ದಾರಿಯನ್ನು ನೊಡಿದನು. ನಿಜವೃತಾರತದ ಅರಿವಾಯಿತು. ಅವನ ಭಾವನೆಯ ಪರಿವರ್ತಿನೆಗೊಂಡಿತು. ಬಸವಣ್ಣ ವಿಷಯಕವಾಗಿ ಸದ್ಭಾವ ಮೂಡಿತು. ವೈರಾಗ್ಯ ಮೂಡಿ ಮಗನಾದ ಲಿಂಗಾರತಿಗೆ, ಪಟ್ಟಗಟ್ಟಿಬಂದನೆಂದು ಕೆಲವು ಗ್ರಂಥಗಳ ಹೇಳುತ್ತವೆ ಮೋಳಿಗೆ ಮಾರಯ್ಯಗಳ ಪುರಾಣದಲ್ಲಿ.

ಧರಣಿಪನಾ ಅವಸರ ದೊಳಗೇಳುತ ಈಶ್ವರ ಪೂಜೆ ಮಾಡಿ ಕಾಶ್ಮೀರಧರೆಯ ಸುಸ್ಥಿರವಿ ಪಾಲಿಪ್ರದೆಂದು ತನ್ನ ಕುವರ ಲಿಂಗಾರತಿಗೆ ಎಂಬವನಿಗೆ –[೩]

ಕಲ್ಯಾಣದ ಕಡೆ ಮುಖ ಮಾಡಿ ಪ್ರಯಾಣ ಬೆಳೆಸಿ ಕಾಲುನಡಿಗೆಯಿಂದಲೇ ಬಂದು ತಲುಪಿದರು. ಬಸವಣ್ಣನವರ ಆಕರ್ಷಣೆಗೆ ಒಳಗಾಗಿ ಮೋಳಿಗೆ ಮಾರಯ್ಯ ರಾಜ್ಯ ತ್ಯಾಗ ಮಾಡಿ ಕಲ್ಯಾಣಕ್ಕೆ ಬಂದಿರುವುದರಲ್ಲಿ ಸಂಶಯವಿಲ್ಲ. ಬಸವಣ್ಣನವರ ಪ್ರಭಾವಕ್ಕೊಳಗಾಗಿ ತಾವು ಬಂದೆವೆಂದು ತಮ್ಮ ವಚನಗಳಲ್ಲಿ ಸ್ಪಷ್ಟವಾಗಿ ನುಡಿದ್ದಾರೆ.

ಹಿಂದೆನಿ ಬಂದೆ ನಾನಾ ಭವಂಗಗಳಲ್ಲಿ
ನಾನು ವ್ಯಾಪಾರಕ್ಕೆ ನೀನೊಡೆಯನಾಗಿ,
ಮರ್ತ್ಯದ ಸುಖದುಃಖ ನಿನಗೆ ನಿಶ್ಚಿಂತವಾಗಿ ಪರ್ಿದು,
ನೊಂದುದಿಲ್ಲ ಬಂದೆನ ಬಸವಣ್ಣ ಕಥನದಿಂದೆ. –[೪]

ಈ ವಚನದಲ್ಲಿ ಬಸವಣ್ಣನವರ ಕಥನ ಕೇಳಿ ಬಂದಂತೆ ಸ್ಪಷ್ಟವಾಗಿ ನುಡಿದಿದ್ದಾರೆ.

ಮಾರಯ್ಯನವರು ಕಲ್ಯಾಣಕ್ಕೆ ಬರುವ ಸುದ್ದಿ ಬಸವಣ್ಣನಿಗೆ ಗೊತ್ತಾಗಿ ಶಿವಶರಣ ಸಮೂಹದೊಡನೆ ವೈಭವದಿಂದ ಎದುರ್ಗೊಂಡು ಅದರದಿಂದ ಬರಮಾಡಿಕೊಂಡರು ಮಾರಯ್ಯನವರಿಗೆ ಬಸವಣ್ಣನಲ್ಲಿ ಅತ್ಯಂತ ಗೌರವ ಭಾವನೆ ಮೂಡಿತ್ತು. ಅನುಭವ ಮಂಟಪದ ಸದಸ್ಯರಾಗಿ ಮಹಾದೇವ ಭೂಪಾಲ ಮೋಳಿಗೆ ಮಾರಯ್ಯನೆಂಬ ಹೊಸ ಹೆಸರು ಪಡೆದರು. ಅಂತಯೆ ಗಂಗಾದೇವಿ ಮಹಾದೇವಿ ಎಂದು ನಾಮಕರಣ ಹೊಂದಿ ಕಲ್ಯಾಣದ ಹೊರಗಡೆ ಪ್ರದೇಶಲ್ಲಿ ಒಂದ ಚಿಕ್ಕ ಗುಡಿಸಲು ಕಟ್ಟಿಕೊಂಡು ವಾಸಿಸತೊಡಗಿದರು. ಅನುಭವ ಮಂಟಪದ ನಿಯಮದಂತೆ ಕಟ್ಟಿಗೆ ಕಾಯಕ ಮಾಡತೊಡಗಿದರು. ಕಟ್ಟಿಗೆಯ ಕಾಯಕ ವಚನ ವ್ಯಾಪ್ತಿಯಲ್ಲಿ ಮೋಳಿಗೆ, ಎಂದರೇ ಕಟ್ಟಿಗೆಯ ಹೊರೆ ಪ್ರತಿನಿತ್ಯ ಮುಂಜಾನೆ ಹೋಗಿ ಮರಗಳ ಒಣಗಿದ ಟೋಂಗೆಗಳು ಕತ್ತರಿಸಿ, ಮೋಳಿಗೆ ಕಟ್ಟಿಗೆ ತಲೆ ಮೇಲೆ ಹೊತ್ತು ಕಲ್ಯಾಣದ ಬೀದಿ ಬೀದಿಗಳಲ್ಲಿ ಅಲೆದು , ಶರಣ ಮನೆಗಳಿಗೆ ಕಟ್ಟಿಗೆ ತಲುಪಿಸಿ ಅವರಿಂದ ದೊರೆತ ಅಲ್ಪ ಹಣದಲ್ಲಿ ಅಂದಿನ ದಾಸೋಹ ನಡೆಸುತ್ತಿದ್ದರು, ಮಾರಯ್ಯನವರ ಇದು ಅವರ ನಿತ್ಯಾ ಸತ್ಯ ಕಾಯಕವಾಗಿತ್ತು. ಈ ಕಾಯಕಕ್ಕೆ ಚ್ಯುತಿ ಬರದಂತೆ ಅವರು ವರ್ತಿಸುತ್ತಿದ್ದರು.

ಮಹಾದೇವಿಯವರು ಧಾನ್ಯಗಳು ಹಸನ ಮಾಡಿ ಅವುಗಳನ್ನು ಬಿಸಿ ಹಿಟ್ಟು ಮಾಡಿ ಅದರಿಂದ ರುಚಿಕಟ್ಟಾದ ಅಂಬಲಿ ತಯಾರಿಸುತ್ತಿದ್ದರು, ಶಿವನಿಗೆ ಅಂಬಲಿಯನ್ನು ಅರ್ಪಿಸಿ ಬಂದ ಜಂಗಮರಿಗೆ ಅನ್ನ ದಾಸೋಹ ಮಾಡುತ್ತಿದ್ದರು,

ಅವರು ರುಚಿಯಾದ ಅಂಬಲಿಗೆ ನಿತ್ಯ ಜಂಗಮರು ಹಂಬಲಿಸಿ ಯಾವಾಗ ನೀಡುವರೋ ಎಂದು ಕಾಯುತ್ತಿದ್ದರು.

ಮಾರಯ್ಯನವರ ಕಾಯಕ ಪ್ರಭಾವಃ–

ಮೋಳಿಗೆ ಮಾರಯ್ಯನವರ ಕಾಯಕ ಸದ್ಭಾವ ಉದಾರ ಚರಿತವು ಶಿವಶರಣರ ಸಮೂಹದ ಮೆಲೆ ಅತ್ಯಂತ ಪ್ರಭಾವದ ಮುದ್ರೆಯೊತ್ತಿದ್ದೆ. ಎಲ್ಲಾ ಶರಣರು ಅವರನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಸಾಕ್ಷಾತ್ ಬಸವಣ್ಣನವರೆ ಮಾರಯ್ಯನವರನ್ನು –[೪]

ಭಕ್ತಿ ವಿಶೇಷವ ಮಾಡುವರ ಹತ್ತು ಬೆರಳುಂಟು
ಹಾಸಿ ದುಡಿವರೆ ತನಗುಂಟು ತನ್ನ ಶರಣರಿಗುಂಟು
ಮೋಳಿಗೆ ಮಾರಯ್ಯಾ ತಂದೆಗಳಂತೆ ಎನಗೇಕಹುದಯ್ಯ
ರತ್ನ ಸಂಕಲೆಯನಿಕ್ಕಿ ಕಾಡಿಡಿಹನಯ್ಯ ಕೂಡಲ ಸಂಗಮದೇವ
ಶಿವ ಧೋ ಶಿವಧೋ –[೫]

" ಮೋಳಿಗೆಯ ಮಾರಿ ತಂದೆ " ಎಂಬ ಅತ್ಯಂತ ಗೌರವಾರ್ಹ ಪದ ಪ್ರಯೋಗಿಸಿದು ಕಂಡು ಬರುತ್ತದೆ. ಚನ್ನಬಸವಣ್ಣನವರು ಹೀಗೆಂದಿದ್ದಾರೆ.

ಹಸಿವು ತೃಕ್ಷಿ ವಿಷಯವೆಂಬ ಕರ್ಮಂಗಳನೆ ಕಾಡು
ಪರಿಣಾಮವೆಂಬ ಕೋಡಲಿ ತತ್ತರದರಿದು
ಕಾಮ, ಕ್ರೋದಿ, ಲೋಭಾ, ಮೋಹ, ಮದ, ಮತ್ಸರಗಳ
ಪಂಚೇಂದ್ರಿಯ, ಕ್ಷಡುವರ್ಗ, ಸಪ್ತದಾತ, ಅಷ್ಟಮದ ವೆಂಬ ಬಳ್ಳಿಯ ಸೀಳಿ
ಎಳು ಕಟ್ಟಿನ ಮೋಳಿಗೆಯನೆ ಹೊತ್ತು ನಡೆದನಯ್ಯ
ಕುಡಲ ಚನ್ನ ಸಂಗಯ್ಯನಲ್ಲಿ ಮೋಳಿಗೆ ಮಾರಿ ತಂದೆಗಳ
ಶ್ರೀ ಪಾದಕ, ನಮೋ ನಮೋ! ಜಯ, ಜಯ, ಜಯತು –[೬]

ಶಿವಯೋಗಿ ಸಿದ್ದರಾಮೇಶ್ವರರು ಮಾರಿ ತಂದೆಗಳ ಬಗ್ಗೆ ಹೀಗೆ ನುಡಿದಿದ್ದಾರೆ.

ಮೂರು ಕಟ್ಟಿಗೆಯನ್ನು ಮುಯ್ಯೋರಲ್ಲಿಸಿದನು
ನೀರನಿ, ಪತಿಯಾದ ಲಿಂಗದಲ್ಲಿ, ಆರೂಡಿ
ಲಿಂಗದೊಳಗೆ ಅರುವೆರಳ ನಿರಸಿದನು
ಧೀರ ಮೋಳಿಗೆಯ ಮಾರವೀಭು ಶರಣು ಆರೂಡಿ ದರ್ಶಗಳ –[೭]

ಮಹಾ ಮೇದಾವಿಗಳಾದ ಬಸವಣ್ಣ, ಚನ್ನಬಸವಣ್ಣ ಹಾಗೂ ಶಿವಯೋಗಿ ಸಿದ್ದರಾಮರ ಹೊಗಲೀಕೆಯ ಉದಾಹರಣೆ ಸಾಲದೆ? ಎಲ್ಲಾ ಶರಣರ ದೃಷ್ಟಿಯಲ್ಲಿಯೂ ಮೋಳಿಗೆ ಮಾರಯ್ಯನವರು ಬಹು ಎತ್ತರದ ವ್ಯಕ್ತಿಯಾಗಿ ಕಂಡಿದ್ದಾರೆ.

ಕಾಷ್ಟ ಕನಕ :–

ಅಂಬಲಿಯ ರುಚಿಯನ್ನು ಸವಿದ ಜಂಗಮರಿಗೆ ಬಸವಣ್ಣನ ಅರಮನೆಯ ಪಂಚ ಪಕ್ವಾನ್ನಗಳು ಸಪ್ಪಗೆನಿಸಿದವು. ವಾರಂಗಲ್ಲಿನ ಮಾದರ ಚೆನ್ನಯ್ಯನ ಅಂಬಿಲಿ ಸವಿದ ಶಿವನು ಅರಸನ ರಾಜಾನವನ್ನು ಸ್ವೀಕರಿಸಲಿಲ್ಲ ಹಾಗಯೇ ಜಂಗಮರು ದಿನ ನಿತ್ಯ ಮೋಳಿಗೆಯ್ಯನ ಮನೆ ಮುಂದೆ ಸೇರತೊಡಗಿದರು.

ಈ ಸುದ್ದಿ ತಿಳಿದು ಬಸವಣ್ಣನವರಿಗೆ ಮೋಳಿಗೆ ಮಾರಯ್ಯನವರ ಮನೆಗೆ ಒಮ್ಮ ಬೇಟ್ಟಿ ನೀಡುವ ಮನಸಾಯಿತು. ಮಾರಯ್ಯನವರ ಮನೆಗೆ ಬಂದು ಗುಡಿಸಿಲದಲ್ಲಿರುವುದು ನೋಡಿ ಅವರ ಹೃದಯ ತುಂಬಿ ಬಂತ್ತು.

ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ವೇಷಮರೆಸಿಕೊಂಡು ಮಾರಯ್ಯನವರ ಮನೆಗೆ ಬಂದು ಪ್ರಸಾದ ಸ್ವೀಕಾರ ಮಾಡಿ ಹೋಗುವಾಗ ಚಿನ್ನದ ನಾಣ್ಯಗಳಿಂದ ಎರಡು ಚೀಲಗಳನ್ನು ಬಿಟ್ಟು ಹೋಗುತ್ತಾರೆ.

ಬಡವನೆಂದು ನಿಮ್ಮವರ ನಿಧಾನವ ನೀರಯ್ಯ
ನಾ ಬಡವನಾದೊಡೆ ನೀ ಬಡವನೆ ಎನ್ನನಿಃ ಕಳಂಕ ಮಲ್ಲಿಕಾರ್ಜುನಾಗಿ ?
"ಇಂತಪ್ಪ ಮಹಾ ಪ್ರಣಮಂಗಳೇ ಬಸವಣ್ಣನಾಗಿ,
ಆ ಬಸವಣ್ಣನೇ ಮಹಾ ಪ್ರಣಮಂಗಳಗಿ,
ತನ್ನ ಮಠಕೆ ತಾನೆ ಬಂದು ಭಕ್ತಿ ವಸ್ತುವನಿತ್ತದೆ
ಇವ ನಾನು ನೀಃ ಕಳಂಕ ಮಲ್ಲಿಕಾರ್ಜುನ ಭಕ್ತರಿಗತ್ತು ಬದುಕಿದೆನಯ್ಯ –[೮]

ಈ ಮೇಲಿನ ಎರಡು ವಚನಗಳು ಬಸವಣ್ಣನವರು ಮೋಳಿಗೆ ಮಾರಯ್ಯನವರ ಮನೆಗೆ ಬಂದು ಹೋನ್ನು ಜಾಳಿಗೆ ಬಿಟ್ಟು ಹೋದದ್ದು ತಿಳಿದು ಬರುತ್ತದೆ.

ಕಾಯಕ ಮುಗಿಸಿ ಮಾರಯ್ಯ ಮನೇಗೆ ಬಂದಾಗ ಲಿಂಗ ಪೂಜೆ ಮಾಡಿ ಕೊಳ್ಳವಾಗ ನಾಣ್ಯಗಳ ಚಿಲು ಕಾಣುತ್ತದೆ. ಮಹಾದೇವಿಯವರಿಗೆ ಕೇಳುತ್ತಾರೆ. ನನಗೆ ಗೊತ್ತಿಲ್ಲ ಯಾರೋ ಜಂಗಮರು ಬಂದಿದ್ದರು ಲಿಂಗ ಪೂಜೆ ಮಾಡಿಕೊಮಡು ಪ್ರಸಾದ ಸ್ವೀಕರಿಸಿ ಹೋದರು ಎಂದು ಹೇಳುತ್ತಾಳೆ. ಆಗ ಮೋಳಿಗೆ ಮಾರಯ್ಯನವರು ಇದು ಬಸಣ್ಣನವರ ಕಾರ್ಯ ಎಂದು ಮನಗೊಂಡು ಆ ಚಿನ್ನದ ನಾಣ್ಯಗಳ ಚೀಲ ತಮ್ಮ ಕಾಯಕದ ಕಟ್ಟಿಗೆ ಕಾಲಿನಿಂದ ಚಿಮ್ಮಿದಂತೆ ಅವರ ಚಿಮ್ಮದ ರಭಸಕ್ಕೆ ಗುಡಿಸಲಿನಿಂದ ಸ್ವಲ್ಪ ದೂರದ ಸ್ಥಳದಲ್ಲಿ ಬಿದ್ದವಂತೆ, ಆ ಸ್ಥಳಕ್ಕೆ "ಭಂಡಾರ ಗುತ್ತಿ" ಎಂದು ಕರೆಯುತ್ತಾರೆ.

ಮಾರಯ್ಯನವರು ಅಣ್ಣನವರ ಮನೆಗೆ ಹೋಗಿ ಅಲ್ಲಿದ್ದ ಜಂಗಮರಿಗೆ ಆರೋಗಣೆಗೆ ಆಮಂತ್ರಣ ಕೊಟ್ಟು ಬರುತ್ತಾರೆ. ಜಂಗಮರೆಲ್ಲ ಮೋಳಿಗೆ

ಮಾರಯ್ಯನವರ ಮನೆಗೆ ಬಂದು ಅಂಬಲಿ ಪ್ರಸಾದ ಸ್ವೀಕರಿಸುತ್ತಾರೆ. ಮಾರಯ್ಯನವರು ಜಂಗಮರ ಪಾದೋದಕವನ್ನು ಕಟ್ಟಿಗೆ ಮೇಲೆ ಸಿಂಪಡಿಸುತ್ತಾರೆ ಆ ಕಟ್ಟಿಗೆಗಳು ಬಂಗಾರವಾದವು. ಅವುಗಳನ್ನು ತುಂಡು ಮಾಡಿ ಜಂಗಮರಿಗೆ ನೀಡಿದರು ಎಂದು ತಿಳಿದು ಬರುತ್ತದೆ. ಅಣ್ಣನವರು ಈ ವಿಷಯ ತಿಳಿದು ಮೋಳಿಗೆ ಮಾರಯ್ಯನವರ ಹತ್ತಿರ ಕ್ಷಮೆ ಕೇಳುತ್ತಾರೆ. ಮೋಳಿಗೆ ಮಾರಯ್ಯನವರು ಅಣ್ಣನವರನ್ನು ಅಪ್ಪಿ ಕಾಯಕದ ಗುಟ್ಟನ್ನು ತಿಳಿಸಿ ಕೊಟ್ಟನೆಂದು ಪ್ರಾಚೀನ ಕವಿಗಳು ಹೇಳುತ್ತಾರೆ.

ಇಂದಿನ ವೈಜ್ಞಾನಿಕ ಯುಗದಲ್ಲಿ ಶರಣರ ಪವಾಡಗಳು ಚಿಂತನೆಗೆ ಹಚ್ಚುತ್ತವೆ. ಕಟ್ಟಿಗೆ ಎಂದಾದರೂ ಕನಕವಾಗಬಹುದೇ ಈ ಪವಾಡ ನಡೆದಿರಬಹುದು ಎಂಬುದಕ್ಕೆ ಅವರ ವಚನಗಳಲ್ಲಿಯೇ ಆಧಾರಗಳು ಹೊರೆಯುತ್ತವೆ.

" ನಾ ಹೋತ್ತ ಕಟ್ಟಿಗೆಯು ಸರಬು ಮತ್ತೆ ಸುವರ್ಣ ದಂಡವಾದಾಗ
ಅದಾರ ನಿಶ್ಚಯದ ವಿಶ್ವಾಸ? ಅವು ತಮ್ಮ ಚಿತ್ತದ ದೃಡತೆಂಯಿಂದ"
"ಎನ್ನ ಕಾಯಕದ ಕಾಷ್ಟ ಚಿನ್ನವಾದಲ್ಲಿ ಮತ್ತಾವಾದ ಗುಣ ಅವಗುಣ ಹಿಂಗೆ
ಲೇಸಾದಲ್ಲಿ ಅದು ತನ್ನಯ ವಿಶ್ವಾಸದಿಂದ" –[೯]
ಉನ್ನವ ಮಾರಯ್ಯನವರ ವಚನಗಳಿಂದ ಹಾಗೂ " ಕಾಷ್ಟವ ಸುವರ್ಣ
ಮಾಡಿದೆನೆಂಬ ಘಾತುಕನವೇ ನಿಮ್ಮ ಭಕ್ತಿ"

ಎಂಬ ಮಹಾದೇವಿಯಮ್ಮನವರ ವಚನದಲ್ಲಿ ಕಟ್ಟಿಗೆಯನ್ನು ಬಂಗಾರ ಮಾಡಿದ ವಿಚಾರ ಪ್ರತಿಧ್ವನಿತವಾಗುತ್ತದೆ. ಮಾರಯ್ಯನವರ ಮಹಿಮೇ ನಿಂತಿರುವುದು ಪವಾಡಗಳ ಮೇಲೆಲ್ಲ, ಅವರ ಸತ್ಯ ಶಾದ್ಧ ನಿತ್ಯ ನಿರ್ಮಲ ಜೀವನದ ಮೇಲೆ.

ಕೊನೆಯ ದಿನಗಳುः –

ಕಲ್ಯಾಣದ ಕ್ರಾಂತಿಯ ಸಮಯದಲ್ಲಿ ಎಲ್ಲಾ ಶರಣರು ತಮ್ಮ –ತಮ್ಮ ಇಚ್ಚಿತ ಸ್ಥಳಗಳಿಗೆ ಹೊದರೆ ಮೋಳಿಗೆ ಮಾರಯ್ಯನವರು ಎಲ್ಲಿಗೂ ಹೋಗದೆ ಕಲ್ಯಾಣದಲ್ಲಿಯೇ ಉಳಿದಂತೆ ತೋರುತ್ತದೆ. ಅದಕ್ಕೆ ಅವರ ಹಲವಾರು ವಚನಗಳೇ ಸಾಕ್ಷಿಯಾಗಿವೆ.

" ಊರು ಕಟ್ಟಿ ಸೂರೆಯಾಡುವಲ್ಲಿ ಆರಿಗಾರು ಇಲ್ಲ!
ಬಸವಣ್ಣ ಸಂಗಮಕ್ಕೆ ಚೆನನಬಸವಣ್ಣ ಉಳುವಿಗೆ, ಪ್ರಭು ಕದಳಿಗೆ,
ಮಿಕ್ಕಾದ ಪ್ರಥಮರೆಲ್ಲ ತಮ್ಮ ಲಕ್ಷ್ಯಭಾವಕ್ಕೆ ಮುಕ್ತಿಯನೆಯಿಹರು!
ನನಗೊಂದು ಬಟ್ಟೆಯ ಹೇಳಾ, ನೀ ಕಳಂಕ ಮಲ್ಲಿಕಾರ್ಜುನಾ!" –[೧೦]

ಬಸವಣ್ಣನವರು ಕಲ್ಯಾಣದಲ್ಲಿ ನಡೆದ ಘಟನೆಗಳಿಂದ ಮನನೊಂದು ಕೂಡಲ ಸಂಗಮಕ್ಕೆ ಹೋದರು, ಚೆನ್ನಬಸವಣ್ಣ, ಅಕ್ಕನಾಗಮ್ಮ, ಕಿನ್ನರಿಬೊಮ್ಮಯ್ಯಾ ಉಳಿವಿಗೆ, ಅಕ್ಕಮಹಾದೇವಿ ಪ್ರಭುದೇವರು ಶ್ರೀಶೈಲಕ್ಕೆ ಹೊದರು. ಉಳಿದೆಲ್ಲ ಶರಣರು ತಮ್ಮಗೆ ಸೂಕ್ತವಾದ ಸ್ಥಳಗಳಿಗೆ ಪ್ರಯಾಣ ಬೆಳೆಸಿದರು. ಅಲ್ಲಿಯೇ ಅವರು ಮುಕ್ತಿ ಪಡೆದರು. ಆದರೆ ದೂರದ ಕಾಶ್ಮೀರದಿಂದ ಬಂದವನು ನಾನೆಲ್ಲಿಗೆ ಹೋಗಲಿ ನಿಕಳಂಕ ಮಲ್ಲಿಕಾರ್ಜುನ ದೇವರೆ ನನಗೊಂದು ದಾರಿ ತೋರು ಎಂದು ಪ್ರಾರ್ಥಿಸಿಕೊಳ್ಳತ್ತಾನೆ. ಇನ್ನೊಂದು ವಚನದಲ್ಲಿ ಮಾರಯ್ಯಾನವರು ಹೀಗೆ ಹೇಳಿದ್ದಾರೆ.

" ನಿಮಗೆ ಮರ್ತ್ಯವ ಮಣಿಹ ಕೃತ್ಯವಿನ್ನೆಷ್ಟು 'ಪರಿಯಂತರ ?
ಎನಗೆ ಕಟ್ಟುಗುತ್ತಿಯ? ನಾ ಕಟ್ಟಿಗೆಯ ಹೊತ್ತು
ಶಿವಭಕ್ತರ ಮನೆಗೆ ನೀವು ಕೊಟ್ಟ ಕಾಯಕದ ಕೃತ್ಯ
ಇನೆಷ್ಟು ದಿನಾ ಹೇಳಾ ನಿಕಳಂಕ ಮಲ್ಲಿಕಾರ್ಜುನ !" –೧೧

ಹೌದು ಇನ್ನೇಷ್ಟು ದಿವಸ ಈ ಮರ್ತ್ಯಾ ಮಾಣಿಹ ? ಎಂದಿಗೆ ಇದರಿಂದ ಮುಕ್ತಿ ? ಬಸವಾದಿ ಪ್ರಥಮರೆಲ್ಲರೂ ಒಂದೊಂದು ನೆಲೆ ಸೇರಿದರೆ ಅಯ್ಯೋ ನಾನೆಲ್ಲಿಗೆ ಹೋಗಿ ಸೇರಲಿ ನನಗೆ ಯಾವ ನೆಲೆ ಎನಗೆ ಅಂದಿಗೆ ನೂರಿಪ್ಪತ್ತ ಸಂದಿತ್ತು ಇನ್ನು ನಾನು ಎಲ್ಲಿಗೆ ಪ್ರಯಾಣ ಬೆಳಸಲಿ ಎಂದು ಮೋಳಿಗೆ ಮಾರಯ್ಯನವರು ಚಿಂತಿಸುತ್ತಾರೆ.

ಎಲ್ಲಾ ಶರಣರು ಬೇರೆ ಬೇರೆ ಕಡೆಗೆ ಹೋಗಿ ಅಲ್ಲಿ ಲಿಂಗೈಕ್ಯರಾದರೆ ಮೋಳಿಗೆ ಮಾರಯ್ಯ ಹಾಗೂ ಮಹಾದೇವಿಯಮ್ಮನ ಆತ್ಮಗಳು ವಿಶ್ವಾತ್ಮನಲ್ಲಿ ಲೀನವಾದವು. ಅವರ ಆತ್ಮ ಗೀತೆಯನ್ನಾಲಿಸಿದ ಮೋಳಿಗೆಯ್ಯನ ಕೊನೆಯ ಕಾಯಕದ ಕಟ್ಟಿಗೆಯ ಹೊರೆ ಕೂಡ ಚಿಗಿಯಿತಂತೆ, ಇಂದಿಗೂ ಆ ವೃಕ್ಷ ಕಾಯಕದ ಕಲ್ಪ ವೃಕ್ಷವಾಗಿ ಬೆಳೆಯುತ್ತಿದೆ. ಈ ರೀತಿ ಮಾರಯ್ಯನವರು ಎಲ್ಲಿಗೂ ಹೋಗದೆ ಕಲ್ಯಾಣದ ಸಮೀಪದಲ್ಲಿಯೇ ಇದ್ದು ಲಿಂಗೈಕ್ಯರಾದರು ಎಂದು ತೋರುತ್ತದೆ. ಅವರ ಹೆಸರಿನ ಸ್ಥಾನ ಕಲ್ಯಾಣದಿಂದ ಹುಮನಾಬಾದಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ೦೯ರ ಮೇಲೆ ಇದೆ. ಇದು ಕಲ್ಯಾಣದಿಂದ ೧೨ ಮೈಲು ದೂರದಲ್ಲಿದೆ. ಅವರ ಹೆಸರಿನಲ್ಲಿಯೇ ಒಂದು ಗುಹೇ ಇದೆ, ಮುಂದೆ ಇವರ ಹೆಸರಿನಲ್ಲಯೇ ಒಂದು ಗ್ರಾಮ ಹುಟ್ಟಿಕೊಂಡಿತ್ತು. ಅದಕ್ಕೆ ಮೋಳಕೇರಾ ಎಂದು ಕರೆಯುತ್ತಾರೆ.

ಈಗ ಮೋಳಕೇರಾದಲಿ ಮೋಳಿಗೆ ಮಾರಯ್ಯನವರ ಗವಿಯೆಂದು ಹೇಳಿಸಿಕೊಳ್ಳವ ಗವಿಯಿದೆ. ಗುಹೇಯ ಒಳಭಾಗದಲ್ಲಿ ವಿಶಾಲ ಸ್ಥಳವಿದ್ದು, ಗರ್ಭಗುಡಿಯ ಮಾದರಿಯಲ್ಲಿ ಗುಹೇಯ ಒಳಭಾಗವಾಗಿದ್ದು ಇಲ್ಲಿ ಮೋಳಿಗೆ

ಮಾರಯ್ಯನವರ ಸಮಾಧಿ ಇರಬಹುದೆಂದು ಊಹಿಸಲಾಗಿದೆ. ಗವಿಯಲ್ಲಿ ಒಂದು ಶಿವಲಿಂಗವಿದೆ. –[೧೧] ಆ ಕಾಲದಲ್ಲಿ ಸಮಾಧಿಗಳ ಮೇಲೆ ಸ್ಥಾವರ ಲಿಂಗ ಸ್ಥಾಪಿಸುವುದು ಒಂದು ರೂಢಿಯಿತ್ತು. ಗುಹೇಯ ದಕ್ಷಿಣ ಭಾಗದಲ್ಲಿ ಒಂದು ಭಾವಿಯಿದ್ದು ಪೂಜಾ ಕಾರ್ಯಕ್ಕೆ ಆ ಭಾವಿಯ ನೀರೆ ಉಪಯೋಗಿಸುತ್ತಿದ್ದರಂತೆ. ಗುಹೇಯ ಪರಿಸರ ಅತ್ಯಂತ ಸುಂದರವಾಗಿದೆ, ಎದುರುಗಡೆ ದೊಡ್ಡದಾದ ಆಲದ ಮರವಿದೆ. ಸುತ್ತಲು ಮಾವಿನ, ಹುಣಸೆ, ಬಿಲ್ವ ಪತ್ರೆ ಮರಗಳಿವೆ ಹಾಗೂ ಮಾರಯ್ಯನವರು ಬಿಟ್ಟು ಹೋದ ಕಟ್ಟಿಗೆಯಿಂದ ಚಿಗಿದು ಮರವಾದ ಹೆಸರಿಲ್ಲದ ಮರವಿದೆ.

ಇತ್ತಿಚೀನ ದಿನಗಳಲ್ಲಿ ಗುಹೆಯ ಮೇಲ್ಭಾಗದಲ್ಲಿ ದಿವಗಂತ ವೀರಶೆಟ್ಟಿ ಶ್ರೀಶೈಲ್ ಮೋಳಿಗೆ ಮಾರಯ್ಯನವರ ಪಂಚ ಕಮೀಟಿಯ ಅಧ್ಯಕ್ಷರಾಗಿದ್ದಾಗ ಇವರ ನೇತೃತ್ವದಲ್ಲಿ ಇವರ ಪರಿಶ್ರಮದಿಂದ ಗ್ರಾಮಸ್ಥರ ಸಹಾಕಾರದಿಂದ, ಸದಸ್ಯರ ಸಹಕಾರದಿಂದ ಒಂದು ಸುಂದರವಾದ ದೇವಾಲಯ ನಿರ್ಮಿಸಿದ್ದಾರೆ. ಹಾಗೂ ಮೋಳಿಗೆ ಮಾರಯ್ಯನವರ ಅಮೃತ ಶಿಲೆಯ ಮೂರ್ತಿ ಸ್ಥಾಪಿಸಿದ್ದಾರೆ. ವಿಸ್ತಾರವಾದ ಕಲ್ಯಾಣ ಮಂಟಪ ದೇವಾಲಯದ ಎದುರು ನಿರ್ಮಿಸಲಾಗಿದೆ. ಗರ್ಭಗೃಹದ ಮೇಲೆ ವಿವಿಧ ಶರಣರ ಮೂರ್ತಿಗಳಿಂದ ಕೂಡಿದ ಸುಂದರ ಬೃಹತ್ ಗೋಪೂರ ನಿರ್ಮಸಿದ್ದಾರೆ. ಹೊಸದಾಗಿ ಒಂದು ವಿಶಾಲ ಭಾವಿ ತೊಡಸಿ ಭಕ್ತರಿಗೆ, ಪ್ರವಾಸಿಗರಿಗೆ ನೀರಿನ ಸೌಕರ್ಯ ಒದಗಿಸಿದ್ದಾರೆ.

ಈ ಗುಹೆಯನು ನೋಡಿದಾಗ ಇಲ್ಲಿನ ಪರಿಸರ ನೋಡಿದಾಗ ಇದು ಒಂದು ಐತಿಹಸಿಕ ಸ್ಥಳವಾಗಿದೆ ಎಂದು ಹೇಳಬಹುದು. ಅಷ್ಟೇ ಅಲ್ಲದೆ ಇದು ಒಂದು ಧಾರ್ಮಿಕ ಮತ್ತು ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ.

ಅಡಿ ಟಿಪ್ಪಣೆಗಳು :–

೧. ಸೋನಾಥ ಯಾಳವಾರ, ಬೀದರ ಜಿಲ್ಲೆಯ ಶರಣ ಸ್ಮಾರಕಗಳು ಪು.೫೩

೨. ಬಿ.ಡಿ. ಜತ್ತ, ಬಸವೇಶ್ವರರ ಸಮಕಾಲೀನರು ಪು. ೨೪೦.

೩. ಅದೇ. ೨೪೩

೪. ಹೆಚ್.ಕಾಶಿನಾಥ ರಡ್ಡಿ, ಕಾಯಕ ವೀರ ಮೋಳಿಗೆ ಮಾರಯ್ಯ.

೫. ಪೂರ್ವೇಕ್ಷ, ಪು. ೨೫೩.

೬. ಅದೇ, ಪು. ೨೫೩

೭. ಳ. ಕಾಶಿನಾಥ ರಡ್ಡಿ, ಕಾಯಕ ವೀರ ಮೋಳಿಗೆ ಮಾರಯ್ಯ ಪು. ೩೨.

೮. ಅದೇ. ಪು ೪೦.

೯. ಅದೇ ಪು ೪೦.

೧೦. ವಿಜಯಶ್ರೀ ಸಬರದ, ಮೋಳೀಗೆ ಮಾರಯ್ಯ. ಪು. ೧೯.

೧೧. ಪೂರ್ವೋಕ್ತ, ಪು. ೫೦.

೧೨. ಅಮೃತ ಮಹಾದೇವ ಅಣ್ಣಗೇರಿ, ಕರ್ನಾಟಕದ ಸಂಸ್ಕೃತಿಕ ಸ್ಥಳಗಳು ಪು. ೩೪.

ಆಧಾರ ಗ್ರಂಥಗಳ :-

೧. ಶರಣ ಚರಿತಾಮೃತ - ಸಿದ್ದಯ್ಯಾ ಪುರಾಣಿಕ

೨. ಬಸವಣ್ಣನವರ ಸಮಕಾಲೀನರು - ಬಸವ ಸಮೀತಿ ಬೆಂಗಳೂರು

೩. ಸಕಲ ಪುರಾತನರ ವಚನಗಳಲು - ಆರ್.ಸಿ ಹೀರೆಮಠ.

೪. ಮೋಳಿಗೆ ಮಾರಯ್ಯ - ಡಾ॥ ವಿಜಯಶ್ರೀ ಸಬರದ.

೫. ಬೀದರ ಜಿಲ್ಲೆಯ ಶರಣ ಸ್ಮಾರಕಗಳು - ಡಾ॥ ಸೋಮನಾಥ ಯಳವಾರ.

೬. ಕಾಯಕವೀರ ಮೋಳಿಗೆ ಮಾರಯ್ಯ - ಎಚ್. ಕಾಶಿನಾಥ ರಡ್ಡಿ.

೭. ಹುಮನಾಬಾದ ತಾಲೂಕಾ ದರ್ಶನ- ಡಾ॥ ಸೋಮನಾಥ ಯಳವಾರ.



ಮೋಳಗೆ ಮಾರಯ್ಯನವರ ಗವಿಯ ಮೇಲೆ ನಿರ್ಮಿಸಿರುವ ಆಧುನಿಕ ದೇವಾಲಯ



ಮೋಳಗೆ ಮಾರಯ್ಯನ ಗವಿಯ ಒಳಗಿನ ನೋಟ







ಮೋಳಗೆ ಮಾರಯ್ಯನ ಗವಿಯಲ್ಲಿನ ಸ್ಥಾವರಲಿಂಗ



ಬೋಳಗೆ ಮಾರಯ್ಯನವರ ಅಮೃತ ಶಿಲೆಯ ಮೂರ್ತಿ





ಗಡವಂತಿ

ಹುಮನಾಬಾದ ತಾಲೂಕಿನ ಪ್ರಮುಖ ಐತಿಹಾಸಿಕ ಸ್ಥಳಗಳಲ್ಲಿ ಗಡವಂತಿ ಗ್ರಾಮವು ಒಂದಾಗಿದೆ. ಇದು ತಾಲೂಕಾ ಕೇಂದ್ರದಿಂದ ೩ ಕಿ,ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಒಂದು ಪ್ರಾಚೀನ ಕಾಲದ ಗವಿ ಇದೆ. ಇದು ಬಸವಣ್ಣನವರ ಸಮಕಾಲಿನ ಶರಣರಾದ ಮುಗ್ಧ ಸಂಗಯ್ಯನವರ ಗವಿಯಂದು ಅಲ್ಲಿನ ಹಿರಿಯ ಜನರು ಹೇಳುತ್ತಾರೆ. ಆದರಿಂದ ಇದು ಮುಗ್ಧ ಸಂಗಯ್ಯನ ಗವಿಯಂದೆ ತಾಲೂಕಿನಲ್ಲಿ ಹೆಸರುವಾಸಿಯಾಗಿದೆ. ಇದನ್ನು ಜಂಬಿಟ್ಟಿಗೆಯ ಸಮತಟ್ಟಾದ ನೆಲದಲ್ಲಿ ಕೊರೆಯಲಾಗಿದೆ. ಇದು ಅತ್ಯಂತ ವಿಶಾಲವಾಗಿದೆ. ಗವಿಯಲ್ಲಿ ಹಲವಾರು ಕಂಬಳಿಂದ ಕೂಡಿದ ವಿಶಾಲವಾದ ಪ್ರಾಂಗಣವಿದೆ. ತಲಮಾಳಿಗೆಯಂತಿರುವ ಈ ಗವಿಯಲ್ಲಿ ಗರ್ಭಗೃಹವಿದ್ದು ಅದರಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗವಿಯ ಎಡಬಲದಲ್ಲಿ ಕೋಣೆಯ ಮಾದರಿಯ ಗವಿಗಳಿವೆ ಗವಿಯ ಆವಣದಲೊಂದು ಬಾವಿಯಿದೆ. ಗವಿಯ ಬಲಭಾಗದಲ್ಲಿ ಶಿವಪಾರ್ತಿಯರ ಪಾದುಕೆಗಳಿವೆ ಈಗ ಗವಿಯಲ್ಲಿ ಮುಗ್ದ ಸಂಗಯ್ಯನ ಹಿತ್ತಾಳೆ ಮುರ್ತಿಯು ಇದೆ. ೧೨ನೇ ಶತಮಾನದ ವೇಳೆಯಲ್ಲಿ ಬಸವಣ್ಣನವರ ಕಾಲದಲ್ಲಿ ಮುಗ್ಧ ಸಂಗಯ್ಯನವರು ಈ ಗ್ರಾಮದಲ್ಲಿಯೇ ನೆಲೆಸಿದ್ದರು ಎಂದು ಈ ಗ್ರಾಮದ ಜನರ ನಂಬಿಕೆಯಾಗಿದೆ. ಮುಗ್ಧ ಸಂಗಯ್ಯನು ಬಸವಣ್ಣನವರ ಸಮಕಾಲಿನ ಶರಣನೆಂದು ಹಾಗೂ ಈತನ ಮುಗ್ಧತನವನ್ನು ಬಸವಪುರಾಣದಲ್ಲಿ ಕಾಣಬಹದು.

ಮುಗ್ಧ ಸಂಗಯ್ಯನ ಗವಿಯು ಗಡವಂತಿ ಗ್ರಾಮದಲ್ಲದೆ ಬಸವಕಲ್ಯಾಣ ಸಮೀಪದ ಸೂಮಾರು ೨. ಕಿ.ಮೀ. ಅಂತರದಲ್ಲಿರುವ ಶಿವಪೂರದಲ್ಲಿಯು ಮುಗ್ಧ ಸಂಗಯ್ಯನ ಗವಿ ಇದೆ. ಹಾಗೂ ಹಳ್ಳಿ ಗ್ರಾಮದಲ್ಲಿಯು ಇತನ ಹೆಸರಿನಲ್ಲಿ ಒಂದು ಗುಹೆ ಇದೆ. ಈ ಮೂರು ಸ್ಥಳಗಳಲ್ಲಿ ಮುಗ್ಧ ಸಂಗಯ್ಯನವರು ತಮ್ಮ ಜೀವಂತದ ಅವಧಿಯಲ್ಲಿ ನೆಲೆಸಿದರೆಂದು ಇಲ್ಲಿನ ಜನರ ನಂಬಿಕೆ ಇದೆ. ಬಸವಕಲ್ಯಾಣದ ಘನಲಿಂಗ ರುದ್ರಮುನಿಯ ಗವಿಯ ಹಿಂಬಾಗದಲ್ಲಿ ಮುಗ್ಧ ಸಂಗಯ್ಯನವರ ಗದ್ದುಗೆ ಇದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ನೋಡಿದಾಗ ಹಾಗೂ ಗಡವಂತಿ ಗ್ರಾಮಸ್ಥರಿಂದ ಗವಿಯ ಬಗ್ಗೆ ತಿಳಿದು ಕೊಂಡಾಗ ಇದು ಮುಗ್ಧ ಸಂಗಯ್ಯನವರ ಗವಿಯಾಗಿತ್ತು. ಎಂದು ತಿಳಿದು ಬರುತ್ತದೆ. ಆದರಿಂದ ಇದು ಒಂದು ಐತಿಹಾಸಿಕ ಸ್ಥಳವಾಗಿತ್ತೆಂದು ಹೇಳಬಹುದ್ದು.

ಆಧಾರ ಗ್ರಂಥಗಳು :-

೧. ಬೀದರ ಜಿಲ್ಲಾ ಶರಣರ ಸ್ಮಾರಕಗಳು. ಡಾ॥ ಸೋಮನಾಥ ಯಾಳವಾರ

೨. ಹುಮನಾಬಾದ ತಾಲೂಕಾ ಪರಿಚಯ- ಸಂ. ಎಚ್. ಕಾಶಿನಾಥ ರಡ್ಡಿ

೩. ಬೀದರ ಜಿಲ್ಲಾ ದರ್ಶನ -ಸಂ. ಡಾ॥ ಸೋಮನಾಥ ಯಾಳವಾರ ಡಾ॥ ಪ್ರೇಮಾ ಸಿರ್ಶೆ.



ಮುಗ್ಧ ಸಂಗಯ್ಯನ ಗವಿ, ಗಡವಂತಿ



ಮುಗ್ಧ ಸಂಗಯ್ಯನ ಗವಿಯಲ್ಲಿರುವ ಸ್ಥಾವರ ಲಿಂಗ





ಮಾಣಿಕಗಿರಿಯ ಶ್ರೀ ಮಾಣಿಕಪ್ರಭು

ಕರ್ನಾಟಕದ ಉತ್ತಮಾಂಗ ಎನಿಸಿರುವ ಬೀದರ ಜಿಲ್ಲೆಯ ಹಲವು ದೃಷ್ಟಿಯಿಂದ ವೈಶಿಷ್ಟವಾಗಿದೆ. ಐತಿಹಾಸಿಕ, ಸಾಮಾಜಿಕ ಆರ್ಥಿಕ, ಧಾರ್ಮಿಕ ಭಾಷಿಕ ದೃಷ್ಟಿಯಿಂದ ಭಿನ್ನವಾಗಿ ನಿಲ್ಲುವ ಈ ಪ್ರದೇಶವು ಕರ್ನಾಟಕದ ಭೌಗೋಳಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿಯೂ ಗಮನ ಸೆಳೆಯುತ್ತಿದೆ. ವಿವಿಧ ಧರ್ಮಕಲೆ ಭಾಷೆ, ಜನಾಂಗ, ಬಾಳಿ ಬೆಳಗಿದ ಈ ಜಿಲ್ಲೆಯಲ್ಲಿ ಶರಣರು, ಸಂತರು, ಅನುಭಾವಿಗಳು, ಕವಿಗಳು ಅಗಿಹೋಗಿದ್ದಾರೆ. ಇಲ್ಲಿಯ ಭಾಷೆ, ನೆಲ, ಜಲ, ಧರ್ಮ, ಸಾಮಾಜಿಕ, ಪರಿಸರ ಸಂಪ್ರದಾಯ ಹಾಗೂ ಸಂಸ್ಕೃತಿ ಎಲ್ಲವೂ ವೈವಿದ್ಯಾಮಯ ಅದೇ ಈ ಜಿಲ್ಲೆಯ ಸೌಂದರ್ಯ ಇತಿಹಾಸದ ಕಾಲದಿಂದಲೇ ಈ ಮಣ್ಣಿನಲ್ಲಿ ವಿಶಿಷ್ಟಮಯ ಸಾಂಸ್ಕೃತಿಕ ಬದುಕು ರುಪುಗೊಂಡು ಬೆಳೆದು ಬಂದಿರುವುದನ್ನು ಗುರುತಿಸಬಹುದು.

ಮಾಣಿಕನಗರ ಮಾಣಿಕ ಪ್ರಭುಗಳ ಪಾದಸ್ಪರ್ಶದಿಂದ ಪಾವನಗೊಂಡ ಪುಣ್ಯಭುಮಿ ಈ ಮಹಾರಾಜರ ಉನ್ನತ ಸಾಧನೆಯಿಂದ ಪವಿತ್ರವಾಗಿರುವ ಕ್ಷೇತ್ರ ಇದು ಪ್ರಭುಗಳ ತಪೋತಾಣವಷ್ಟೇ ಅಲ್ಲ ಅ ಪುಣ್ಯ ಪುರುಷರ ಜೀವಂತ ಸಮಾಧಿ ತೆಗೆದುಕೊಂಡು ನೆಲೆ ನಿಂತಿರುವ ವೈಕುಂಠ ಹಿಂದೊಂದು ಪರ್ವತವಾಗಿದ್ದ ಈ ಪ್ರದೇಶವು ಮಾಣಿಕ ನಗರವೆಂದು ಊರಾಗಿ ಜನ್ಮತಾಳಿ ನಿಂತಿದ್ದೇ. ಈ ಮಹಾ ಪುರುಷರಿಂದ ಒಲೆಯ ಮೂರು ಗುಂಡುಗಳಂತಿರುವ ಗಡವಂತಿ – ಹುಮನಾಬಾದ – ಧುಮ್ಮನಸೂರು ಎಂಬ ಮೂರು ಊರುಗಳ ಮಧ್ಯದ ಎತ್ತರವಾದ ದಿನ್ನೆಯ ಪ್ರದೇಶವು ನಿಸರ್ಗ ಸಂಪತ್ತಿನಿಂದ ಸದಾ ಶೋಭಿಸುತ್ತಿತ್ತು. ಹುಮನಾಬಾದದಿಂದ ಗಡವಂತಿಗೆ ಹೋಗುವ ಹಾಗೂ ಧುಮ್ಮನಸೂರಿನಿಂದ ಗಡವಂತಿಗೆ ಹೋಗುವ ಎತ್ತಿನ ಬಂಡಿಯ ದಾರಿ ಎಲ್ಲಿ ಹಾದು ಹೋಗುತ್ತಿತ್ತು. ಗುರುಗಂಗಾ (ಲಾಲಧರಿ ಹಳ್ಳ) ವಿರಜಾ (ವಾಂಜರಿ ಹಳ್ಳ) ನದಿಗಳು ಸದಾ ಹರಿಯುತ್ತಿದ್ದು ಅವೆರಡು, ನದಗಿಗಳ ಸಂಗಮವಾಗಿರುವ ಇದು ದಟ್ಟವಾದ ಗಿಡಗಳ ಗುಂಪು, ಹಸಿರು ತುಂಬಿದ ಪ್ರಶಾಂತತೆ, ಖಡ್ಗಮೃಗಗಳ ಕಲರವ ಸದಾ ಹಾದಿಹೋಕರ ಕಣ್ಮನ ಸೆಳೆಯುತ್ತಿತ್ತು.

ಒಮ್ಮೆ ಮಾಣಿಕ ಪ್ರಭುಗಳು ದೇಶ ಸಂಚಾರ ಮುಗಿಸಿಕೊಂಡು ಬೀದರನಿಂದ ಮಂಗಲಗಿಗೆ ಹುಮನಾಬಾದ ಮಾರ್ಗವಾಗಿ ಕಲ್ಯಾಣಕ್ಕೆ ಮರಳಿ ಬರುತ್ತಿರುವಾಗ ಈ ಪ್ರದೇಶದಲ್ಲಿ ಅವರು ಕುಳಿತಿದ್ದ ಮೇಣೆಗೆ ಗಿಡಗಳ ಟೊಂಗೆಗಳು ತಾಕಿದರಿಂದ ಅವರು ಅಲ್ಲಿ ಕೆಳಗಿಳಿಯತ್ತಾರೆ. ಅಲ್ಲಿಯೇ ಸಮೀಪದಲ್ಲಿ ಒಂದು ಸಣ್ಣ ಕಟ್ಟೆ ಇತ್ತು.

ಅದರ ಮೇಲೆ ಕುಳಿತುಕೊಳ್ಳುತ್ತಾರೆ. ಮುಂದೆ ಈ ಸ್ಥಾನವೆ ಮಾಣಿಕ ಪ್ರಭುಗಳ ತಪ್ಪೋತಾಣವಾಗಿ ಮಾಣಿಕ ನಗರವೆಂದು ಹೆಸರುವಾಸಿಯಾಯಿತು.

ಆರಂಭದಲ್ಲಿ ವಿಷಜಂತುಗಳು, ಕಾಡುಮೃಗಳು ಹಾಗೂ ಕೊಲೆಸುಲಿಗೆ ಹಾಗೂ ದರೋಡೆಕೋರರಿಗೆ ವಾಸಸ್ಥಾನವಾಗಿದ್ದ ಈ ಪ್ರದೇಶವನ್ನು ಮಾಣಿಕ ಪ್ರಭುಗಳು ಸಕಲಮತದ ಸರ್ವದರ್ಮ ಸಮಯನ್ವದ ಕೇಂದ್ರವಾಗಿ ಪರಿವರ್ತಿಸಿದರು. ಪ್ರಭುಗಳ ಶಿಷ್ಯರಲ್ಲಿ ಪ್ರಮುಖರಾಗಿದ್ದ ಮುಳಾಸಂಗಪ್ಪಾ ಮುಲಗೆ ಮಾರಪ್ಪ ಹಾಗೂ ನತ್ಥಡ ಸಾವಲಿ ಇವರ ವಿನಂತಿಯ ಮೇರೆಗೆ ಈ ಪ್ರದೇಶದಲ್ಲಿ ವಾಸಿಸತೊಡಗಿದ ಪ್ರಭುಗಳು ಮೊದಲು ಅಲ್ಲೊಂದು ಸರ್ವೇಶ್ವರ ದೇವಾಲಯವನ್ನು ಸ್ಥಾಪಿಸಿ ಧ್ಯಾನಸಕ್ತರಾಗತೊಡಗಿದರು, ನಂತರ ಶಿಷ್ಯರು ಬಂಧುಗಳ ಅಲ್ಲಿ ಬಂದು ಗುಡಿಸಲುಗಳನ್ನು ಹಾಕಿಕೊಂಡು ವಾಸಿಸಲು ಆರಂಭಿಸಿದರು. ಹೀಗೆ ೨-೩ ಗುಡಿಸಲುಗಳನ್ನು ಕಟ್ಟಿಕೊಂಡಿದ್ದ ಇಲ್ಲಿ, ಆಮೇಲೆ ಶಿಷ್ಯರು ಅದೊಂದು ಗ್ರಾಮವಾಗಿ ರೂಪಗೋಂಡು ೧೮೪೫ರಲ್ಲಿ ಮಾಣಿಕಗಿರಿ ಎಂದು ಸಂಸ್ಥಾಪಿತಗೊಂಡಿತು. ಎರಡು ಹಳ್ಳಗಳ ಸಂಗಮದ ಸ್ಥಾನದ ಗಿರಿಯ ಪ್ರದೇಶದಲ್ಲಿ ಈ ಊರು ಇರುವುದರಿಂದ ಮೊದಲಿನ ಇದರ ಹೆಸರು ಮಾಣಿಕಗಿರಿಯಾಗಿತ್ತು. ಇ ಊರಿನ ಆದಿದೈವವೇ ಆಗಿದ್ದಾರೆ ಮಾಣಿಕ ಪ್ರಭು

" ಭಕ್ತ ಕಾಯ ಕಲ್ಪದ್ರಮ ಗುರು ಸಾರ್ವಭೌಮ
ಶ್ರೀ ಮದ್ರಾಜಾಧಿರಾಜ ಯೋಗಿ ಮಹಾರಾಜ
ತ್ರಿಭುವನಂದ ದ್ವೈತ ಅಭೇದ ನಿರಂಜನ
ನಿರ್ಗುಣ ನಿರಾಲಂಬ ಪರಿಪೂರ್ಣ ಸದೊದಿತ
ಸಕಲ ಮತ ಸ್ಥಾಪಿತ" -೧

ಶ್ರೀ ಸದ್ಗುರು ಮಾಣಿಕ ಪ್ರಭು 'ಮಹಾರಾಜ..........,ರೆಂದು ಶಿಷ್ಯಬಳಗದಿಂದ ಬಿರುದಾವಳಿಗಳನ್ನು ಹೊಂದಿರುವ ಪ್ರಭುಗಳು ರಾಜಯೋಗಿಗಳು, ಸರ್ವಧ.

ಜನನ ಹಾಗೂ ಬಾಲ್ಯ ಜೀವನಃ-

ಶಕೆ ೧೭೩೯ ಮಾರ್ಗಶೀರ್ಷ ಶುದ್ಧ ತಚುರ್ದಶಿಯಂದು ಅಂದರೆ ದಿನಾಂಕ : ೨೨-೧೨-೧೮೧೭ ರಂದು ಬಾಯಮ್ಮ ತಾಯಿಯವರು ಎರಡನೆಯ ಗಂಡು ಮಗನಿಗೆ ಜನ್ಮ ನಿಡಿದರು, ದತ್ತು ಜಯಂತಿಯ ದಿನದಂದು ಹುಟ್ಟಿದ ಆ ಮಗುವಿಗೆ ಅಜ್ಜಿ ಬಚ್ಚಮ್ ಅವರು ಸಂತೊಷದಿಂದ ನನ್ನ ರತ್ನವೆಂದು ಕರೆದರು. ನಂತರದಲ್ಲಿ ಅದಕ್ಕೆ ನಾಮಕರಣ ಮಾಡಿದರು -೨ ನಂತರದ ಕೆಲವು ವರ್ಷಗಳ ತರುವಾಯ ಮನೋಹರ ನಾಯಕರಿಗೆ ತೃತೀಯ ಪುತ್ರನಾದ ನರಸಿಂಹನು ಹಾಗೂ ಚಿಮಣಬಾಯಿ ಎಂಬ ಮಗಳು ಜನಿದರು, ಲಾಡವಂತಿಯಲ್ಲಿ ಮಕ್ಕಳೊಂದಿಗೆ

ಇರುವಾಗ ಬಚ್ಚಮ್ಮ ಹಾಗೂ ಮನೋಹರ ನಾಯಕರು ವೈಕುಂಠವಾಸಿಗಳಾದರು. ಮನೆತನದ ಭಾರ ಹೊತ್ತುಕೊಂಡು ಬಯಮ್ಮನವರು ತನ್ನ ಮಕ್ಕಳೊಂದಿಗೆ ಬಸವಕಲ್ಯಾಣಕ್ಕೆ ಬಂದರು. ಅಲ್ಲಿ ಅವರು ಬಂಧುಗಳ ಆಶ್ರಯದಲ್ಲಿರತೊಡಗಿದರು.

ಮಾಣಿಕ ಪ್ರಭುಗಳ ಬಾಲ್ಯ ಜೀವನವು ಬಸವಕಲ್ಯಾಣದಲ್ಲಿಯೇ ಕಳೆದು ಹೋಯಿತು. ಹುಟ್ಟಿನಿಂದಲೇ ಜ್ಞಾನಿಯಾಗಿದ್ದ ಮಾಣಿಕನು ಗೆಳೆಯರೊಂದಿಗೆ ಸ್ವತಂತ್ರವಾಗಿ ಸಂಚರಿಸುತ್ತಿದ್ದನು. ಅಡವಿಯಲ್ಲಿ ಗೆಳೆಯರೊಂದಿಗೆ ಕಾಲ ಕಳೆಯುತ್ತಾ ಆಟ ಪಾಠಗಳಲ್ಲಿ ಮಗ್ನರಾಗಿರುತ್ತಿದ್ದರು. ಅವರೆಂದೂ ಶಾಲೆಗೆ ಹೋಗಲಿಲ್ಲ ಪಾಟಿ –ಪುಸ್ತಕ ಹಿಡಿದು ಬರೆಯಲಿಲ್ಲ, ಓದಲಿಲ್ಲ. ಆದರೆ ದಟ್ಟಾರಣ್ಯದಲ್ಲಿ ತಿರುಗಾಡುತ್ತ ಏನೇನೋ ಹುಡುಕುತ್ತಿದ್ದರು ಒಂಮ್ಮೋಮ್ಮೆ ಗುಹೆಗಳಲ್ಲಿ ಕುಳಿತುಕೊಂಡು ಏಕಾಂತವಾಸ ಮಾಡುತ್ತಿದ್ದರು, ಆ ಮಾಣಿಕನ ಸುತ್ತ –ಮುತ್ತ ಸದಾ ಹುಡುಗರ ಗುಂಪೋಂದು ಇರುತ್ತಿತ್ತು. ಆದರೂ ಬಸವಕಲ್ಯಾಣದಲ್ಲಿಯ ಅವರ ಸೋದರ ಮಾವಂದಿರಾದ ಬಳವಂತರಾಯ ಕುಲಕರ್ಣಿಯವರ ಒತ್ತಾಯದ ಮೂಲಕ ಆ ಕಾಲದ ಗಾಂವಠಿ ಶಾಲೆಯೊಂದಕ್ಕೆ ಅವರ ಸೇರಿಕೊಂಡರು. ಪಂತೋಜಿ ಎಂಬುವವರು ಸಣ್ಣ–ಸಣ್ಣ ಮಕ್ಕಳಿಗೆ ಇಲ್ಲಿ ವ್ಯವಹಾರ ಜ್ಞಾನವನ್ನು ಹೇಳಿಕೊಡುತ್ತಿದ್ದರು ಇಲ್ಲಿ ಅಕ್ಷರ ಜ್ಞಾನ, ವ್ಯಾಕರಣ, ಶಾಸ್ತ್ರ ಹಾಗೂ ವೈದಿಕ ವಿದ್ಯೆಯನ್ನು ಹೇಳಿಕೊಡಲಾಗುತ್ತಿತ್ತು. ಈ ಎಲ್ಲ ವಿದ್ಯೆಗಳನ್ನು ಮಾಣಿಕರು ಹುಟ್ಟಿನಿಂದಲೇ ಕಲಿತುಕೊಂಡವರಂತೆ ಇದ್ದರು.

ಮಾಣಿಕನು ಶಾಲೆ ಕಲಿತು ಕುಟುಂಬದ ಭಾರ ಹೋರುತ್ತಾನೆಂದು ತಾಯಿ ಅವರ ಸೋದರಮಾವ ಭಾವಿಸಿದರೆ ಹಾಗಾಗಲಿಲ್ಲ. ಸೋದರ ಮಾವ ಶಾಲೆಗೆ ಅವರನ್ನು ಕಳಸಿಕೊಡಲು ಪಟ್ಟ ಶ್ರಮವೆಲ್ಲ ವ್ಯರ್ಥವಾಯಿತು. ಮಾಣಿಕನು ಸದಾ ಸಂಚಾರ ಜೀವಿಯಾಗಿದ್ದರು. ಅವರ ಮಾವನವರು ತಮ್ಮ ಸಿಪಾಯಿಯ ನಜರಬಂಧನದಲ್ಲಿ ಅವರನ್ನು ಇಟ್ಟರೂ ಪ್ರಯೋಜನವಾಗಲಿಲ್ಲ . ಹೇಗೋ ಅಲ್ಲಿಂದ ತಪ್ಪಿಸಿಕೊಳ್ಳುತ್ತಿದ್ದರು. ಒಮ್ಮೆ ಬಳವಂತರಾಯರೇ ಸ್ವತಃ ಅವರ ಬೇನ್ನು ಹತ್ತಿ ಅವರನ್ನು ಹಿಡಿಯಲು ಹೋದರು. ಆಗ ಮಾಣಿಕನು ಹುಲಿಯ ಗುಡುಗಿನ ಸಮೀಪದಲ್ಲಿ ಹೊದನು ನೋಡೊಣ ಎಂದು ಬೇನ್ನು ಹತ್ತಿ ಹೋದರೆ ಹುಲಿಯ ಗುಡುಗನ್ನು ಕೇಳಿ ಹೇದರಿಕೊಂಡು ವಾಪಸಾದರು. ಆ ನಂತರ ಅವರು ಮಾಣಿಕರ ತಂಟೆಗೆ ಹೋಗಲೇ ಇಲ್ಲ.

ಮಾಣಿಕರ ವಾಣಿ ಅದ್ಭುತವಾದುದೆಂದು ಜನರಿಗೆ ಮನವರಿಕೆಯಾಗ ತೋಡಗಿತು. ಅದಕ್ಕೆ ಕಾರಣವೆಂದರೆ ಬಾಲ್ಯದಲ್ಲಿಯೇ ಅವರ ಪವಾಡ ಸದೃಶ್ಯವಾದ ಕಾರ್ಯಗಳನ್ನು ಮಾಡಿದರು. ಒಮ್ಮೆ ಗವಳಿಗರ ಗೋವಿಂದನೆಂಬ ಗೆಳೆಯನಿಗೆ ಪ್ರಾಣ ಬರಿಸಿದರು ಮಕ್ಕಳಾಗದ ರೈತರೋಬ್ಬರಿಗೆ ಮಕ್ಕಳಾಗುವುದಾಗಿ ಮಡಿದು

ತೋರಿಸಿದರು. ಸದಾ ಬಾಲಕರಿಗೆ ಪ್ರಾಣ ಹಿಂಸೆ ಮಾಡಬಾರದ್ದಾಗಿ ತಿಳಿಸುತ್ತಿದ್ದರು. ಹುಡುಗರೊಂದಿಗೆ ಜೋತೆಗೂಡಿ ಆಟವಾಡುತ್ತಾಡುತ್ತಾ ಅಲ್ಲಿಂದ ಮಾಯಾವಾಗಿ ಬಿಡುತ್ತಿದ್ದರು ಹುಡಗರೆಲ್ಲ ಬೆಸತ್ತು ಸುಮ್ಮನಾಗುತ್ತಿದ್ದರು. ಹೀಗೆ ಬಾಲ್ಯದಲ್ಲಿ ನಾನಾ ಲೀಲೆಗಳನ್ನು ಮರೆಯುತ್ತಿದ್ದ ಮಾಣಿಕರನ್ನು ಅರಿಯದ ಅವರ ಮಾವನು ದುಡಿಯಲಾರದ ಅವರನ್ನು ಕಂಡು ಸಿಡಿಮಿಡಿಗೊಳ್ಳುತ್ತಿದ್ದರು. ಅದೇ ಸಂಧರ್ಭದಲ್ಲಿ ಮಾಣಿಕರ ಅಣ್ಣ ಹನುಮಂತ ದಾದಾನ ಮದುವೆಯಾದ್ದರಿಂದ ಮನೆಯ ಖರ್ಚು ನಿಭಾಯಿಸುವುದು ಕಷ್ಟಸಾಧ್ಯಯವಾಯಿತು. ಆದರು ಮನೆತನದ ಬಗ್ಗೆ ಮಾಣಿಕರಿಗೆ ಎಳ್ಳಷ್ಟು ಚಿಂತೆ ಇಲ್ಲವಾಗಿತ್ತು.

ಹೇಗಾದರಾಗಲಿ ಮಾಣಿಕನು ಕೆಲಸ ಮಾಡಲಿ ಎಂಬ ಹೆಬ್ಬಯಕೆಯಿಂದ ಅವರ ಮಾವನು ಮಾಣಿಕನಿಗೆ ಜಕಾತ್ ನಾಕಾದಲ್ಲಿ ಒಂದು ಕೆಲಸ ಕೋಡಿಸಿದರು. ಪರೋಪಕಾರಿಯಾಗಿದ್ದ ಮಾಣಿಕನು ಅಲ್ಲಿ ಕೂಡಿದ ನಾಕಾದ ಹಣವನ್ನು ಬಡಬಗ್ಗರಿಗೆ ಹಂಚಿ ಮನೆಗೆ ಬರುತ್ತಿದ್ದುದರಿಂದ ಆ ಕೆಲಸವೂ ಅವರಿಂದ ಕೈತಪ್ಪಿ ಹೋಯಿತು. ತುಂಬಾ ವ್ಯವಹಾಂಕರಾಗಿದ್ದ ಬಳವಂತರಾಯ ಅವರನ್ನು ಗುರುತಿಸಲಿಲ್ಲ. ಮಾಣಿಕರು ಅವರ ದೃಷ್ಟಿಯಲ್ಲಿ ಕೆಲಸ ಮಾಡದ ಒಬ್ಬ ಸಾಮಾನ್ಯ ಸೋಮಾರಿಯೆನಿಸಿದ್ದರು. ಇದರಿಂದ ಆಗಾಗ ಅವರ ಮೇಲೆ ಸಿಡಿಮಿಡಿಗೊಳ್ಳುತ್ತಿದ್ದರು. ಒಮ್ಮೊಮ್ಮೆ ಕೂಡಿಸಿಕೊಂಡ ಬೈಯುತ್ತಿದ್ದರು.

ಒಂದು ದಿನ ಮಾಣಿಕರು ಅವರ ಮಾವನರ ಮನೆಗೆ ಹೋಗಿ ಮದ್ಯಾಹ್ನದ ಸಮಯದಲ್ಲಿ ಶಾಲು ಹೋತ್ತುಕೊಂಡು ಮಲಗಿದ್ದರು. ಹೊರಗಿನಿಂದ ಬಂದ ಬಳವಂತ್ರಾಯರು ಪಲ್ಲಂಗದ ಮೇಲೆ ಮುಸುಕು ಹಾಕಿಕೊಂಡು ಮಲಗಿದ್ದವರನ್ನು ಕಂಡು ಸಿಟ್ಟಿನಿಂದ ಮಲಗಿಕೊಂಡವರು ಯಾರು: ಎಂದು ಗುಡುಗಿದರು. ಮಾಣಿಕರು ಮಲಗಿದ್ದಾರೆ ಎಂಬ ಮಾತು ಕೇಳಿ ಕೋಪದಿಂದ ಅವರನ್ನು ಎಬ್ಬಿಸಿ ಮನ ಬಂದಂತೆ ಮಾತನಾಡಿದರು. ಏನು ಜಹಗೀರದಾರ ವರುಷದ ತರುಣನಾಗಿರುವಿ ಹೇಗೆ ಹೊಟ್ಟೆ ತುಂಬಿಸಿಕೊಳ್ಳಬೇಕೆಂಬ ಪರಿಜ್ಞಾನ ಬೇಡವೇ? ನೀನು ಮಾಡುವ ಉದ್ಯೋಗವೇನು? ನಿನ್ನ ಬಗ್ಗೆಯಾಗಲಿ ನಿನ್ನ ಮನೆತನದ ಬಗ್ಗೆಯಾಗಲಿ ಒಮ್ಮೆಯಾದರೂ ಕುಳಿತು ವಿಚಾರಿಸಿದ್ದಿಯಾ? ಈ ವಯಸ್ಸಿನಲ್ಲಿ ದುಡಿಯುವುದು ಬಿಟ್ಟು, ಇನ್ನೋಬ್ಬರು ದುಡಿದು ತಂದುದನ್ನು ತಿಂದು ತಿರುಗುವುದು ಸಾರಿಯೇ ? ನಿನಗಾಗಿ ಎರಡನೆಯವರು ಏಕೆ ಕಷ್ಟಪಡಬೇಕು ಹೋಗು ಎಂದು ಕೊಪದಿಂದ ಕೂಗಾಡಿದರು.

ಈ ಎಲ್ಲಾ ಮಾವನ ಮಾತುಗಳಿಂದ ಮೂದಲಿಸಿಕೊಂಡು ಮಾಣಿಕರು ಒಂದು ಕ್ಷಣ ವಿಚಾರಿತರಾಗಿ ಯೋಚಿಸಿದರು. ಶಾಂತ ಚಿತ್ತದಿಂದ ಅಂದೇ ಉಟ್ಟ ದೋತರ ಹರಿದು ಲಂಗೋಟಿ ಹಾಕಿಕೊಂಡು ನಿರ್ಧಾರ ಮಾಡಿದವರಂತೆ

ಮಾವನಿಗೆ ನಮಸ್ಕರಿಸಿ ದೇಶಪರ್ಯಟಸಿಗೆ ಹೊರಟರು. ಅವರ ತಾಯಿ, ಬಂಧುಗಳು ಎಷ್ಟು ತಡೆದರೂ ನಿಲ್ಲಲಿಲ್ಲ ಅಲ್ಲಿಂದ ಹೊರಟು ಹೋದರು. ಬಸವಕಲ್ಯಾಣದಿಂದ ಹೊರಟ ಮಾಣಿಕರು ಅಲ್ಲಿಂದ ಸುಮಾರು ೧೦ ಮೈಲು ದೂರದಲ್ಲಿದ್ದ ಅಮೃತಕುಂಡಕ್ಕೆ ಬಂದರು, ಚಂಡಕಾಪೂರದ ಸಮೀಪದಲ್ಲಿರುವ ಈ ಕುಂಡವು ಒಂದು ಪ್ರಾಚೀನ ತೀರ್ಥವೆನಿಸಿದ್ದು, ಪ್ರಶಾಂತವಾದ ಸ್ಥಳವಾಗಿದೆ. ಅಂಬಲಿಕುಂಡವೆಂದು ಇದನ್ನು ಕರೆಯಲಾಗುತ್ತಿದ್ದು, ೧೨ನೇ ಶತಮಾನದಲ್ಲಿ ಆಗಿ ಹೋದ ಮಾದಾರ ಚನ್ನಯ್ಯನವರ ವಾಸಸ್ಥಾನವಿದಾಗಿರುವಂತಿದೇ ಶಿವನಿಗೆ ಅಂಬಲಿಯನ್ನೆ ಉಣಬಡಿಸಿದ ಚನ್ನಯ್ಯನ ಮಿಕ್ಕಿದ ಅಂಬಲಿಯೇ ಕುಂಡವಾಗಿದೆಯಂತೆ ಸುತ್ತಲು ಗಿಡಗಳ ಗುಂಪಿರುವ ಆಚೆ ಈಚೆ ಬದಿಯಲ್ಲಿ ಎತ್ತರದ ದಿನ್ನಿಗಳಿದ್ದು ಮಧ್ಯದಲ್ಲಿ ಒಂದು ನೀರಿನ ಹೊಂಡವಿದೆ. ಈ ಕುಂಡದ ದಂಡೆಯ ಮೇಲೆ ರಾಮರಾಯನ ಗುಡಿಯಿದೆ ಚಂಡಿಕಾಪೂರದ ಅಡವಿಯಲ್ಲಿ ಇರುವ ಇದೊಂದು ಶ್ರೇಷ್ಠ ಶರಣನ ಸ್ಮಾರಕವೆನಿಸಿದೆ, ಈಗ ಅದನ್ನು ಬೇರೊಂದು ರೀತಿಯಲ್ಲಿ ಅರ್ಥೈಸಲಾಗುತ್ತಿದೆ. ಏನೇ ಇರಲಿ ಹನ್ನೇರಡನೆಯ ಶರಮಾನದ ನಂತರದಲ್ಲಿ ಇದು ಅನೇಕ ಸಾಧು-ಸಂತರಿಗೆ ತಪಸ್ಸಿಗೆ ತಾಣವಾಗಿದ್ದುಕೊಂಡು, ತನ್ನದೇ ಆದ ಸಂಸ್ಕೃತಿಯನ್ನು ಉಳಿಕೊಂಡಿದೆ, ಎರಡು ದಿನ್ನೆಗಳ ಮಧ್ಯದಲ್ಲಿ ದಕ್ಷಿಣ ದಿಕ್ಕಿಗೆ ಹರಿಯುವ ಒಂದು ಹಳ್ಳವಿದ್ದು ಬಂದು ಹೋಗುವ ಪ್ರವಾಶಿಗರ ತನಮನವನ್ನು ತಣಿಸುತ್ತದೆ. ತುಂಬಾ ಆಕರ್ಷಕವಾಗಿ ಕಾಣುವ ಈ ಪ್ರದೇಶದ ಸಮೀಪದಲ್ಲಿ ಗುಡ್ಡಕ್ಕೆ ಹೊದಿಕೊಂಡಂತೆ ಗುಹೆಗಳಿದ್ದು, ಹಿಂದೆ ಅಲ್ಲಿ ಸಾಧು, ಸಮತರು ವಾಸಿಸಿದ್ದಾಗಿ ತಿಳಿದ ಬರುತ್ತದೆ ರಾಮಾಯಾಣ ಕಾಲದ ರಾಮ-ಸೀತೆಯರೂ ಈ ಪ್ರದೇಶಕ್ಕೆ ಬಂದು ವಾಸ್ತವ್ಯ ಮಾಡಿ ಹೋಗಿದ್ದಾಗಿ ಜನ ನಂಬುತ್ತಾರೆ.

ಈ ಸ್ಥಾನಕ್ಕೆ ಆಗಮಿಸಿದ ಹದಿನಾರು ವರ್ಷದ ಮಾಣಿಕರು ಮೌನವಾಗಿ ತಿರುಗಾಡುತಿದ್ದರು. ಕೇವಲ ಮೈಮೇಲೆ ಲಂಗೋಟಿ ಧರಿಸಿಕೊಂಡು ಅಂಗದ ತುಂಬ ಭಸ್ಮ ಬಳಿದುಕೊಂಡು, ಅತ್ಯಂತ ತೇಜಃ ಪುಂಜವಾಫಿ ಕಾಣುತ್ತಿದ್ದರು. ಯಾರಾದರೂ ಇವರ ಸಮೀಪ ಹೋಗಿ ಮಾತನಾಡಲು ಪ್ರಯತ್ನಿಸಿದರೆ ಸಾಕು ಅಲ್ಲೇ ಪಕ್ಕದಲ್ಲಿದ್ದ ಅರಣ್ಯದಲ್ಲಿ ಹೋಗಿ ಬಿಡುತ್ತಿದ್ದರು, ಅರಣ್ಯದಲ್ಲಿ ಸಂಚರಿಸಿವುದೆಂದರೆ ಮಾಣಿಕರಿಗೆ ತುಂಬಾ ಸಂತೋಷವಾಗುತ್ತಿತ್ತು. ಅಲ್ಲಿರುವ ವಿಷಜಂತು ಕಾಡು ಮೃಗಗಳಿಗೆ ಅವರೆಂದು ಹೆದರುತ್ತಿರಲಿಲ್ಲ. ಅರಣ್ಯದಲ್ಲಿರುವ ಹಲವು ರೀತಿಯ ಪಶು-ಪಕ್ಷಿ ತುರು-ಲತೆಗಳ ಮಧ್ಯದಲ್ಲಿ ಹಾಯಾಗಿರುತ್ತಿದ್ದರು. ಅಲ್ಲಿರುವ ಗುಹೆಗಳಲ್ಲಿ ಏಕಾಂಗಿಯಾಗಿ ಹೋಗಿ ಕುಳಿತು ಬಹಳ ಹೊತ್ತಿನವರೆಗೆ ಧ್ಯಾನಸಕ್ತರಾಗುತ್ತಿದ್ದರು. ಸೃಷ್ಟಿಯೋಂದಿಗಿನ ವಾಸಸ್ಥಾನ, ತುರ-ಲತೆ-ಪಶು-ಪಕ್ಷಿಯೊಂದಿಗಿನ ಒಡನಾಟ, ಏಕಾಂತವಾದ ಅವರ

ಧ್ಯಾನಶಕ್ತಿಯಿಂದ ಮಹತ್ತರವಾದ ಶಕ್ತಿಯನ್ನು ಅವರು ಸಂಪಾದಿಸಿಕೊಂಡರು. ಪ್ರತಿನಿತ್ಯ ಅಂಬಲಿಕುಂಡಕ್ಕೆ ಬರುವ ಅನೇಕ ಭಕ್ತರು ಅಲ್ಲಿ ಒಮ್ಮೊಮ್ಮೆ ಆಕಸ್ಮಿಕವಾಗಿ ಕಾಣುತ್ತಿದ್ದ ಈ ಬಾಲಯೋಗಿಯ ದಿವ್ಯ ತೇಜಸ್ಸಿಗೆ ಮಾರುಹೋಗಿ, ಅವರಿಗೆ ನಮಸ್ಕರಿಸುತ್ತಿದ್ದರು. ಶಿವನಿಚ್ಛೆಯಂತೆ ಮಾಣಿಕರು ಆಗಾಗ ಮೌನ ಮುರಿದು ಅವರೊಂದಿಗೆ ಮಾತನಾಡುತ್ತಿದ್ದರು.

ಬಸವಕಲ್ಯಾಣದಲ್ಲಿದ್ದ ತಾಯಿ, ತಮ್ಮ, ಮಾವ,ಬಂಧುಗಳು ಮಾಣಿಕರನ್ನು ಅನೇಕ ಕಡೆ ಹುಡುಕಾಡಿ ಸೋತ್ತಿದ್ದರು. ಯಾರೋ ಮಂಠಾಳ ಗ್ರಾಮದಿಂದ ಬಂದ ಸ್ನೇಹಿತರೊಬ್ಬರು ಮಾಣಿಕರು ಅಮೃತಕುಂಡದಲ್ಲಿ ಇರುವುದಾಗಿ ಅಲ್ಲಿ ಅವರನ್ನು ಮಂಠಾಳದ ಕುಲಕರ್ಣಿಯವರು ಕಂಡದ್ದಾಗಿ ತಿಳಿಸುತ್ತಾರೆ. [-೩] ಇದರಿಂದ ಸಂತೋಷಗೊಂಡ ಅವರ ಮನೆಯವರು ಅಮೃತಕುಂಡಕ್ಕೆ ಬರುತ್ತಾರೆ. ಅಲ್ಲಿ ಮಾಣಿಕ ಪ್ರಭುಗಳನ್ನು ಒಮ್ಮೆಲೆ ಕಂಡು ಅವರು ಸಂತೋಷಗೊಳ್ಳುತ್ತಾರೆ ಈ ಸಮಯದಲ್ಲಿ ಮನೆಯವರೆಲ್ಲ ತಮ್ಮ ಮನೆತನದ ಆಗು ಹೋಗುಗಳ ಬಗ್ಗೆ ಮಾಣಿಕರೊಂದಿಗೆ ಮಾತನಾಡುತ್ತಾರೆ. ಅವರಿಗೆ ಊರಿಗೆ ಬರಲು ತಿಳಿಸುತ್ತಾರೆ. ಇದನ್ನು ತುಂಬಾ ಆಸಕ್ತಿಯಿಂದ ಕೇಳುವ ಪ್ರಭುಗಳು ತಾವು ಊರಿಗೆ ಬರುವುದನ್ನು ನಿರಾಕರಿಸುತ್ತಾರೆ ಅಷ್ಟೇ ಅಲ್ಲ ತಾನು ಬರುವುದನ್ನು ನೀವ್ಯಾರು ನಿರೀಕ್ಷಿಸಬಾರದು, ನಿಮ್ಮ ಮನೆತನದ ಜವಬ್ದಾರಿಯನ್ನು ನೀವೇ ಹೋತ್ತುಕೊಳ್ಳಬೇಕು ಕಾಲಬಂದಾಗ ಕೂಡೋಣ ಎಂದು ಹೇಳುತ್ತಾರೆ. ಅವರ ಬಂಧುಗಳು ತುಂಬಾ ನಿರಾಸೆಯಿಂದ ಕಲ್ಯಾಣಕ್ಕೆ ಮರಳಿ ಬರುತ್ತಾರೆ.

ಯೋಗ ಶಕ್ತಿಚಾ ವರ್ಣಿನ ಮಹಿಮಾ, ವಂದನಿ ಗುರು
ಮಾಣಿಕಾ ಘಾಲಾ ವಿಶ್ವರೂಪ ಆಯಕಾ!....
ಯೋಗ ಶಕ್ತಿನೆ ತೋ ಪ್ರಭು ಅಪಣಜಿ, ಅನೇಕ ರೂಪಾಘರೀ
ಪ್ರಗಟಲಾ ಸರ್ವಚಾ ಮಂದಿರ ! ಕೋರೆ ವಸ್ತ್ರಧನ ಪುಷ್ಪಚಿ ಘೇತೋ
ಕೋರೆ ಭೋಜನ ಕರೀ ಪರಿತೋ ಏಕಚಿ ಸರ್ವಘರಿ ! ಅದ್ಭುತ ಲೀಲಾ
ಶ್ರೀ ಪ್ರಭುಚಿ ಹಿ ನವರ್ಣಚೆ ಬ್ರಹ್ಮಾದಕಾ ! ಜಾಲಾ ವಿಶ್ವರೂಪ ಆಯಕಾ !!

ಎಂದು ಆ ಪ್ರಸಂಗದಲ್ಲಿಯ ಪ್ರಭುಗಳ ಲೀಲೆಯನ್ನು ಹಾಡಿ ಹೊಗಲಿದ್ದಾರೆ. [-೪]

ಭಕ್ತರ ಕರೆಯ ಮೇರೆಗೆ ಭಾಲ್ಕಿ, ಚಿಟಗುಪ್ಪ, ಮಂಗಲಗಿ, ಮೊದಲಾದ ಗ್ರಾಮಗಳಿಗೆ ಭೇಟಿ ನೀಡಿ ಭಕ್ತರನ್ನು ಸಂತೃಪ್ತಿಗೊಳಿಸಿ ಕಲ್ಯಾಣಕ್ಕೆ ಬರುವಾಗ ಮಾರ್ಗ ಮಧ್ಯದಲ್ಲಿಯೇ ಹುಮನಾಬಾದದಿಂದ ೨ ಕಿ,ಮೀ. ದುರವಿರುವ ಸಂಗಮ ಸ್ಥಾನದಲ್ಲಿ ಪ್ರಭುಗಳ ಮೇಣಿಯು ನಿಲ್ಲುತ್ತದೆ. ಕಳ್ಳಕಾಕರ, ತಾಣವಾಗಿದ್ದ ಆ ಭಯಾನಕ ಪ್ರದೇಶವು ಪ್ರಭುಗಳ ವಾಸದಿಂದ ತಪೋ ಭೂಮಿಯಾಗಿ, ಪುಣ್ಯಕ್ಷೇತ್ರವಾಗಿ,

ಪ್ರಭುಗಳ ಭಕ್ತರಿಗೆ ಭೂ ವೈಕುಂಠವಾಗಿ, ಇಂದು ಒಂದು ಸುಂದರ ಆಧುನಿಕ ನಗರವಾಗಿ ನಿಂತಿದೆ. ಸಣ್ಣ ಎರಡು ಹೊಳೆಗಳ ಸಂಗಮ ಸ್ಥಾನ ದಟ್ಟ ಗಿಡಮರಗಳ ಗುಂಪು, ದುರ್ಗಮವಾದ ರಸ್ತೆಯಿರುವ ಈ ಪ್ರದೇಶವು ನವಾಬ ರಾಜನೊಬ್ಬನ ಅರಾಜಕತೆ ವ್ಯವಸ್ಥೆಯಲ್ಲಿತ್ತು. ತಾಲೂಕುದಾರನೇ ನವಾಬನಾಗಿದ. ಈತನಿಂದ ಭೂ ಕಂದಾಯದ ಹೊರತಾಗಿ ಇತರ ಕರಗಳನ್ನು ಪ್ರಜೆಗಳಿಂದ ವಸೂಲಿ ಮಾಡುತ್ತಿದ್ದರು. ಕೊಲೆ,ಸುಲಿಗೆ, ದರೋಡೆಗಳು ಇಲ್ಲಿ ಹಗಲಿರುಳೂ ನಡೆಯುತ್ತಿದ್ದವು ಜನರಿಗೆ ಪೋಲಿಸ್ ರಕ್ಷರಣೆಯಿರಲಿಲ್ಲ. ಹೀಗಾಗಿ ಜನರೇ ತಮ್ಮ ರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು. ಜನ ಸಾಮಾನ್ಯರ ಬದುಕು ಕಷ್ಟಸಾಧ್ಯವಾಗಿತ್ತು. ಇಂಥ ಸಮಯ ಹಾಗೂ ಪರಿಸರದಲ್ಲಿ ಪ್ರಭುಗಳು ತಮ್ಮ ಕೆಲವು ಶಿಷ್ಯರ ಬೇಡಿಕೆಯ ಹಿನ್ನೆಲೆಯಲ್ಲಿ ಇಲ್ಲಿ ಉಳಿದು, ಇಲ್ಲಿಯ ಪರಿಸರವನ್ನೆ ಮಾರ್ಪಡಿಸಿದರು. ಇವರ ವಾಸ್ತವ್ಯದಿಂದ ಇದೊಂದು ಪಾವನ ಭೂಮಿಯಾಗಿ ರೂಪುಗೊಂಡಿತ್ತು. ಇದೇ ಸ್ಥಾನ ಈಗ ಮಾಣಿಕ ಪ್ರಭುಗಳ ಮೂಲ ಸ್ಥಾನವೆನಿಸಿ ಕಂಗೊಳಿಸುತ್ತಿದೆ.

ಮೊದ ಮೊದಲು ಗುಡಿಸಲುಗಳಿಂದ ಪ್ರಾರಂಭಗೊಂಡು ಮಾಣಿಕಗಿರಿಯು, ನಂತರ ಪ್ರಭುಗಳ ದರ್ಶನಕ್ಕಾಗಿ ಬರುವ ಭಕ್ತರಿಂದ ಹಿರದಾಗಿ ಬೆಳೆಯ ತೊಡಗಿತು. ಗುಡಿಸಲುಗಳ ಸಂಖ್ಯೆ ಬೆಳೆಯ ತೊಡಗಿತು. ಸುತ್ತ-ಮುತ್ತಲಿನ ಜಾಗವನ್ನು ಸ್ವಚ್ಛಗೊಳಿಸಲಾಯಿತು. ಬರು ಹೋಗುವವರ ಉಸ್ತುವಾರಿ ನೊಡಿಕೊಳ್ಳಲು ಹನುಮಂತ ದಾದಾರನ್ನು ನೇಮಿಸಿದರು. ಆಗ ದತ್ತ ಜಯಂತಿ ಉತ್ಸವವನ್ನು ಆರಂಭಿಸಿ, ಅದನ್ನು ನೋಡಿಕೊಳ್ಳಲು ನರಸಿಂಹ ತಾತ್ಯಾರಿಗೆ ವಹಿಸಿಕೊಡಲಾಯಿತು. ಪ್ರಭುಗಳ ಜನಪ್ರಿಯತೆ ಹೆಚ್ಚಾದಂತೆ ಅವರ ರಕ್ಷಣೆಯ ಹೋಣೆಯೂ ಹೆಚ್ಚಾಗಿ ಅವರ ಗುಡಿಸಲು ಮುಂದೆ, ಸುವ್ಯವಸ್ಥೆಗಾಗಿ ರಕ್ಷಕ ದಳವನ್ನು ನೇಮಿಸಲಾಯಿತು. ಒಂದರ ಹಿಂದೊಂದು ಅನುಕೂಲತೆಗಾಗಿ, ಶಾಂತಿ ಸುವ್ಯವಸ್ಥೇ ಪಾಲನೆಗಾಗಿ, ಭಕ್ತರಲ್ಲಿ ಸಮಾನತೆ ತರುವುದಕ್ಕಾಗಿ ಬಂಡಾರಖಾನಾ ಅನ್ನಪೂರ್ಣ ಗೃಹ, ವಸತಿ ಗೃಹಗಳನ್ನು ಸಿದ್ಧ ಪಡಿಸಲಾಯಿತು.

ಮಾಣಿಕ ಪ್ರಭುಗಳು ಸ್ವತಃ ಭಕ್ತರ ಅನ್ನಪ್ರಸಾದ ಪಂಕ್ತಿಯಲಿ ಕುಳಿತು ಊಟ ಮಾಡುತ್ತಿದ್ದರು. ಇದಕ್ಕಾಗಿ ಬ್ರಹ್ಮಚಾರಿ ಶಿಷ್ಯರನ್ನು ನೇಮಿಸಲಾಗಿತ್ತು. ಅವರು ಊರಲ್ಲಿ ಹೋಗಿ ಜೋಳಿಗೆಯಲ್ಲಿ ಪ್ರಸಾದ ತರುತ್ತಿದ್ದರು. ಈ ಜೋಳಿಗೆಯಲ್ಲಿ ತಂದ ರೊಟ್ಟಿ ಚಟ್ನಿಯನ್ನು ಮಾಣಿಕ ಪ್ರಭುಗಳು ತಂಬಾ ಪ್ರೀತಿಯಿಂದ ಸ್ವೀಕರಿಸುತ್ತಿದ್ದರು. ಈ ಜೋಳಿಗೆಯೇ ಮಾಣಿಕ ಪ್ರಭು ಸಂಸ್ಥಾನದ ಕಾಮಧೇನುವಾಗಿತ್ತು. ನಂತರದಲ್ಲಿ ಗುಜರಾತ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಹಾಗೂ ಕರ್ನಾಟಕದ ಅನೇಕ ಭಕ್ತರು ಪ್ರಭುಗಳ ದರ್ಶನಾಶೀರ್ವಾದದಿಂದ ಧನ್ಯರಾದದ್ದಲ್ಲದೆ. ಪ್ರಭೂವಿಗೆ ಭಕ್ತಿಯ ಕಾಣಿಕೆಯನ್ನು ನೀಡತೊಡಗಿದರು. ಇದು ಬಂದ ಭಕ್ತರ ಅನ್ನ ಪ್ರಸಾದಕ್ಕಾಗಿ

ವಿನಿಯೋಗವಾಗುತೊಡಗಿತು. ದರ್ಶನಕ್ಕಾಗಿ ಬಂದ ವಿಭಿನ್ನ ಮತದ ಹಾಗೂ ವಿಚಾರದ ಜನರಿಗೆ ವಿಭಿನ್ನವಾದ ತತ್ವಗಳಲ್ಲಿ ಉಪದೇಶ ನೀಡುತ್ತಿದ್ದರು ಪ್ರಭುಗಳು ಆಯಾ ಶಿಷ್ಯರಿಗೆಲ್ಲ ಶಂಕರನ ರೂಪದಲ್ಲಿ, ಬಸವಣ್ಣನ ರೂಪದಲ್ಲಿ, ಅಗ್ನಿನಾರಾಯಣನ ರೂಪದಲ್ಲಿ , ವಿಷ್ಣುವಿನ ರೂಪದಲ್ಲಿ, ಸದ್ಯೈವೀ ರೂಪದಲ್ಲಿ, ದತ್ತಾತ್ರೇಯ ರೂಪದಲ್ಲಿ ದರ್ಶನ ಕೊಡುತ್ತಿದ್ದರು. ಅದನ್ನೆ ನಾವು ಸಕಲ ಮತಾಚಾರ್ಯರು ಎನ್ನುವುದು.

ಅಡಿ ಟಿಪ್ಪಣೆಗಳು :-

೧. ಸೋಮನಾಥ ಯಾಳವಾರ, ಶ್ರೀ ಮಾಣಿಕಪ್ರಭು .ಪು. ೪.

೨. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ, ಶ್ರೀ ಮಾಣಿಕಪ್ರಭು ರತ್ನ. ಪು.೩.

೩. ಪೂರ್ವೋಕ್ತ. ಪು. ೩.

೪. ಅದೇ. ಪು. ೩೧.

ಆಧಾರ ಗ್ರಂಥಗಳು :-

೧. ಶ್ರೀ ಮಾಣಿಕ ಪ್ರಭು – ಡಾ.ಎಂಸ್. ಲಠ್ಠೆ

೨. ಶ್ರೀ ಮಾಣಿಕ ಪ್ರಭು – ಚಿ ಶ್ರೀ. ಕುಲಕರ್ಣಿ.

೩. ಶ್ರೀ ಮಾಣಿಕ ಪ್ರಭು (ಹಿಂದಿ) –ಜ್ಞಾನರಾಜ ಪ್ರಭು

೪. ಹುಮನಾಬಾದ ತಾಲೂಕಾ ದರ್ಶನ – ಸಂ. ಸೋಮನಾಥ ಯಾಳವಾರ.

೫. ಬೀದರ ಜಿಲ್ಲಾ ದರ್ಶನ – ಸಂ.ಡಾ. ಸೋಮನಾಥ ಯಾಳವಾರ
ಡಾ. ಪ್ರೇಮಾ ಶಿರ್ಸೆ.



ಶ್ರೀ ಮಾಣಿಕಪ್ರಭು ದೇವಸ್ಥಾನ ಮಾಣಿಕನಗರ



ಶ್ರೀ ಮಾಣಿಕ ಪ್ರಭುಗಳ ಸಮಾಧಿ





ಹಣಕುಣಿ

ಈ ಗ್ರಾಮವು ಹುಮನಾಬಾದ ನಗರದಿಂದ ದಕ್ಷಿಣಕ್ಕೆ ೭. ಕಿ.ಮೀ. ದೂರದಲ್ಲಿದೆ. ಇದೋಂದು ಅತ್ಯಂತ ಪ್ರಾಚೀನ ಗ್ರಾಮವೆಂದು ಇತ್ತಿಚೀನ ಸಂಶೋಧನೆಗಳಿಂದ ತಿಳಿದು ಬಂದಿದೆ. ಇಲ್ಲಿಯ ಮಸಟ ಖರ್ಬ ಎಂಬ ಪ್ರದೇಶದಲ್ಲಿ ಆದಿ ಮಾನವನ ವಾಸಿಸಿದ್ದನೆಂದು ಸಂಶೋಧಕರು ತಿಳಿಸಿದ್ದಾರೆ. ಇಲ್ಲಿ ಅನೇಕ ಗುಹೆಗಳು ಮಣ್ಣಿನಲ್ಲಿ ಹೂತು ಹೋಗಿವೆ. ಈ ಚಿಕ್ಕ ಹಳ್ಳಿಯಲ್ಲಿ ಹುಮನಾಬಾದಿನ ಅರಸು ರಾಜ ರಾಮಚಂದ್ರನು ಒಂದು ಚಿಕ್ಕ ಕೋಟೆ ಕಟ್ಟಿಸಿದ್ದಾನೆ. ಅದು ಆಗಿನ ಕಾಲದ ಟ್ರೆಜರಿ(ಹಣದ ಕೊಣೆ) ಯಾಗಿತ್ತು. ಎಂದು ಜನಪದ ವಿದ್ವಾಂಸರಾದ ಎಚ್.ಕಾಶಿನಾಥರೆಡ್ಡಿಯವರು ಅಭಿಪ್ರಾಯ ಪಡುತ್ತಾರೆ. ಈ ಹಳ್ಳಿಯು ಅನೇಕ ಜನಪದ ಕಲಾಕಾರರಿಂದ ಕುಡಿದ ಗ್ರಾಮವಾಗಿದೆ. ದಿವಂಗತರಾದ ಜನಪದ ಹಾಡುಗಾರ್ತಿ ನಾಗಮ್ಮ, ಬಯಲಾಟ ಸಾರಥಿ ವಿರಂತಯ್ಯ, ಬಯಲಾಟದ ಮಾಸ್ತರ ಪಂಚಯ್ಯಾ ಸ್ವಾಮಿ, ಬಡಗೆರ ಮಂಡಲಿಕಪ್ಪಾ, ಕುಂಬಾರ ಗುರುಸಿದ್ಧ, ಹಾಸರೆಡ್ಡಿ ಗುಂಡಪ್ಪಾ ಮೊದಲಾದವರು ಕಾಲಗರ್ಭದಲ್ಲಿ ಅಡಗಿ ಹೊಗಿದ್ದಾರೆ. ಇಲ್ಲಿ ಕಬ್ಬು ಬತ್ತ ವಿಶೇಷವಾಗಿ ಬೆಳೆಯುತ್ತದೆ.

ಅಡಿ ಟಿಪ್ಪಣೆಗಳುಃ–

೦೧). ಕಾಶಿನಾಥರಡ್ಡಿ. ಹೆಚ್, ಸಂ. ಹುಮನಾಬಾದ ತಾಲೂಕ ಪರಿಚಯ. – ಪು ೧೦

ಆಧಾರ ಗ್ರಂಥಗಳುಃ–

೦೧. ಹುಮನಾಬಾದ ತಾಲೂಕ ಪರಿಚಯ––– ಸಂ. ಹೆಚ್.ಕಾಶಿನಾಥರೆಡ್ಡಿ.

೦೨. ಹುಮನಾಬಾದ ತಾಲೂಕ ದರ್ಶನ ––– ಸಂ. ಡಾ. ಸೋಮನಾಥ ಯಾಳವಾರ.



ಹಣಕುಣೆಯ ಕೋಟೆ, ಹುಣಕುಣೆ

ಬೋರಂಪಳ್ಳಿ

ಬೋರಂಪಳ್ಳಿ ಗ್ರಾಮ ಒಂದು ಐತಿಹಾಸಿಕ ಸ್ಥಳವಾಗಿದೆ. ಏಕೆಂದರೆ ಇಲ್ಲಿ ೧೦ನೇ ಶತಮಾನದಲ್ಲಿ ನಿರ್ಮಿಸಲ್ಪಟ್ಟ ಸೋಮೇಶ್ವರ ಗುಡಿ ಇದೆ ಆದ್ದರಿಂದ ಇದು ಒಂದು ಐತಿಹಾಸಿಕ ಸ್ಥಳವಾಗಿದೆ. ಈ ಗ್ರಾಮ ತಾಲ್ಲೂಕ ಕೇಂದ್ರದಿಂದ ಸುಮಾರು ೧೫ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿರುವ ಸೋಮೇಶ್ವರ ದೇವಾಲಯ ಅತ್ಯಂತ ಪ್ರಚೀನವಾದುದು ಇಂದು ಅದು ಹಾಳಾಗಿ ಹೋಗಿದೆ. ಆದರೆ ಗುಡಿಯಲ್ಲಿ ಚಿಕ್ಕ ಚಿತ್ರಗಳುಳ್ಳ ಎರಡು ದುಂಡಾದ ಚಿಕ್ಕ ಅರ್ಧಗಂಬಗಳಿವೆ. ಅದರ ಮುಂಭಾಗದಲ್ಲಿ ಕೆಳಗೆ ಮತ್ತು ಮೇಲೆ ಎರಡು ಗೂಡುಗಳಿವೆ. ಆ ಗೂಡಿನಲ್ಲಿ ಕುಳಿತ ಪದ್ಮನಿಧಿಯಿರುವನು. ಮೇಲೆ ಪ್ರಲಂಬಾಸದಲ್ಲಿ ಕುಳಿತ ದಂಪತಿ–ಸೇವಕ (?)ಕನ್ನು ಚಿತ್ರಿಸಲಾಗಿದೆ. ಇದಲ್ಲದೆ ಈ ಸ್ಥಳದಲ್ಲಿ ಶಿಥಿಲಗೊಂಡ ಒಂದು ಪಾರ್ಶ್ವನಾಥ ಶಿಲ್ಪವಿದೆ. ಇದಲ್ಲದೆ ಈ ಶಿಲ್ಪದಲ್ಲಿ ಮುಖ, ಕೈಗಳು, ಹೊಟ್ಟೆ ಕೆಳಗಿನ ಭಾಗ ಮುರಿದು ಹೋಗಿವೆ. ಉಳಿದ ಭಾಗದಲ್ಲಿ ಪಾರ್ಶ್ವನಾಥನ ಒಡೆದ ಮುಖ ಸ್ವಲ್ಪ ದೇಹದ ಮತ್ತು ಎಡಗೈ ಭಾಗ ತಲೆಯ ಮೇಲೆ ಒಡೆದ ಏಳು ಹೆಡೆನಾಗ ಎಡಕ್ಕೆ ಅರ್ಧಗಂಬದ ಮೇಲೆ ನಿಂತ ಸೇವಕ (ಒಡೆದ ಭಾಗ) ಚಿತ್ರಗಳನ್ನು ಕಾಣಬಹುದು.

ಆಧಾರಗ್ರಂಥಗಳು:–

೧ ಬೀದರ ಜಿಲ್ಲೆಯ ದೇವಿಶಿಲ್ಪಗಳು -- ಆರ್. ಎಮ್. ಪಡಕ್ಷರಯ್ಯ.

೨ ಬೀದರ ಜಿಲ್ಲೆಯ ದರ್ಶನ – ಸಂ.ಡಾ. ಸೋಮನಾಥ ಯಾಳವಾರ
ಡಾ. ಪ್ರೇಮಾ ಸಿರ್ಶೆ.



ಬೋರಂಪಳ್ಳಿಯಲ್ಲಿನ ಪಾರ್ಶ್ವನಾಥರ ಮೂರ್ತಿ ಶಿಲ್ಪ





ಬೋರಂಪಳ್ಳಿಯಲ್ಲಿನ ಪುರಾತನ ಮೂರ್ತಿ



ಹಳ್ಳಿಖೇಡ (ಕೆ)

ಹಳ್ಳಿಖೇಡ (ಕೆ) ಹುಮನಾಬಾದದ ತಲೂಕಿನಲ್ಲಿ ಬರುವ ಒಂದು ಪ್ರಮುಖ ಗ್ರಾಮವಾಗಿದೆ. ಇದು ಹುಮನಾಬಾದದಿಂದ ಗುಲ್ಬರ್ಗಾಕ್ಕೆ ಹೋಗುವ ಹೆದ್ದಾರಿಯಲ್ಲಿದೆ. ಇದು ಹುಮನಾಬಾದದಿಂದ ಸುಮಾರು ೧೫ ಕಿ,ಮೀ ದೂರದಲ್ಲಿದೆ. ಹಾಗೇಯೇ ಇದು ಹುಮನಾಬಾನ ಕೊನೆಯ ಗ್ರಾಮ ಈ ಗ್ರಾಮ ಒಂದು ಸುಂದರ ಗ್ರಾಮವಾಗಿದೆ. ಹಾಗೂ ಒಂದು ಐತಿಹಾಸಿಕ ಸ್ಥಳವಾಗಿದೆ. ಹಾಗೂ ಧಾರ್ಮಿಕ ಕೇಂದ್ರವಾಗಿದೆ.

ಏಕೆಂದರೆ ಹಳ್ಳಿಖೇಡ (ಕೆ)ನಲ್ಲಿ ಬಸವಣ್ಣನವರ ಸಮಕಾಲೀನ ಶರಣರಾದ ಕಿನ್ನರಿ ಭೋಮ್ಮಯ್ಯನವರ ದೇವಸ್ಥಾನವಿದೆ. ಬಸವಯುಗದ ಐತಿಹಾಸಿಕ ಶರಣರ ಸ್ಥಳಗಳಲ್ಲಿ ಇದು ಸಹ ಒಂದಾಗಿದೆ. ೧೨ನೇ ಶತಮಾನದ ಕಲ್ಯಾಣದ ಮಹಾದ್ವಾರವೆಂದು ಹೆಸರಾದುದ್ದು. ಈ ಹಳ್ಳಿಖೇಡ (ಕೆ) ಗ್ರಾಮು.

ಈ ಗ್ರಾಮದಲ್ಲಿ ಕಿನ್ನರಿ ಬೋಮ್ಮಯ್ಯನವರ ದೇವಸ್ಥಾನ ಏಕೆ ನಿರ್ಮಿಸಲಾಗಿದೆ. ಎಂದರೆ, ಉಡ ತಡಿಯಿಂದ ಅಕ್ಕ ಮಹಾದೇವಿಯ ಕಲ್ಯಾಣಕ್ಕೆ ಬರುವಾಗ ಅನುಭವ ಮಂಟಪದ ಅಧ್ಯಕ್ಷರಾದ ಅಲ್ಲಮ್ಮ ಪ್ರಭುಗಳ ಆದೇಶದ ಮೇರೆಗೆ ಕಿನ್ನರಿ ಬೋಮ್ಮಯ್ಯ ಇದೆ ಸ್ಥಳದಲ್ಲಿ ಅಕ್ಕಾ ಮಹಾದೇವಿಯವರಿಗೆ ಎದುರಾಗಿ ನಿಂತು ಪರೀಕ್ಷಿಸಿದ್ದಾನೆ. ಈ ಪರೀಯನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದಾಗಿದೆ.

ಕಾಯದಲ್ಲಿ ಕಳವಳವಿರಲು ಪ್ರಾಣದಲಿ ಮಾಯೆ ಇರಲು
ಎತರ ಮನೆ, ಇದೇತರ ನಿರ್ವಾಣ?
ಮಹಾಲಿಂಗ ತ್ರಿಪುರಾಂತಕ ನಿನ್ನ ಸಂಸಾರಿ ಎಂಬನಲ್ಲದೆ
ಸಜ್ಜನಯೆಂದು, ಕೈ ವಿಡಿದವನಲ್ಲಿ ಕೇಳಾ ಮರುಳೆ. – ೧

ಎಂದು ಪ್ರೇತಿ ಇದೆ. ಹಾಗು ಅಕ್ಕ ಮಹಾದೇವಿಯ ಪರೀಕ್ಷೆಯ ನಂತರ ಕೆಲವು ದಿನಗಳ ಕಾಲ ಇಲ್ಲಿನ ರಮಣೀಯ ಪರಿಸರ ನೋಡಿ ಕಿನ್ನರಿ ಬೋಮ್ಮಯ್ಯ ಇಲ್ಲಿ ಇದ್ದು ನಂತರ ಕಲ್ಯಾಣಕ್ಕೆ ಹೋದರು ಎಂದು ಗ್ರಾಮದ ಜನತೆ ಹೇಳುತ್ತಾರೆ ಶರಣ ಕಿನ್ನರಿ ಬೋಮ್ಮಯ್ಯನು ಇಲ್ಲಿದ್ದ ಸ್ಮರಣಾರ್ಥವಾಗಿ ಹಳ್ಳಿಖೇಡ (ಕೆ) ಗ್ರಾಮದ ಎತ್ತರದ ಗುಡ್ಡದ ಆಶ್ರಯದ ಪ್ರದೇಶದಲ್ಲಿ ಈ ಶರಣರ ಹೆಸರಿನಲ್ಲಿ ವಿಶಾಲವಾದ, ಸುಂದರವಾದ ದೇವಾಲಯ ನಿರ್ಮಿಸಲಾಗಿದೆ. ಇದು ಕರ್ನಾಟಕದ ಯಾವುದೇ ಮೂಲೆಯಿಂದ ಕಲ್ಯಾಣಕೆ ಬರುವಾಗ ದಾರಿಯಲ್ಲಿಯೇ ಸಿಗುವ ಸ್ಥಾನವಾಗಿದ್ದು. ಸುಂದರವಾಗಿದೆ. ಇದು ಶರಣ ಕಿನ್ನರಿ ಬೊಮ್ಮಯ್ಯನನ್ನು ನೆಸಪಿಸುತ್ತದೆ.

ಕಿನ್ನರಿಯ ಬೊಮ್ಮಯ್ಯ ಬಾರಿಸಲು
ಕುನ್ನಿ ಹಸು ಮರೆತು ಕಿವಿಗೊಟ್ಟು ಕಲ್ಯಾಣ
ಚೆನ್ನಾತು ಲೋಕ ಚಲುವಾತು. [-೨]

ಕಲ್ಯಾಣದ ತ್ರಿಪುರಾಂತಕೇಶ್ವರ ದೇವಾಲಯದಿಂದ ಕಿನ್ನರಿಯ ಸ್ವರ ತೆರೆತೆರೆಯಾಗಿ ಹರಿದು ಬರುತ್ತಲಿದೆ. ಅದರೊಡನೆ ಈ ಉದಾರ ವಾಣಿಯೂ ಬಯಲು ಬರೆತು ಬಾವನ್ನದ ನರಗುಂಪಿನಂತೆ ಬೆರೆತು ಬರುತ್ತಲಿದೆ.

ನಿನ್ನ ಹರೆಯದ ರೊಹಿನ ನುಡಿಯ ಚಾಗಿನ ಚೆಲುವಿನ ಸಿರಿಯ
ಸಂತೋಷದ ಕರಿ ತುರಗ ರಥ ಪದಾತಿಯ ನೆರವಿಯ
ಸತಿ–ಸಂತರ ಬಂಧುಗಳ ಸಮೂಹದ
ನಿನ್ನ ಕಾಲದಭಿಮಾನದ ಗರ್ವವ ಬಿಡಿ ಮರುಳಾಗದಿರು
ಅಕಟಕಟಾ ರೋಮಜನಿಂದ ಹಿರಿಯನೆ
ಮದನದಿಂದ ಚಲುವನೆ ಸುರಪತಿಯಿಂದ ಸಂಪನ್ನನೆ
ವಾಮದೇವ ವಶಿಷ್ಠರಿಂದ ಕುಲಜನೆ
ಅಂತಕನ ದೂತರು ಬಂದು ಕೈವಿಡಿದೆಳೆದೊಯ್ಯುವಾಗ ನಾಡಿಗೆಡೆಯಿಲ್ಲ
ಕೇಳೋ ನರನೆ ಎನ್ನ ಮಹಾಲಿಂಗ ತ್ರಿಪುರಾಂತಕ ದೇವರ ಪೂಜಿಸಿಯಾದರೆ
ಕೇಡಿಲ್ಲದ ಪದ ದೊರಕೊಂಬುದು ಮರುಳೆ. [-೩]

ಇದೊಂದು ಅಕ್ಕ ಸಾಲಿಗನ ಸ್ವರವೆಂದರೆ ನಂಬಲಾಗುವುದೇ? ಸೋಜಿಗವೆನಿಸಿದರೂ ಸತ್ಯ, ಶರಣರ ಚರಿತ್ರೆ ಗುರು– ಲಿಂಗ– ಜಂಗಮವಲ್ಲದೆ ಅನ್ಯವನ್ನರಿಯದ ಶರಣ ಕಿನ್ನರಿ ಬೋಮ್ಮಯ್ಯ ಇವನು ಮೂಲತಃ ಆಂದ್ರ ಪ್ರದೇಶದ 'ಪುತ್ತುರು' (ಪೊಡೂರು) ಎಂಬ ಗ್ರಾಮಕ್ಕೆ ಸೇರಿದವನು. [-೪] ಕಲಿದೇವಿ ಎಂಬ ಭಕ್ತೆಯ ಪುತ್ರನಾಗಿ ಜನಿಸಿದ ಕಿನ್ನರಯ್ಯ ಅಕ್ಕ ಸಾಲಿಗ ಕಾಯಕ ಕೈಗೊಂಡಿದ ಒಮ್ಮೆ ತಾನು ಮಾಡಿದ ಗುರುವಿನ ಆಭರಣದಲ್ಲಿ ತೂಕ ಕಡಿಮೆಯಾಗಲು ಬೆದರಗೊಂಡು, ಆ ಕಾಯಕ ತ್ಯಾಜಿಸಿ ಕಿನ್ನರಿಯನ್ನು ಹಿಡಿಯುತ್ತಾನೆ. ಬ್ರಹ್ಮಯ ಕಿನ್ನರಿಯನ್ನು ಬಾರಿಸಲು ಪರಬ್ರಹ್ಮ ಮೆಚ್ಚಿ, ಒಂದು ಹೊನ್ನ ಮನೊಂದು ಹಣಮುಮನೊಂದು ಹಾಗವರು ದಿನಕೊಮ್ಮೆ ಕೋಡ ತೊಡಗುತ್ತಾನೆ. ಅಷ್ಟರಲ್ಲಿ,

ಬಸವ ಸದೃಶ ಭಕ್ತಿ ಭಾವನೆ
ವಸಾಧೇಯೊಳು ನರೆತೀವಿ ಪಸರಿಸಿ
ದೆಸೆದೆಸೆಗಳು ಮುಸುಕ [-೫]

ಆ ಧರ್ಮ ಸ್ವರೂಪವನ್ನು ಕಾಣಲು ಕಿನ್ನರಿ ಬೋಮ್ಮಯ್ಯ ಕಲ್ಯಾಣಕ್ಕೆ ಬರುತ್ತಾನೆ, ಬಸವಣ್ಣನ ಆಪ್ತ ವರ್ಗದಲ್ಲಿ ಸಹಾಯಕನಾಗಿ ಸೇರುತ್ತಾನೆ. ಉಳಿದ ಶರಣರ ಕಾಯಕ ನೋಡಿ ತಾನು ಕಲ್ಯಾಣದ ತ್ರಿಪುರಾಂತಕೇಶ್ವರನ ಮುಂದೆನಿಂತು ಕಿನ್ನರಿ ನುಡಿಸುವ ಕಾಯಕವನ್ನು ಸ್ವೀಕರಿಸುತ್ತಾನೆ. ಮೇಲೆ ಹೇಳಿರುವಂತೆ ಕಿನ್ನರಿ ಬೋಮ್ಮಯ್ಯ ಕಿನ್ನರಿಯನ್ನು ಅದೇಷ್ಟು ಸುಶ್ರಾವ್ಯವಾಗಿ ನಡಿಸುತ್ತಿದ್ದನೆಂದರೆ, ಅದನ್ನು ಕೇಳಿದ ಕಲ್ಯಾಣದ ತ್ರಿಪುರಾಂತಕೇಶ್ವರ ನಿತ್ಯ ಒಂದು ಬಂಗಾರದ ನಾಣ್ಯ ಕೊಡುತ್ತಿದ್ದನು ಇದೆ. ಅವನ ಕಾಯಕವಾಯಿತು. ಇದರಿಂದ ಬಂದ ಆದಾಯದಿಂದ ಜಂಗಮ ದಾಸೋಹ ನಡೆಸುತ್ತಿದ್ದನು, ಇದರಿಂದಾಗಿ ಆತನಿಗೆ "ಕಿನ್ನರಿ ಬ್ರಹ್ಮಯ್ಯ" ಎಂಬ ಹೆಸರು ಬಂದಿತು.

ಕಲ್ಯಾಣದ 'ತ್ರಿಪುರಾಂತಕೇಶ್ವರ' ನನ್ನೇ ತನ್ನ ವಚನಗಳ ಅಂಕಿತವನ್ನಾಗಿ ಮಾಡಿಕೊಂಡು ಕಿನ್ನರಿ ಬೊಮ್ಮಯ್ಯ ಅನೇಕ ವಚನಗಳನ್ನು ರಚಿಸಿದ್ದಾನೆ ಆದರೆ ಆತನ ೧೮ ವಚನಗಳು ಮಾತ್ರ ಉಪಲಬ್ಧವಾಗಿವೆ. ವಚನಗಳು ವಿಚಾರಪೂರಿತವಾಗಿದ್ದು ನೇರತೆ ಹಾಗೂ ಸ್ಪಷ್ಟತೆ ಅವುಗಳ ಗುಣ ಎನ್ನಬುಹುದು. ಹರಿಹರನು ಹೇಳುವ 'ಉಳಿಯ ಪ್ರಸಂಗ' ತುಂಬಾ ಜನಜನಿತವಾದ ಕಥೇ. ಶರಣನ ಅರೋಗಣೆಯ ರೀತಿಯನ್ನು ತಿಳಿಸುತ್ತದೆ. " ಉಳ್ಳಗಡ್ಡಿ" ಮಹತ್ವವನ್ನು ಎಲ್ಲಾ ಕಡೆಗೆ ಸಾರಿದ ಶರಣ, ಬಸವಣ್ಣನ ಅನುರಾಗ ಹೆಚ್ಚಸಿದ ಅನುಭಾವಿ.

ಉಡುತಡಿಯಿಂದ ಶರಣರ ಸುಕೀರ್ತಿ ಕೇಳಿ ಕಲ್ಯಾಣಕ್ಕೆ ಬರುತ್ತಿದ್ದ ಅಕ್ಕ ಮಹಾದೇವಿಯನ್ನು ತೀವ್ರತರವಾಗಿ ಪರೀಕ್ಷೆಗೊಳಪಡಿಸಿದ ಮೊದಲಿಗೆ ಇತ ಆಕೆಯನ್ನು ತೀವ್ರತರವಾದ ವೈರಾಗ್ಯ ಕಂಡು ಪಶ್ವಾತಾಪ ಪಟ್ಟುಕೊಳ್ಳುತ್ತಾನೆ.

ಶರಣು ಶರಣಾರ್ಥಿ ಎಮ್ಮವ್ವ ಶರಣು ಶರಣಾರ್ಥಿಯು ಮೂರ್ತಳೆ ಶರಣು ಶರಣಾರ್ಥಿ

ಎನ್ನಕ್ಕ ಮಹಾದೇವಿ ಮಹಾಲಿಂಗ ತ್ರಿಪುರಾಂತಕ ನೋಡಿದ ತೊಡಕ
ನೀವು ಬಿಡಿಸಿದರಾಗೆ ನಿಮ್ಮಿಂದ ನಾನು ಬದುಕಿದೆನು
ಎಲೆ ತಾಯೆ ಶರಣು ಶರಣಾರ್ಥಿ –೭

ಎಂದು ತನ್ನ ಧನ್ಯತೆಯನ್ನು ವಚನವಾಗಿ ಹರಿಸುತ್ತಾನೆ. ಇದು ಆತನ ಮನೋಧರ್ಮಕ್ಕೆ ಹಿಡಿದ ಕೈಗನ್ನಡಿಯಂತಿದೆ. ಅದೇ ರೀತಿ ಮರುಳು ಶಂಕರ ದೇವರ ಗುಪ್ತ ಭಕ್ತಿಯನ್ನು ಕಂಡು ಈ ರೀತಿ ಹೇಳುತ್ತಾರೆ.

ಆಕಾರವೆಂಬನೆ ನಿರಾಕಾರವಾಗಿದೆ!
ನಿರಾಕಾರವೆಂಬನೆ ಅತ್ತಿತ್ತ ತೋರುತ್ತದೆ
ತನ್ನನಳಿದು ನಿಜ ಉಳಿದ ಮಹಾಲಿಂಗ ತ್ರಿಪುರಾಂತಕನ ನಿಲವು ಕಂಡು

ಬಳಕೊಂಡು ಮರುಳು ಶಂಕರದೇವ ಮೂರ್ತಿಯ ನಿನ್ನಂದ ಕಂಡು

ಬದುಕಿದನು ಕಾಣಾ ಸಂಗನ ಬಸವಣ್ಣ – ೮

ಎಂದು ಕೊಂಡಾಡುತ್ತಾನೆ.

ಕಲ್ಯಾಣದಲ್ಲಿ ನಡೆದ ಕ್ರಾಂತಿಯಲ್ಲಿ ಬಿಜ್ಜಳನ ಕೊಲೆಯಾದ ಮೇಲೆ ಶಿವಶರಣರೆಲ್ಲಾ ಚದುರಿ ಹೋಗುತ್ತಾರೆ, ಚೆನ್ನಬಸವಣ್ಣನು ಉಳಿವಿಗೆ ಹೋಗುವ ಮೊದಲು ಕಿನ್ನರಯ್ಯನಿಗೆ ಶರಣ ದಂಡಿನ ಆಧಿಪತ್ಯವನ್ನು ವಹಿಸಿ ಕೊಡುತ್ತಾರೆ. ಶರಣ ರಕ್ಷಣೆ ಹಾಗೂ ವಚನಗಳ ರಕ್ಷಣೆಗೊಸ್ಕರ ಉಳವಿಯ ಮಹಾಮನೆಯ (ಎದುರಿನ) ಮುಂದಿನ ನದಿಯನ್ನು ಒಂದು ಗವಿಗೆ ತಿರುಗಿಸಿ ಶತ್ರು ಸೇನೆಯ ಬಹುಭಾಗವನ್ನು ನಾಶ ಗೊಳಿಸುತ್ತಾನೆ, ಈತ ತಿರುಗಿಸಿದ ಆ ನದಿಗೆ ಈಗಲೂ "ಕಿನ್ನರಿ ಬ್ರಹ್ಮಯ್ಯನ ಹೊಳೆ" ಎಂದು ಕರೆಯುತ್ತಾರೆ. ನಂತರ ಅಲ್ಲಿಯೇ ಆತನು ಲಿಂಗೈಕ್ಯನಾಗುತ್ತಾನೆ. ಉಳಿವಿಯ ಮಹಾಮನೆಯ ಸಮೀಪದಲ್ಲಿಯೇ ಒಂದು ಸಮಾಧಿಯಿದ್ದು ಅದರ ಮೇಲೆ "ಕಿನ್ನರಯ್ಯ" ಎಂಬ ಹೆಸರಿನ ಒಂದು ಶಿಲಾಶಾಸನ ಇರುವುದನ್ನು ಗಮನಿಸಬಹುದು.

ಕಿನ್ನರಯ್ಯನ ಕುರಿತು ಹಲವು ಪವಾಡ ಕತೆಗಳು "ಶರಣಲೀಲಾಮೃತ" ಚನ್ನಬಸವ ಪುರಾಣ ಹಾಗೂ ವೀರಶೈವ ಮಹಾಪುರಾಣಗಳಲ್ಲಿ ದೊರೆಯುತ್ತವೆ. ಬಹಳ ದಿವಸ ಕಲ್ಯಾಣದ ಸಮೀಪದಲ್ಲಿಯೇ ಇದ್ದನು ಆ ಶರಣನ ಸ್ಮಾರಣಾರ್ಥವಾಗಿರುವ ಕಿನ್ನರಿ ಬ್ರಹ್ಮಯ್ಯನ ಗುಡಿ ಇದೆ.

ಪೂರ್ವ ದಿಕ್ಕಿಗೆ ಮುಖವಾಗಿರುವ ಈ ಗುಡಿಯ ಎತ್ತರದ ಭಾಗದಲ್ಲಿದೆ ಸುಮಾರು ಪಾವಟಿಗೆಗಳನ್ನು ಏರಿ ಗರ್ಭಗುಡಿಯನ್ನು ಪ್ರವೇಶಿಸಬೇಕಾಗುತ್ತದೆ. ಗರ್ಭಗುಡಿಯು ವಿಶಾಲವಾಗಿದ್ದು, ಅಲ್ಲ ಶಿವಲಿಂಗವಿದೆ, ಮುಂದೆ ಮಂಟಪದಲ್ಲಿ ನಂದಿಯಿದ್ದು, ಈಗ ಕಲ್ಯಾಣ ಮಂಟಪವನ್ನು ಆಧುನಿಕವಾಗಿ ಗುಡಿಯ ಮುಂಭಾಗದಲ್ಲಿ ರಚಿಸಲಾಗಿದೆ. ದಿನಾಲೂ ಪೂಜೆ ಪುನಸ್ಕಾರಗಳಲು ಇಲ್ಲಿ ವೈಭವದಿಂದ ಜರುಗುತ್ತಿದ್ದು, ವರ್ಷಕೊಮ್ಮೆ ಜಾತ್ರೆಯನ್ನು ಮಾಡುತ್ತಾರೆ. ಶ್ರಾವಣ ಮಾಸ ಹಾಗೂ ಹಬ್ಬ-ಹುಣಿಮೆಗಳಂದು ಪ್ರವಚನ ಕಾರ್ಯಕ್ರಮ, ವಚನಗೊಷ್ಠಿ ಶರಣರ ಚಿಂತನೆಯ ಕಾರ್ಯಕ್ರಮಗಳು ಇಲ್ಲಿ ಜರುಗುತ್ತವೆ. ಈ ಕಿನ್ನರಿ ಬ್ರಹ್ಮಯ್ಯನ ಹೆಸರಿನಲ್ಲಿ ಈ ಊರಲ್ಲಿ ಒಂದು ಶಿಕ್ಷಣ ಸಂಸ್ಥೆಯು ನಡೆಯುತ್ತಿದೆ. ಗುಲಬರ್ಗಾ-ಹುಮನಾಬಾದ ಮಧ್ಯದಲ್ಲಿರುವ ಈ ಸ್ಥಾನ ಒಂದು ಪ್ರೇಕ್ಷಣೀಯ ಸ್ಥಳವಾಗಲು ಅಲ್ಲೊಂದು ಬೃಹತ್ ಶಿವನ ಮೂರ್ತಿಯನ್ನು ನಿರ್ಮಿಸಲಾಗಿದೆ. ಹಿಂದೆ ಕಿನ್ನರಿ ಬೊಮ್ಮಯ್ಯನ ಮೂರು ಶಿಲಾಮೂರ್ತಿಗಳಿವೆ.

ಅಡಿ ಟಿಪ್ಪಣೆಗಳು :-

೧. ಜತ್ತಿ.ಬಿ.ಡಿ, ಬಸವೇಶ್ವರರ ಸಮಕಾಲೀನರು ಪು.೩೬೩

೨. ಸೋಮನಾಥ ಯಾಳವಾರ, ಬೀದರ ಜಿಲ್ಲೆಯ ಶರಣ ಸ್ಮಾರಕಗಳು ಪು. ೫೮.

೩. ಜತ್ತಿ.ಬಿ.ಡಿ, ಬಸವೇಶ್ವರರ ಸಮಕಾಲೀನವರು. ಪಿ. ೩೫೭.

೪. ಪೂರ್ವೋಕ್ತ, ಪು. ೫೭.

೫. ಜತ್ತಿ.ಬಿ.ಡಿ, ಬಸವೇಶ್ವರರ ಸಮಕಾಲೀನರು, ಪು. ೩೫೮

೬. ಸೋಮನಾಥ ಯಾಳವಾರ, ಬೀದರ ಜಿಲ್ಲೆಯ ಶರಣ ಸ್ಮಾರಕಗಳು ಪು. ೫೮

೭. ಪೂರ್ವೋಕ್ತ, ಪು. ೩೬೩.

೮. ಅದೇ, ಪು. ೩೬೩.

ಆಧಾರ ಗ್ರಂಥಗಳು:-

೧. ಬಸವಣ್ಣನವರು ಸಮಕಾಲೀನರು. – ಬಿ.ಡಿ.ಜತ್ತಿ

೨. ಬೀದರ ಜಿಲ್ಲೆಯ ಶರಣ ಸ್ಮಾರಕಗಳು, – ಡಾ॥ ಸೋಮನಾಥ ಯಳವಾರ

೩. ಹುಮನಾಬಾದ ತಾಲೂಕಾ ಪರಿಚಯ – ಹೆಚ್. ಕಾಶಿನಾಥ ರಡ್ಡಿ .

೪. ಬೀದರ ಜಿಲ್ಲಾ ದರ್ಶನ – ಡಾ॥ ಜಗನ್ನಾಥ ಹೆಬ್ಬಾಳೆ.



ಕಿನ್ನರಿ ಬಮ್ಮಯ್ಯನ ದೇವಸ್ಥಾನ (ಹಳ್ಳಿಖೇಡ (ಕೆ))



ಕಿನ್ನರಿ ಬಮ್ಮಯ್ಯನ ದೇವಸ್ಥಾನದ ಒಳನೋಟ





ಜಲಸಂಗಿ

ಜಲಸಂಗಿ ಗ್ರಾಮವು ಹುಮನಾಬಾದ ಪಟ್ಟಣದ ಒಂದು ಪ್ರಮುಖ ಪ್ರಾಚೀನ ಗ್ರಾಮ ಮತ್ತು ಒಂದು ಐತಿಹಾಸಿಕ ಸ್ಥಳ. ಈ ಜಲಸಂಗಿಯು ತಾಲೂಕಿನಿಂದ ೧೦ ಕಿ.ಮೀ. ದೂರಲ್ಲಿದೆ. ಈ ಜಲಸಂಗಿಯಲ್ಲಿ ಕಲ್ಯಾಣ ಚಾಲುಕ್ಯರ ಪ್ರಸಿದ್ಧ ದೊರೆ ೦೬ನೇ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಿಸಲಾಗಿರುವ ಈಶ್ವರ ದೇವಾಲಯ ಹಾಗೂ ಈ ಕಾಲಕ್ಕೆ ಸಂಬಂಧಿಸಿದ ಶಾಸನವೊಂದನ್ನು ಕಾಣಬಹುದು. ಪಾಂಡವರು ತಮ್ಮ ವನವಾಸದ ದಿನಗಳಲ್ಲಿ ಗುಪ್ತವಾಗಿ ವಿರಾಟ ರಾಜನ ಆಶ್ರಯಲ್ಲಿದ್ದರು. ಆ ವಿರಾಟ ರಾಜನ ರಾಜಧಾನಿಯೇ ಈ ಜಲಸಂಗಿಯೇಂದು ಒಂದು ಸ್ಥಳೀಯ ಪ್ರತೀತಿಯುಂಟು –[೧]

ಗ್ರಾಮದ ಕೆರೆಯ ದಂಡೆಯ ಮೇಲೆ ಪೂರ್ವಾಭಿಮುಖವಾಗಿ ಕಂಗೊಳಿಸುವ ಈ ಕೈಲೇಶ್ವರ ದೇವಾಲಯ ವಾಸ್ತು ಶಿಲ್ಪಕ್ಕೆ ಚಾಲುಕ್ಯರು ನೀಡಿದ ಶ್ರೇಷ್ಠ ಕೊಡುಗೆಯಾಗಿದೆ. ಸುಮಾರು 3ಅಡಿ ಎತ್ತರದ ವೇದಿಕೆಯ ಮೇಲೆ ನಿಂತಿರುವ ಈ ಗುಡಿಯ ಗರ್ಭಗುಡಿ ನವರಂಗ ಮತ್ತು ಕೈಸಾಲೆಗಳನ್ನು ಹೊಂದಿದೆ. ನವರಂಗದ ಛಾವಣಿಯ ಕೆಲವು ಭಾಗಗಳು ಬಿದ್ದು ಹೋಗಿದ್ದು ಈಗ ಕೈಸಾಲೆ ಕಾಣುವುದಿಲ್ಲ. ಗರ್ಭಗುಡಿಯ ಗೋಡೆಯ ಹೊರಭಾಗದಲ್ಲಿ ಹಲವಾರು ಮದನಿಕಾ ಸ್ತ್ರೀಯರ ಮೂರ್ತಿಗಳನ್ನು ಅತ್ಯಂತ ಸುಂದರವಾಗಿ ಕೆತ್ತಲಾಗಿದೆ. ವಿಕ್ರಮಾದಿತ್ಯನ ಹೆಸರನ್ನು ಬರೆಯುತ್ತಿರುವ ಶಿಲಾಬಾಲಕೆಯೋರ್ವಳ ಭಂಗಿ ತುಂಬಾ ಸುಂದರವಾಗಿದೆ. ಕೆತ್ತನೆಗಳಲ್ಲಿ
ತ್ರೀಮೂರ್ತಿಗಳ ಸ್ವರೂಪ ಐರಾಹಾವತಾರ ಮದನ ಮನೋಹರಿ ವಿಗ್ರಹ ದರ್ಪಣ ಸುಂದರಿಯ ಶಿಲ್ಪ, ನಾಟ್ಯಗಣಪನ, ನಾಗನೃತ್ಯ ಮಯೂರಿ, ನರಸಿಂಹ, ಏತಾರ ಮತ್ತು ತಾಯಿ ಮಗುವಿನ ಶಿಲ್ಪ ಕಲಾಕೃತಿಗಳು ತುಂಬಾ ಆಕರ್ಷಕವಾಗಿವೆ.

ಜಲಸಂಗಿಯ ಕಲೇಶ್ವರ ದೇವಾಲಯ ಅತ್ಯಂತ ಪ್ರಸಿದ್ಧವಾದುದ್ದು. ಮಂದಿರ ಸಣ್ಣದಾದರು ಅದರಲ್ಲಿರಳಿದ ಕಲೆ ದೊಡ್ಡದು ಕಲಾಶಿಲ್ಪಿಯ ಕಲಾನೈಪುಣ್ಯವನ್ನು ಎತ್ತಿ ಹೇಳುತ್ತದೆ. ವೀರಭದ್ರ ನೃತ್ಯಾಗಣಪತಿ ದಕ್ಷಿಣ ಮೂಲ ಮೂರ್ತಿ ಮತ್ತು ದುರ್ಗಿ ಇವು ಸುಂದರವಾಗಿ ಕೆತ್ತಲ್ಪಟ್ಟಿವೆ. ಚಾಲುಕ್ಯರು ಅಳಿದು ಹೋಗಿದ್ದರೂ ಇಂದಿಗೂ ಅವರ ನೆನಪು ಆ ಕಲಾ ಮೂರ್ತಿಗಳನ್ನು ನೋಡಿದಾಗ ಕಂಗೊಳಿಸುತ್ತದೆ. ಶಾಸನ ಬರೆಯುತ್ತಿರುವ ಶಿಲಾಬಾಲಕೆಯ ಚಿತ್ರ ಕಣ್ಣಿಗೆ ಕಟ್ಟುವಂತ್ತಿದೆ. ಆ ಶಾಸನ ಇಂತಿದೆ.

ಸಪ್ತ ದೀಪೋದಲ್ಲಿ ಭೂತಂ ಭೂತಲಾಸ್ವಿಕರಿಷ್ಯತಿ
ಚಲುಕ್ಯೋ ವಿಕ್ರಮಾದಿತ್ಯ ಸಸ್ತಮೋ ವಿಷ್ಣುವರ್ಧನ ! –[೨]

ಎಂದು ಸಂಸ್ಕೃತ ಭಾಷೆಯಲ್ಲಿ ಶಾಸನ ಬರೆಯಲ್ಪಟ್ಟಿದೆ. ಇದರ ಅರ್ಥ ಹೀಗಿದೆ–"ಚಾಲುಕ್ಯ ವಂಶದ ವಿಕ್ರಮಾದಿತ್ಯನೆಂಬ ರಾಜನು ಏಳು ದ್ವೀಪಗಳಿಂದ ಸಮಾವೇಶಗೊಂಡ ಭೂಮಿಯನ್ನು ತನ್ನದಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದನೆಂದು ಇದರರ್ಥವಾಗಿದೆ.

ಇಲ್ಲಿ ಇನ್ನು ಅನೇಕ ಅಳಿದು ದುಳಿದು ಐತಿಹಾಸಿಕ ಕಟ್ಟಡಗಳು ನೋಡಲು ಸಿಗುತ್ತವೆ.

ಅಡಿ ಟಿಪ್ಪಣಿಗಳುಃ–

೧). ಕಾಶಿನಾಥರೆಡ್ಡಿ. ಹೆಚ್, ಸಂ. ಹುಮನಾಬಾದ ತಾಲೂಕ ಪರಿಚಯ, ಪು೮

೨). ಅದೇ, ಪು. ೯

ಆಧಾರಗ್ರಂಥಗಳುಃ–

೧). ಬೀದರ ಜಿಲ್ಲಾ ದರ್ಶನ – ಸಂ. ಡಾ.ಜಗನಾಥರೆಡ್ಡಿ.

೨). ಹುಮನಾಬಾದ ತಾಲೂಕ ಪರಿಚಯ – ಸಂ. ಹೆಚ್.ಕಾಶಿನಾಥರೆಡ್ಡಿ.

೩). ಸಮಗ್ರ ಭಾರತದ ಇತಿಹಾಸ – ಡಾ.ಕೆ.ಸದಾಶಿವ.

೪). ಸಮಗ್ರ ಕರ್ನಾಟಕ ಇತಿಹಾಸ – ಫಾಲಾಕ್ಷ.



ಕಲ್ಲೇಶ್ವರ ದೇವಾಲಯ ಜಲಸಂಗಿ



ಜಲಸಂಗಿಯ ಶಿವದೇವಾಲಯದ







ಶಾಸನ ಬರೆಯುತ್ತಿರುವ ಶಿಲಾಬಾಲಿಕೆ



ಹಳ್ಳಿಖೇಡ (ಬಿ)

ಹುಮಾನಾಬಾದ ತಾಲೂಕಿನಲ್ಲಿ ಬರುವ ಐತಿಹಾಸಿಕ ಸ್ಥಳಗಳಲ್ಲಿ ಹಳ್ಳಿಖೇಡ (ಬಿ) ಗ್ರಾಮವು ಸಹ ಒಂದಾಗಿದೆ. ಇದು ಬೀದರ ಮತ್ತು ಶ್ರೀರಂಗ ಪಟ್ಟಣದ ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಬರುತ್ತದೆ. ತಾಲೂಕ ಕೇಂದ್ರದಿಂದ ಸುಮಾರು 20 ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಕಾರಂಜಾ ನದಿಯ ತೀರದಲ್ಲಿದೆ. ಆದ್ದರಿಂದ ಇದು ಮಾನವನ ಅತೀ ಪ್ರಾಚೀನ ವಸತಿಯ ಮೂಲ ನೆಲೆಯೆಂದು ಗುರುತಿಸಲಾಗಿದೆ. ಏಕೆಂದರೆ ಇತಿಹಾಸವನ್ನು ನೋಡಿದಾಗ ನದಿಗಳ ತೀರದಲ್ಲಿಯೇ ನಾಗರಿಕತೆಗಳು ಬೆಳೆದು ಬಂದವೆಂದು ಸಂಶೋಧನೆಗಳಿಂದ ಖಚಿತ ಪಟ್ಟಿವೆ, ಅದೇರೀತಿ ನಾರಂಜಾ ನದಿಯತೀರದಲ್ಲಿ ಈ ಗ್ರಾಮ ಹುಟ್ಟಿಕೊಂಡಿತ್ತು.

ಮಾಂಜ್ರಾ ಮತ್ತು ಕಾರಂಜಾ ನದಿಯ ತೀರದಲ್ಲಿ ಬರುವ ಮರಕುಂದ, ಖೇಣಿ ರಂಜೋಳ, ಬಗ್ದಲ್, ಚಳಕಾಪೂರ, ನಮದಾಪೂರವಾಡಿ, ಹಳ್ಳಿಖೇಡ(ಬಿ), ಮುಂತಾರ ಗ್ರಾಮಗಳಲ್ಲಿ ಶಿಲಾಯುಗ, ನವ ಶಿಲಾಯುಗದ ಜನ ವಸತಿಗಳಾಗಿದ್ದವೆಂದು ಸಂಶೋಧನೆಗಳಿಂದ ಗುರುತಿಸಲಾಗಿದೆ. ಈ ಹಳ್ಳಿಖೇಡ(ಬಿ)ಗ್ರಾಮದ ಸೀಮೆಯಲ್ಲಿರುವ ದೇವಸ್ಥಾನವೇ ಸೀಮೆ ನಾಗಣ್ಣನ ದೇವಸ್ಥನವಾಗಿದೆ. ಈ ಸ್ಥಾನಕ್ಕೆ ಸೀಮೆ ಎಂದು ಹೆಸರು ಬರಲು ಕಾರಣ ಈ ದೇವಾಲಯವು ಮೂರು ಗ್ರಾಮಗಳ ಸೀಮೆಯಲ್ಲಿ ಬರುತ್ತದೆ. ಈ ಪ್ರದೇಶವನ್ನು ಅಟ್ಟಳೆ ನಾಡು ಎಂದು ರಂಜೇರದ ಸಿಂಧರು ವಿಂಗಡಣೆ ಮಾಡಿದ್ದರು. ಈ ಅಟ್ಟಳೆ ನಾಡಿನಲ್ಲಿ ನಮದಾಪೂರವಾಡಿ, ಚಳಕಾಪೂರ, ಹಳ್ಳಿಖೇಡ(ಬಿ) ಈ ಮೂರು ಊರುಗಳನ್ನು ಸೇರಿಸಲಾಗಿದ್ದು, ಈ ಮೂರು ಊರುಗಳ ಪ್ರದೇಶದ ಅಂಚು ಕೂಡಿರುವ ಒಂದು ಭಾಗದಲ್ಲಿ ಈ ದೇವಾಲಯ ಇರುವುದರಿಂದ ಈ ನಾಗ ದೇವನಿಗೆ ಎಲ್ಲಾ ಜನರು ನಮ್ಮೂರಿನ ಸೀಮೆಯಲ್ಲಿಯೇ ಇದ್ದಾನೆಂಬ ರೂಢಿಯಂತೆ ಸೀಮೆ ನಾಗಣ್ಣವೇಂದು ಕರೆಯುತ್ತಾರೆ.

ರಂಜೇರಿನ ಸಿಂಧ ಜನಾಂಗದವರು ಮೂಲತಃ ನಾಗಜನಂಗಕ್ಕೆ ಸೆರಿದವರೇಂದು ಈ ಜನಾಂಗದ ಜನ ಎಲ್ಲೇಲ್ಲಿ ವಾಸವಾಗಿದ್ದಾರೊ ಅಲ್ಲಲ್ಲಿ ಒಂದೊಂದು ನಾಗ ಪ್ರತಿಮೆಯನ್ನು ತಮ್ಮ ನೆಲೆಯ ಸಂಕೇತವಾಗಿ ಆಯಾ ಪ್ರದೇಶದಲ್ಲಿ ಪ್ರತಿಷ್ಠಾಪಿಸದರೆಂದು ಹೆಳಲಾಗುತ್ತದೆ.
ಹಾಗೆಯೇ ಆ ಪ್ರತಿಮೆಗಳಲ್ಲಿ ಈ ಸೀಮೆಯಲ್ಲಿ ಪ್ರತಿಷ್ಠಾಪಿಸಿದ ನಾಗನೇ ಮುಂದೆ ಸೀಮೆ ನಾಗಣ್ಣವೇಂಬ ಹೆಸರಿನೋಂದಿಗೆ ಪ್ರಸಿದ್ಧನಾಗಿದ್ದಾನೆ. ಈ ದೃಷ್ಠಿಯಿಂದ ಈ ನಾಗನ ಪ್ರತಿಷ್ಠಾಪನೆಯ ಇಲ್ಲಿಯ ರಂಜೇರಿ ಸಿಂಧರ ಅರಸರ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಪ್ರತೀತಿಯಿದೆ.

ಜನಪದಲ್ಲಿ ಬೆಳೆದು ಬಂದಿರುವ ಒಂದು ಕಥೆಯ ಪ್ರಕಾರ ಊರಿನ ಹಿರಿಯ ಜನರು ಹೇಳುವ ಪ್ರಕಾರ ಹಿಂದೆ ಆದಿಲಶಾಹಿಗಳ ಕಾಲದಲ್ಲಿ ಬೀದರ ಕೋಟೆ ಕಟ್ಟುವಂಥ ಸಂಧರ್ಭದಲ್ಲಿ ಕೋಟೆ ಕಟ್ಟಲು ಬೀದರ ಜಿಲ್ಲೇಯ ಸುತ್ತ ಮುತ್ತಲೀನ ಹಲವಾರು ಗ್ರಾಮಗಳಿಂದ ಕಲ್ಲು ಮಣ್ಣುಗಳನ್ನು ತೇಗೆದುಕೊಂಡು ಹೊಗಲಾಗುತ್ತಿತ್ತು. ಈ ಸೀಮೆ ನಾಗಣ್ಣ ಒಂದು ಪ್ರಖ್ಯಾತಿ ಪಡೆದ ಕ್ಷೇತ್ರದ ಮುಂದಿನ ರಸ್ತೆಯಿಂದ ಬೀದರಿಗೆ ಹೋಗಲು ದಾರಿಯಿದ್ದರಿಂದ ಮಾರ್ಗದ ಮೂಲಕ ಒಂದು ಸಲ ಕಲ್ಲುಗಳನ್ನು ತೇಗೆದುಕೊಂಡು ಹೊಗುವ ಸಂಧರ್ಭದಲ್ಲಿ ಗಾಡಿಯಿಂದ ಒಂದು ಕಲ್ಲು ಬಿಳುತ್ತದೆ ಅದನ್ನು ಅನೇಕ ದಿನಗಳವರೆಗೆ ಯಾರು ನೋಡುವುದಿಲ್ಲ ಒಂದು ದಿವಸ ಒಬ್ಬ ವ್ಯಕ್ತಿ ಆ ರಸ್ತೆಯ ಕಡೆಯಿಂದ ಹೊಗುವಾಗ ಆತನ ಕಣ್ಣಿಗೆ ಆ ಕಲ್ಲು ಕಾಣುತ್ತದೆ. ಆತ ಕೂತುಹಲದಿಂದ ಅದನ್ನು ನೋಡುತ್ತಾನೆ. ಅದು ಅತ್ಯಂತ ಹೊಳಪಿನಿಂದ ಕೂಡಿತ್ತು. ಆದ್ದರಿಂದ ಅದನ್ನು ಹಾಗೆಯೇ ಎತ್ತರಕ್ಕೆ ಮುಖ ಮಾಡಿ ನಿಲ್ಲಿಸಿದನಂತೆ ಆ ಸಂಧರ್ಭದಲ್ಲಿ ಆ ಹೊಳಪುಳ್ಳ ಕಲ್ಲಿನಲ್ಲಿ ನಾಗಬಿಂಬ ಕಂಡು ಇದು ಬರಿ ಕಲ್ಲಲ್ಲ ನಾಗದೇವನೆಂದು ಅಲ್ಲಿಯೇ ಪ್ರತಿಷ್ಠಾಪಿಸಿದನು. ಅದು ಅಂದಿನಿಂದ ಹಾಗೆಯೇ ಇದೆ. ಇವತ್ತಿಗೂ ಅದನ್ನು ಯಾರು ಮುಟ್ಟಿ ಬೇರೇಡೆಯಿಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅಲ್ಲಿಯೇ ಭಕ್ತಾಧಿಗಳು ದೇವಾಲಯವನ್ನು ನಿರ್ಮಿಸಿದರೆಂದು ಜನಪದಿಯ ಕಥೆಯಿಂದ ತಿಳಿದು ಬರುತ್ತದೆ.

ಇತ್ತಿಚೀನ ದಿನಗಳಲ್ಲಿ ಸಂಗಪ್ಪಾ ಮಾಲಿಪಾಟಿಲ್ ಅವರ ನೆತೃತ್ವದಲ್ಲಿ ದೇವಾಲಯವನ್ನು ಜೀರ್ಣೋಧಾರವನ್ನು ಮಾಡಲಾಗಿದೆ. ಇವರೇ ಈ ದೇವಾಲಯದ ಮೂಲ ನಿರ್ಮಾಪಕರೆಂದು ಹೇಳಲಾಗುತ್ತದೆ. ದೇವಸ್ಥಾನದಲ್ಲಿ ಮೂರು ಸಣ್ಣ ಸಣ್ಣ ಗೋಪುರಗಳಿಂದ ಕೂಡಿದ ದೇವಾಲಯವಿದ್ದು ಮಧ್ಯದ ಗೋಪುರದಲ್ಲಿ ನಾಗ ಪ್ರತಿಮೆ ಬಲಕ್ಕೆ ಶಿವಲೀಂಗ, ಎಡಕ್ಕೆ ಗಣಪತಿ ವಿಗ್ರಹವನ್ನು ಪ್ರತಿಷ್ಠಾಪಿಸಿ, ನಾಗ ಪ್ರತಿಮೆಗೆ ನೇರವಾಗಿ ಹೊರಗಡೆಯೋಂದು ಬಸವಣ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮುಂದೆ ಗ್ರಾಮಸ್ತರ ಸಹಕಾರದಿಂದ ಬೆಳ್ಳಿಯ ನಾಗಮೂರ್ತಿಯನ್ನು ನಿರ್ಮಿಸಲಾಗಿದೆ.

ಇತ್ತಿಚೀನ ದಿನಗಳಲ್ಲಿ ದೇವಾಲಯವು ಸರ್ಕಾರದ ಮುಜರಾಯಿ ಇಲಾಖೆಯ ವಶಕ್ಕೆ ಹೊಗಿದ್ದು, ಸರ್ಕಾರದ ನೈತೃತ್ವದಲ್ಲಿಯೇ ದೇವಾಲಯದ ಕಾರ್ಯ ಕಲಾಪವನ್ನು ನಡೆಸಿಕೊಂಡು ಹೊಗಲಾಗುತ್ತಿದೆ. ದೇವಾಲಯದ ಕೆಳಗಡೆ 32 ಎಕರೆ ಭೂಮಿಯಿದ್ದು ಅದರಿಂದ ಬಂದ ಆದಾಯವನ್ನು ದೇವಾಲಯದ ಅಭಿವೃದ್ದಿಗೆ ಬಳಸ;ಲಾಗುತ್ತಿದೆ. ಗ್ರಾಮಸ್ತರ ಹಲವೂ ಗಣ್ಯರು ಸೇರಿಕೊಂಡು ದೇವಸ್ತಾನದ ಜೀರ್ಣೋಧಾರ ಕಾರ್ಯ ಕೈಗೊಂಡಿದ್ದಾರೆ. ಅವರಲ್ಲಿ

ಪ್ರಮುಖರೇಂದರೆ ಶಂಕರೇಪ್ಪಾ ಪ್ರಭು, ಬಸವಣ್ಣಪ್ಪಾ ಭರಶೇಟ್ಟಿ, ವೀರಭದ್ರಪ್ಪಾ ಮದಕಟ್ಟಿ, ಬಸವರಾಜ ಪ್ರಭು, ಬಾಬುರಾವ ಬೇಲಕೇರಿ, ಕಾಶ್ಯಪ್ಪಾ ಭರಶೇಟ್ಟಿ, ಹಲವೂ ವ್ಯಕ್ತಿಗಳು ದೇವಾಲಯದ ಅಭಿವೃದ್ದಿಗೆ ದೂಡಿಯುತ್ತಿದ್ದಾರೆ.

ಈ ದೇವಸ್ಥಾನದಲ್ಲಿ ವರ್ಷಕ್ಕೆ ಮೂರು ಸಾರಿ ಜಾತ್ರೆ ಮತ್ತು ಉತ್ಸವಗಳು ನಡೆಯುತ್ತವೆ. ಮೊದಲನೆಯದ್ದು ನಾಗ ಪಂಚಮಿ, ಎರಡನೆಯದ್ದು ಶ್ರಾವಣ ಮಾಸದಲ್ಲಿ ನಡೆಯುವ ಜಾತ್ರೋತ್ಸವ, ಮೂರನೆಯದ್ದು ದೀಪಾವಳಿಯಲ್ಲಿ ನಡೆಯುವ ಜಾತ್ರೋತ್ಸವ ಹೀಗೆ ಪರಂಪರಾಗತವಾಗಿ ಜಾತ್ರೋತ್ಸವಗಳು ನಿರಂತರವಾಗಿ ನಡೆಯುತ್ತವೆ. ದೇವಾಲಯವನ್ನು ನೋಡಿದ್ದಾಗ ಇಲ್ಲಿನ ಪರಿಸರ ನೋಡಿದಾಗ ಇದೊಂದು ಐತಿಹಾಸಿಕ, ಧಾರ್ಮಿಕ ಪುಣ್ಯಕ್ಷೇತ್ರವಾಗಿದೆ ಎಂದು ತಿಳಿದು ಬರುತ್ತದೆ.



ಸಿಮೇ ನಾಗಣ್ಣನ ದೇವಸ್ಥಾನ ಹಳ್ಳಿಖೇಡ (ಬಿ)



ಗರ್ಭಗ್ರಹದಲ್ಲಿರುವ ಸೀಮೆ ನಾಗಣ್ಣನ ಮೂರ್ತಿ





ಸುಕ್ಷೇತ್ರ ಹುಡಗಿ ಗ್ರಾಮ

ಹುಮನಾಬಾದ ತಾಲೂಕಿನ ಅನೇಕ ಕಡೆಗೆ ಹಲವಾರು ಐತಿಹಾಸಿಕ ಸ್ಥಳಗಳಿವೆ ಅವುಗಳಲ್ಲಿ ಹುಡಗಿ ಗ್ರಾಮವೂ ಒಂದು ಐತಿಹಾಸಿಕ ಸ್ಥಳವಾಗಿದೆ ಹಾಗೂ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪುಣ್ಯೆಕ್ಷೇತ್ರವಾಗಿದೆ. ಈ ಗ್ರಾಮವು ತಾಲೂಕಾ ಕೇಂದ್ರದಿಂದ ಸುಮಾರು ೬ ಕಿ.ಮೀ. ದೂರದಲ್ಲಿದೆ ಈ ಗ್ರಾಮ ಐತಿಹಾಸಿಕವಾಗಿ ಹಾಗೂ ಧಾರ್ಮಿಕ ಪುಣ್ಯಕ್ಷೇತ್ರವಾಗಿ ಮಾರ್ಪಡಲು ಇಲ್ಲಿ ಜೀವಿಸಿದ ಇಬ್ಬರು ಮಹಾನ್ ಪುಣ್ಯ ಪುರಷರೇ ಕಾರಣ ಅವರುಗಳೆಂದರೆ, ದಿಗಂಬರ ಕರೀಬಸವೇಶ್ವರರು ಹಾಗು ಯಂಕಮ್ಮ ತಾಯಿಯವರು. ಇವರ ಒಂದು ಪಾದ ಸ್ಪರ್ಶದಿಮದ ಹಾಗೂ ಇವರ ದಿವ್ಯ ಶಕ್ತಿಯಿಂದ ಈ ಗ್ರಾಮ ಐತಿಹಾಸಿಕ ಸ್ಥಳವಾಗಿ ಮಾರ್ಪಟ್ಟಿದೆ. ಇಲ್ಲಿ ಈ ಇಬ್ಬರು ಪುಣ್ಯ ಪುರುಷರ ಸಮಾಧಿ ಇದೆ ಹಾಗೂ ಈ ಸಮಾಧಿಯ ಮೇಲೆ ಭವ್ಯ ದೇವಾಲಯವನ್ನು ನಿರ್ಮಿಸಲಾಗಿದೆ. ಇವರ ಐತಿಹಾಸಿಕ ಹಿನ್ನೆಲೆ ಈ ಕೆಳಗಿನಂತೆ ನಾವು ಕಾಣಬಹುದು.

ಸುಮಾರು ಒಂದುನೂರಾ ತೊಂಭತ್ತು ವರ್ಷಗಳ ಹಿಂದಿನ ಕಾಲ ಆಗ ಕಾಡು ದಟ್ಟವಾಗಿದ್ದಿತು. ಜನ ತುಂಬಿದ ನಾಡು ವಿರಳವಾಗಿತ್ತು. ಸಂಪದ್ಭರಿತ ಕಾಡು ನಾಡಿನ ಅಭಿವೃದ್ಧಿಯ ಬೀಡಾಗಿದ್ದಿತು. ಕಾಡು ಪ್ರಾಣಿಗಳು ನಿರ್ಭಯವಾಗಿ ನಿರಮ್ಮೂಳಗಿ ಜೀವನ ನಡೆಸುತ್ತಿದ್ದವು ಆಗ ಕಾಡಿನಿಂದ ಆವೃತವಾದ ನಾಡು ಊರಿಗೆ ಬರುವತನಕ ಇಡಿಯಾಗಿ ಗೋಚರಿಸುತ್ತಲೇ ಇಲ್ಲ.

ಅಂಥ ಕಾಡುಗಳಿಂದ ಆವೃತವಾದ ಗ್ರಾಮಗಳಲ್ಲಿ ಆಗಿನ ಚಿಟಗುಪ್ಪಾ ಪಾಯ್ಗಾ ಜಿಲ್ಲೆಯ (ಈಗಿನ ಬೀದರ ಜಿಲ್ಲೆಯ ಹುಮ್ನಾಬಾದ ತಾಲೂಕಿನ) ಹುಡಗಿ ಗ್ರಾಮವು ಒಂದು ಊರಿನ ಉತ್ತರದಲ್ಲಿ ಹಿರಿಹಳ್ಳ (ದೊಡ್ಡ ಹಳ್ಳ) ಹಾಗೂ ದಕ್ಷಿಣದಲ್ಲಿ ಚಿಕ್ಕ ಹಳ್ಳ ಹರಿಯುತ್ತಿದ್ದು ಅವು ಊರಿನ ಪೂರ್ವ ದಿಕ್ಕಿನಲ್ಲಿ ನಾರಂಜಾ (ಕಾರಾಂಜಾ) ನದಿಗೆ ಸೇರುತ್ತದೆ.

ಆ ಕಾಲದಲ್ಲಿ ಈ ಹಳ್ಳಗಳು ಬತ್ತುವ ಮಾತೇ ಇದ್ದಿಲ್ಲ ಬೇಸಿಗೆಯಲ್ಲಿ ಮಡುಗಟ್ಟಿ ಜುಳು ಜುಳು ಹರಿಯುತ್ತಲೇ ಇರುತ್ತಿದ್ದವು ಆಗಿನ ಹಣಾದಿಗಳು ಈಗಿನ ನಾಲೆಗಿಂತ ಸಮೃದ್ಧವಾಗಿ ಶಿವರಾತ್ರಿ ಅಮವಾಸೆಯವರೆಗೆ ಹರಿಯುತ್ತ ಗಿಡ- ಮರ- ಬಳ್ಳಿ ಹಾಗೂ ಕಾಡು ಮತ್ತು ನಾಡಿನ ಜೀವಿಗಳಿಗೆ ನೀರಿನ ನೆಲೆಗಳಾಗಿದ್ದವು. ಎತ್ತಿನಿಂದ ನಡೆಸುವ ಏತ ನೀರಾವರಿ (ಮಟ್ಟಿ ಭಾವಿ ನೀರಾವರಿ) ಇಲ್ಲಿ ಹೊಲ ನೆಲಗಳನನು ಹಸುರು ಹಸುರಾಗಿಡುತ್ತಿದ್ದಿತ್ತು. ಊರ ಸುತಲಿರುವ ಬಾಗಸಾಯಿಯು ಆಗಿನಿಂದ ಈಗಿನವರೆಗೆ ತರಕಾರಿ, ಕಬ್ಬು ಬಾಳಿ ಬೆಳೆವಾಗಿದೆ.

ಜನನ –ಬಾಲ್ಯ– ವಿದ್ಯಾಭ್ಯಾಸ :–

ಬಾಲ್ಕಿ ತಾಲೂಕಿನಲ್ಲಿ ಚಾಳಕಾಪೂರ ಎಂಬ ಊರು ಇದೆ. ಅದು ಹಳ್ಳಿಖೇಡ(ದೊಡ್ಡ) ಊರಿನಿಂದ ಸುಮಾರು ಐದು ಕಿ.ಮೀ. ದೂರದಲ್ಲಿದೆ. ಮಹಾಮಾರ್ಗದಿಂದ ದೂರದಲ್ಲಿದ್ದರೂ ಕುಗ್ರಾಮವೇನಲ್ಲ ಇಂಥ ಊರಿನಿಂದಲೇ ಸಿದ್ಧಾರೂಢರು ಹುಬ್ಬಳ್ಳಿ ಸೇರಿ ವಿಶ್ವವಿಖ್ಯತರಾದದ್ದು ಇದೆ ಊರಲಿ ಕ್ರಿ.ಶ. ೧೮೧೫ರಲ್ಲಿ (೧೨೨೩ ಫಸಲಿ) ಮಿತಿ ಜ್ಯೇಷ್ಠ ಶುದ್ಧ ಏಕಾದಶಿ (೧೧), ಸೋಮವಾರ ದಂದು ದಿಗಂಬರ ಕರಿಬಸವೇಶ್ವರರು ಜನಿಸಿ ಬಂದರು. ಇವರ ತಾಯಿಯ ಹೆಸರು ಜ್ಯೋತೆಮ್ಮ. ತಂದೆಯ ಹೆಸರು ಚನ್ನಬಸವಯ್ಯ ಮಠಪತಿ –೧

ಈ ದಂತಿಗಳಿಗೆ ಮಕ್ಕಳೇ ಇದ್ದಿಲ್ಲವಂತೆ. ಅಷ್ಟಾವರಣ ಸಂಪನ್ನರಾವ ಇವರು ಶಿವಧ್ಯಾನ ಶಿವಚಿಂತನೆದಲ್ಲಿಯೇ ನಿರತರಾಗಿರುತ್ತಿದ್ದರು. ಅವರ ದಾಂಪತ್ಯದ ಶಿವಚಿಂತನದಲ್ಲಿಯೇ ನಿರತರಾಗಿರುತ್ತಿದ್ದರು. ಅ ಅವರ ದಾಂಪತ್ಯ ೧೨ನೇ ವರ್ಷದಲ್ಲಿ ಅವರು ಸುಪುತ್ರರಾಗಿ ಬಂದರು. ಶಿವಕೃಪೆಯಿಂದಲೇ ಅವರಿಗೆ ಪುತ್ರ ಪ್ರಾಪ್ತಸತಿಯಾಯಿತೆಂದು ಲಿಂ ಗುರಪಾದಪ್ಪ ಶಿವರಡ್ಡಿ ಹೇಳಿದ್ದಾರೆ. –೨ ಬಾಲಕ ಕರಿಬಸವೇಶ್ವರರು ಆರೇಳು ವರ್ಷದವರಾಗುತ್ತಿದ್ದಂತೆ ಹುಡುಗಿಯ ಹೀರೆಮಠದ ಪಟ್ಟಾಧ್ಯಕ್ಷರಾದ ಚನ್ನೆಮಲ್ಲಪ್ಪನವರ ಗಮನವನ್ನು ಸೆಳೆದರು. ಅವರು ಕರಿಬಸವೇಶ್ವರರನ್ನು ತಮ್ಮ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿಕೊಂಡರು. ಅವರ ಅಭ್ಯಾಸಕ್ಕಾಗಿ ಪಂಡಿತರನ್ನು ಕರೆಯಿಸಿ. ಕನ್ನಡ ಅಕ್ಷರಾಭ್ಯಾಸ ಮಾಡಿಸಿದರು. ಕರಿಬಸವೇಶ್ವರರು ಪುಣ್ಯಶಾಲಿಗಳು ಮೂರೇ ವರ್ಷಗಳಲ್ಲಿ ಕನ್ನಡ ಭಾಷ ಪಾರಂಗತರಾದರು. ಆಧ್ಯಯಾತ್ಮದಲ್ಲೂ ಆಸಕ್ತಿಯುಳ್ಳವರಾದರು. ಚನ್ನೆಮಲ್ಲಪಾ ಗುರುಗಳವರ ಸದಿಚ್ಛೇಯಂತೆ ಜ್ಞಾನಸಿಂಧೂ, ನಿಜಗುಣಾರಾಧ್ಯರ ಕೈವಲ್ಯ ಪದ್ಧತಿ & ಉಪನಿಷತ್ತುಗಳನ್ನು ಮನೋಗತ ಮಾಡಿಕೊಂಡರು.

ಚೆನ್ನಮಲ್ಲಪ್ಪ ಗುರುಗಳಿಗೆ ಅತ್ಯಂತ ಆನಂದವಾಯಿತು. ತನ್ನ ಶಿಷ್ಯ ಹಾಗೂ ಉತ್ತರಾಧಿಕಾರಿ ಕರಿಬಸವೇಶ್ವರರು ಮಹಾಜ್ಞಾನಿ ಯಾದರೆಂದು ಹಿಗಿದರು. ತಮ್ಮ ಪೂರ್ವಸಂಕಲ್ಪದಂತೆ ಚೆನ್ನಮಲ್ಲಪ್ಪನವರು ಕರಿಬಸವೇಶ್ವರರಿಗೆ ಕ್ರಿ.ಶ ೧೮೨೪ರ ವೈಶಾಖ ಶುದ್ಧ ಪಾಡ್ಯಮಿ (೧) ಸೋಮನವಾರದಂದು ಪಟ್ಟಧಿಕಾರ ಕೊಟ್ಟರು. ಅಂದರೆ ಒಂಭತ್ತನೆ ವಯಸ್ಸಿನಲ್ಲಿಯೇ ಪಟ್ಟಾಧಿಕಾರಿಯಾದರು. ಅವರು ಅಧಿಕಾರ ಸ್ವೀಕಾರ ಮಾಡುವ ಮೊದಲಿನಘಟನೆ ಹೀಗೆದೆ ಪರಂಪರಾಗತ ಮನೆತನದ ರೂಢಿಯಿಂದಾಗಿ ಕರಿಬಸವೇಶ್ವರರು ತಾಯಿ–ತಂದೆ, ಬಂಧು, –ಬಳಗ ವ್ಯಾಮೋಹದಿಂದ ದೂರವಾಗಿದ್ದರು. ಅವರು ಯೋಗಾಭ್ಯಾಸ & ಆದ್ಯತ್ಮದಲ್ಲಿ ಆಸಕ್ತರಾಗಿದ್ದರು. ಒಂದು ದಿನ ತಾಯಿ ಮನೆಗೆಲಸದಲ್ಲಿ ತೊಡಗಿರುವಾಗ ಕರಿಬಸವೇಶ್ವರರು ತಮ್ಮ ವಾರಿಗೆ ಗೆಳೆಯರೊಂದಿಗೆ ಆಟವಾಡಲು ಎರಡು

ಫರ್ಲಾಂಗು ಮಾರದಲ್ಲಿರುವ ನಾರಾಂಜಾ (ಕಾರಂಜಾ) ನದಿಗೆ ಹೊದರು ಎಲ್ಲ ಗೆಳೆಯರು ನೀರಾಟವಾಡಲು ತೊಡಗಿದರು. ಹೀಗೆ ಆಟ ನಡೆದಿರುವಾಗ ಕೆಲವು ಸಂಗಡಿಗರು ಕರಿಬಸವೇಶ್ವರರನ್ನು ಒತ್ತಿ ಹಿಡಿದು ಆಳ ನೀರಿನಲ್ಲಿ ಮುಳುಗಿಸಿದರು. ಆಳನೀರಿನ ತಳ ಕಂಡ ಕರಿಬಸವೇಶ್ವರರು ಎಷ್ಟೋತ್ತಾದರೂ ಮೇಲೆ ಬರಲಿಲ್ಲ ಗಾಬರಿಗೊಂಡ ಹುಡುಗನ್ನೊಬ್ಬ ಓಡಿ ಹೋಗಿ ಕರಿಬಸವೇಶ್ವರರ ತಂದೆ-ತಾಯಿಗೆ ಈ ಸುದ್ದಿ ಮುಟ್ಟಿಸಿದರು. ಸುದ್ದಿ ಕೇಳದಿ ತಾಯಿ ತಂದೆಯವರು ನದಿಯ ಮಡವಿನ ಹತ್ತಿರ ಬಂದರು. "ಮಡುವಿನಲ್ಲಿ ಬಿದ್ದು ಮಡಿದೆಯಾಮಗನೇ" ಎಂದು ರೋಧಿಸತೊಡಗಿದರು. " 'ಮಗನೇ, ಕರಿಬಸವಾ' ಎಂದು ಗಂಟಲು ಹರಿದು ಹೋಗುವಂತೆ ಕೂಗಿದರು. ಆಗ ಮೇಲೆ ಬಂದ ಕರಿಬಸವೇಶ್ವರರು" ನಾನು ಯೋಗಾನಂದದಲ್ಲಿ ತಲ್ಲೀನನಾಗಿದ್ದೆ, ಯಾಕೆ ಕರೆದಿರುಮ್ಮ ? ಸುಮ್ಮನೆ ಯಾಕೆ ಕರೆದಿರಮ್ಮ ?" ಎಂದು ಕೇಳಿದಾ, ಯಾರಾದರೂ ಎರಡು ಮೂರು ತಾಸು ನೀರೊಳಗೆ ಮುಳುಗಿರುತ್ತಾರೆಯೇ ಹುಚ್ಚಪ್ಪಾ ? ನೀನು ಸತ್ತೇ ಬಿಟ್ಟೆ ಎಂದು ತಿಳಿದು ನಾವು ನಿನ್ನನ್ನು ಜೋರಾಗಿ ಕರೆದೆವು' ಎಂದರು " ಹರಹರಾ, ನಾನು ಸತ್ತಿದ್ದಿಲ್ಲ ಅಮ್ಮಾ, ನಾನು ಬ್ರಹ್ಮಾನಂದದಲ್ಲಿ ಲೀನವಾಗಿದ್ದೆ" ಎಂದು ಕರಿಬಸವೇಶ್ವರರು ನಗುತ್ತಾ ಉತ್ತರಿಸಿದರು -" ನನ್ನ ಗುರುಗಳು ಜೀವನವನ್ನು ಮಸ್ತಕದಲ್ಲಿ ಇರಿಸುವ ಸಾಧನ ಮಾಡಿಸಿದ್ದಾರೆ. ಯೋಗಾಭ್ಯಾಸದಿಂದ ಶರೀರಕ್ಕೆ ರೋಗ ಬಾಧೆಯಾಗುವುದಿಲ್ಲ, ಶರೀರ ದುಃಖಗಳಲ್ಲ ನಿವೃತ್ತಿಯಾಗುವವು ಎನ್ನುತ್ತಾರೆ, ಇನ್ನೂ ಗುರುಗಳಿಂದ ನಾನು ಸಾಕಷ್ಟು ಕಲಿಯಬೇಕಾಗಿದೆ. ಎಂದು ನುಡಿದ ಕರಿಬಸವೇಶ್ವರರು ತಾಯಿ ತಂದೆಯೊಂದಿಗೆ ಹಾಗೂ ಗೆಳೆಯರೊಂದಿಗೆ ಮನೆಗೆ ಹಿಂದಿರುಗಿದರು. ಯೋಗರೋಢರಾಗುತ್ತಿರುವಂಥ ಕರಿಬಸವೇಶ್ವರರ ಲೀಲೆಗಳಿಗೆ ಇದೊಂದು ನಾಂದಿಯೆಂದು ಹೇಳಬಹುದಾಗಿದೆ.

ಲೀಲೆಗಳು :-

ದಿಗಂಬರ ಕರಿಬಸವೇಶ್ವರರು ಹಿರೇಮಠ ಹುಡಗಿಯ ಪಟ್ಟಾಧ್ಯಕ್ಷರಾಗಿದ್ದರೂ ಅವರು ಮಠದಲ್ಲಿ ವಾಸಮಾಡುತ್ತಿದಿಲ್ಲ, ಅವರು ಸದಾ ಬತ್ತಲೆಯಾಗಿರುತ್ತಿದ್ದರು ಅವರ ಮೈಮೇಲೆ ಒಂದು ತುಂಡು ಬಟ್ಟೆಯು ಇರುತ್ತಿದಿಲ್ಲ. ಯಾರಾದರೂ ಅವರಿಗೆ ಬಟ್ಟೆ ಕೊಟ್ಟರೆ ಅದನ್ನು ಹರಿದು ಚಿಂದಿ-ಚಿಂದಿ ಮಾಡುತ್ತಿದ್ದರು. ಇಲ್ಲವೆ ಸುಟ್ಟು ಬಿಡುತ್ತಿದ್ದರು. ಉದ್ದುದ್ದಾದ ಗಡ್ಡ, ಮೀಸೆ, ಕೆದರಿದ ಕೂದಲುಗಳು ಇವರು ಹುಡಗಿ ಊರು & ಸುತ್ತಣ ಹುಮ್ನಬಾದ, ಕಲ್ಲೂರ, ಗೋರಂಪಳ್ಳಿ, ಹಣಕುಣಿ, ಸಿಂಧಕೇರಿ, ಬೇನಚಿಂಚೋಳ್ಳಿ, ದುಬಲಗುಂಡಿ, ಧುಮ್ಮನಸೂರ, ಮಾಣಿಕನಗರ (ಪ್ರಭುನಕಟ್ಟಿ) ಮೋಳಕೇರಿ ಮೊದಲಾದ ಊರುಗಳಲ್ಲಿ ಬತ್ತಲೆ ಸುತ್ತಾಡುತ್ತಿದ್ದರು. ಅವರಿಗೆ ಮಳೆ, ಚಳಿ, ಬಿಸಿಲುಗಳು. ಎಂದೂ ಅಡ್ಡ ಬಂದಿಲ್ಲ ಹರಿಯುವ ಹಳ್ಳ ಕೊಳ್ಳಗಳಿಗೂ ಅವರು

ಅಂಜುತ್ತಿದಿಲ್ಲ. ಉಣುವ-ತಿನ್ನವ ಗೋಜಿಗೆ ಹೋಗುತ್ತಿದಿಲ್ಲ, ಯಾರಾದರೂ ಉಣಲು -ತಿನ್ನಲು ಕೊಟ್ಟರು ಅದನ್ನು ತಪ್ಪಿಯೂ ಬಾಯಿಗೆ ಹಾಕುತ್ತಿದ್ದಿಲ್ಲ ಬಾಲ್ಯದಲ್ಲಿಯೇ ಎಲ್ಲವನ್ನು ಅರಿತುಕೊಂಡ ಕರಿಬಸವೇಶ್ವರರು ಕೆಲವರ ಕಣ್ಣಲ್ಲಿ ಹುಚ್ಚರಂತೆ ಕಂಡರೂ ಬಲ್ಲವರ ಕಣ್ಣಲ್ಲಿ ಮಹಾಜ್ಞಾನಿಯಾಗಿದ್ದರು. ಅಇಂತೆಯೇ ಜ್ಞಾನಿಗಳು ಅವರನ್ನು ಭಕ್ತಿಪೂರ್ವಕ ನಮಿಸುತ್ತಿದ್ದರು.

ಗುಂಪಾ ಸುಟ್ಟು ಹಾಕಿದರು :-

ಮುತ್ಯಾ ಅವರು ಸದಾ ಮಳೆ ಚಳಿ ಬಿಸಿಲೆನ್ನದೆ ಬಯಲಲ್ಲೇ ವಾಸಿಸುತ್ತಿದ್ದರು. ಅವರು ಗುಂಪಾ ಗುಡಿಸಲು ಕಟ್ಟುವ ಕಾರ್ಯಕ್ಕೆ ಕೈ ಇಟ್ಟವರಲ್ಲ, ಅವರು ಎಲ್ಲವನ್ನೂ ಗೆದ್ದವರು, ಆದರೆ ಜನರಿಗೆ ಮಾತ್ರ ಚಿಂತೆ " ಚಳಿಗಾಲ, ಮಳೆಗಾಲ ಬ್ಯಾಸಗಿ ಎಲ್ಲಾ ಮುತ್ಯಾನ ಮೈಮ್ಯಾಲೆ ನಡ್ದೂವು. ಒಂದು ಗುಂಪಾ ಆದ್ರೂ ಕಟ್ಟೋಣ" ಅಂತ ಲೆಕ್ಕಾ ಹಾಕಿ ಊರವರೆಲ್ಲ ಕೂಡಿದಿದ್ದನ್ನು ಎಬ್ಬಿಸಿದರು. ಎಲ್ಲರೂ ಗುಂಪಾದೊಳಗೆ ಕುಂದ್ರವುದೆ, ಮಲಗುವುದು ಗಾಂಜಿ ಸೇದುವುದು ನಡೆಸಿದರು, ಒಂದು ದಿನ ಎಲ್ಲರೂ ಗಾಢ ನಿದ್ರೆಯಲ್ಲಿ ಇರುವಾಗ ಬೆಂಕಿಯಿಂದ ಗುಂಪಾಕ್ಕೆ ಬೆಂಕಿ ಇಟ್ಟರು. ಪರಿಶ್ರಮ ಪಟ್ಟು ಹಣೆದ ಗುಂಪ್ಪಾ ಛಟಛಟ ಉರಿಯತೊಡಗಿತು. ಮುತ್ಯಾ ಅವರು " ಗುಂಪಾ ನೋಡ್ರೋ ಗುಂಪಾ ನೋಡ್ರೋ"

ಎಂದು ಆನಂದದಿಂದ ಕುಣಿದಾಡ ತೋಡಗಿದರು. ಬೆಂಕಿಯ ಸೆಕೆಯಿಂದ ಹಾಗು ಮುತ್ಯಾ ಅವರು ಗುಲ್ಲು- ಗಾವಳಿಯಿಂದ ಎಚ್ಚರಾದ ಜನರು ಮುತ್ಯಾ ಅವರನ್ನು ಎಳೆದುಕೊಂಡು ಹೊರಗೆ ಬಂದರು. ಆ ಮೇಲೆ ಹುಡುಗಿ ಊರ ಜನರು ಮುತ್ಯಾ ಅವರಿಗೆ ಗುಂಪಾ ಕಟ್ಟಿಕೊಡುವ ಕನಸನ್ನು ಕೈ ಬಿಟ್ಟರು. ಆಗಾಗ ಬೇರೆ ಊರವರು ಗುಂಪಾ ಕಟ್ಟಿಕೊಟ್ಟರು ಅದು ಒಂದೇರಡು ದಿನಗಳಲ್ಲೇ ಬೆಂಕಿ ಕಮಡು ಬೂದಿಯಾಗುತ್ತಿತ್ತು.

ದೀಕ್ಷಾ ಕೊಟ್ಟರು ಮುತ್ಯಾ ಅವರು : –

ದಿಗಂಬರ ಕರಿಬಸವೇಶ್ವರರು ಸಾಮಾನ್ಯ ಕಣ್ಣಿಗೆ ಹುಚ್ಚರಂತೆ ಕಂಡರು, ಜ್ಞಾನಿಗಳು ಅವರನ್ನು ಮಹಾಜ್ಞಾನಿಗಳು ಎಂದು ಗುರುತಿಸಿದ್ದರು. ಅವರು ಮುತ್ಯಾ ಅವರ ಬದುಕಿನಿಂದಲೇ ಪಾತಕಲೆತು ಪಾವನರಾಗುತ್ತಿದ್ದರು. ಅವರು ದಿಕ್ಷೆ ಪಡೆದು ಪಾವನರಾಗಬೇಕೆಂದು ಹಂಬಲದವರಿರುತ್ತಾರೆ. ಅವರಿಗೆ ತೋರಿಕೆಯ ಶಿಷ್ಯರಾಗುವ ಹಂಬಲ ಬಹಳವಿರುತ್ತದೆ. ಅಂಥ ಕಲವು ಜನರು ಒಟ್ಟುಗೂಡಿ, ಮುತ್ಯಾ ಅವರಿಂದ ದಿಕ್ಷೆ ಪಡೆಯಲು ಹುಡಗಿ ಗ್ರಾಮದತ್ತ ಹೊರಟರು.

ಮುತ್ಯಾ ಅವರು ತಮ್ಮ ಒಳಗಣ್ಣಿನಿಂದ ಈ ವಿಷಯವನ್ನು ಅರಿತುಕೊಂಡು, "ಇಪೋತ್ತು ಮೂಡಲ ಮಾರಿ ಮಂದಿ ದೀಕ್ಷಾ ತಗೋಲಾಕ ಹೊಂಟಾರರೋ !

ಕುಡಬೇಕಾ ಭ್ಯಾಡಾ” ಅಂದರು. “ ಕುಡ್ರಿ ಮುತ್ಯಾ ಅವ್ರೇ, ಯಾರು ಭ್ಯಾಡಂತಾರ? ಎಂದರೂ ಎಲ್ಲರೂ ಒಟ್ಟುಗೂಡಿ.

“ ಪರವಾ ಇಲ್ಲ ದಿಕ್ಷಾಕಿಂತಾ ಮೊದಲ ನಿಮ್ಮಲ್ಲಿ ಯಾರ್‍ಯಾರು ಪಕ್ಕಾ ಶಿಷ್ಯಾ ಆಗೋರಿದ್ದಿರಿ ಅಂಬಾದು ಒರಿಗಿ ಹಚಬೇಕಾಗತ್ತಾದ, ಜರಾ ಧೈರ್ಯದಿಂದ ಕೂಡ್ರಿ” ಅಂದು ಧುನಿಯೋಳಗಿನ ಉರಿಯುವ ಕೊಳ್ಳಿಯಿಂದ ದನನನನ ಊರಿ ಹಚ್ಚಿ ಬಿಟ್ಟರು ಉರಿ ನೀಡಿದ ತಕ್ಷಣವೇ ಭೆಳ್ಳಗೆ ಭಾಳ್ಳಗೆ ಸೀಂಗಾರಾಗಿ ಬಂದಂಥ ಶಿಷ್ಯರೆಲ್ಲ ಹಿಂದಿ ಮುಂದೆ ನೋಡಲ್ದಂತೆ ಕಾಲಿಗೆ ಬುದ್ದಿ ಹೇಳಿದರು ಬಿದ್ದಿದ ಎದ್ದಿದ ಖಬರಿಲ್ಲದೆ ಓಡ ತೋಡಗಿದರು. “ ನಿಂದುತ್ರೋ, ದೀಕ್ಷಾಕುಡ್ತೀನಿ ನಿಂದುರ್‍ರೋ” ಎಂದು ಮುತ್ಯಾ ಹಿಂದ್ಹಿಂದೆ, ಅವರು ಮುಂದ್ಮುಂದೆ ಓಡ ತೊಡಗಿದರು. ತಸು ಹೋತ್ತು ಬೆನ್ನಟಿ ಹಿಂದಿರುಗಿದ ಮುತ್ಯಾ ಅವರು “ದೀಕ್ಷಾ ತೋಗೋತಾರಂತ ದೀಕ್ಷಾ ” ಎಂದು ಗಹಗಹಿಸಿ ನಕ್ಕು ಶಾಂತರಾದಂತೆ ಹೀಗಿತ್ತು ಮುತ್ಯಾ ಅವರು ಒರೆಗೆ ಹಚ್ಚುವ ರೀತಿ.

ಯಂಕಮ್ಮ ತಾಯಿ ಶಿಷ್ಯಳಾದಳ :–

ಹುಮನಾಬಾದ ತಾಲೂಕಿನ ಹಳ್ಳಖೇಡ (ಬಿ) ಗ್ರಾಮದ ಸದ್ಭಕ್ತೆಯಾದ ಶರಣೆ ಯಂಕಮ್ಮ ತಾಯಿಯವರು ಮುತ್ಯಾಯವರ ಪವಾಡಗಳಿಗೆ ಮೂರು ಹೋಗಿ ಅವರ ಶಿಷ್ಯಳಾಗಿ ಬಿಡುತ್ತಾಳೆ .

ಕಡಗಂಚಿ ಮಡಿವಳ ದೀರ :–

ಕಡಗಂಚಿ ಮಡಿವಾಳ ದೀರ
ಭಕ್ತಿ ನಿಮ್ಯಾಲಿಟ್ಟರ ಪೂರ
ಯಂಕಮ್ಮ ತಾಯಿ ಭಕ್ತಿಯು ಪೂರ
ತ್ಯಾಗ ಮಾಡಿ ಸಂಸಾರ – ೭

ಎಂಬ ದಿಂಗಬರ ಕರಿಬಸವೇಶ್ವರ ಮುತ್ಯಾ ಅವರ ಕುರಿತ ಮಂಗಳಾರತಿಯಲ್ಲಿ ಕಡಗಂಚಿ ಮಡಿವಾಳಪ್ಪನವರ ಹಾಗೂ ಯಂಕಮ್ಮ ತಾಯಿಯವರ ಪ್ರಸ್ತಾಪ ಬರುತ್ತದೆ.

ಭಾಲ್ಕಿ ತಾಲೂಕಿನ ಖಡಕ್ ಚಿಂಚೋಳಿ (ಕೊಟ್ರಾಯನ ಚಿಂಚೋಳಿ) ಗ್ರಾಮದಲ್ಲಿ ಕಡಗಂಚಿ ಎಂಬ ಮನೆತನವಿದೆ. ಆ ಮನೆತನದ ಮಡಿವಾಳಪ್ಪ ಎಂಬವರೇ ದಿಗಂಬರ ಕರಿಬಸವೇಶ್ವರ ಮುತ್ಯಾ ಅವರ ಶಿಷ್ಯರು.

ಊರೇ ಧಗಧಗ ಉರಿಯಿತು. :–

ಭಾಲ್ಕಿ ತಾಲ್ಲೂಕಿನ ನಾವದಗಿಯಲ್ಲಿ ತರುಣರಾದ ರೇವಪಯ್ಯನವರು ಗಣಾಚಾರದಲ್ಲಿ ಖ್ಯಾತರಾಗಿದ್ದರು. ಅವರು ದಿಂಗಬರ ಕರಿಬಸವೇಶ್ವರ ಮುತ್ಯಾ ಅವರು ಕಿರಿಯ ಸಮಕಾಲೀನವರಾಗಿದ್ದರು. ಲಿಂಗಮತ ಧರ್ಮದ ಕಟ್ಟಾಳುವಾಗಿದ್ದರು. ಅವರು ಭಾಲ್ಕಿಯ ಬಜಾರದಲ್ಲಿ ನಿಂತು ಗಣಾಚಾರಿಯಾಗಿ ಧರ್ಮ ವಿರೋಧಿಗಳಿಗೆ ಸವಾಲು ಹಾಕುತ್ತಿದ್ದರು. ಗಂಡೆದೆಯಿದ್ದರೆ ಮುಂದೆ ಬನ್ನಿ ಎಂದು ತೊಡೆ ತಟ್ಟುತ್ತಿದ್ದರು. ಆರ್ಯ ಸಮಾಜವು ವೀರಶೈವ ಧರ್ಮಿಯರನ್ನು ಮತಾಂತಗಳಿಸುತ್ತಿರುವಾಗ ಅದನ್ನು ಪ್ರತಿಭಟಿಸಿದವರು ನಾವದಗಿಯ ರೇವಪಯ್ಯನವರು ಮತ್ತು ಭಾಲ್ಕಿಯ ಚನ್ನಬಸವ ಪಟ್ಟದೇವರು ಆರ್ಯ ಸಮಾಜಿಗರಾಗಿ ಪರಿವರ್ತನೆ ಹೋಂದಿದ ಲಿಂಗವಂತರಿಗೆ ಮರಳಿ ಲಿಂಗಾಯತ ಧರ್ಮಕ್ಕೆ ಕರೆದು ಕೊಂಡುವುದರಲ್ಲಿ ಇವರಿಬ್ಬರಲ್ಲದೆ ಹರ್ಡೇಕರ ಮಂಜಪ್ಪಾ ಮತ್ತು ಗುರುಮಠಕಲ್ಲದ ಶಾಂತವೀರ ಸ್ವಾಮಿಯವರು ಕೂಡ ಪ್ರಮುಖರಾಗಿದ್ದಾರೆ. ಇಂತಹ ಕ್ರಾಂತಕಾರಿ ಪುರುಷರಾದ ನಾವದಗಿ ರೇವಪಯ್ಯನವರ ದರ್ಶನಕ್ಕಾಗಿ ದಿಂಗಬರ ಕರಿಬಸವೇಶ್ವರ ಮುತ್ಯಾ ಅವರು ಕಾಯಿ ಕರ್ಪೂರದೊಂದಿಗೆ ಹೊದರು ಗುರುಗಳು ಮತ್ತು ಸ್ವಾಮಿಗಳ ಹತ್ತಿರ ಕೆಲವು ಶಿಷ್ಯರು ಬಹಳ ಅಹಮ್ಮಿನವರಿರುತ್ತಾರೆ. ಅವರು ಮಹಾಪುರುಷರನ್ನು ಗುರುತಿಸುವ ಪ್ರಯತ್ನ ಮಾಡುವುದೇ ಇಲ್ಲ ಹಾಗೆ ಮುತ್ಯಾ ಅವರ ಬಗ್ಗೆ ನಾವದಗಿ ರೇವಪಯ್ಯನವರ ಶಿಷ್ಯರು ನಡೆದುಕೊಂಡರು ಈ ಹುಚ್ಚ ಕರಿಬಸಪ್ಪನ್ನು ಒಳಗೆ ಬಿಟ್ಟರೆ ಎಲ್ಲಾ ಹುಚ್ಚು –ಹುಚ್ಚು ಮಾಡಿ ಬಿಡತ್ತಾನೆಂದು ಊಹಿಸಿ.

"ಅಪ್ಪಾ ಅವರು ಲಿಂಗಪೂಜೆಕ್ಕೆ ಕುಂತಾರ ಒಳಗೆ ಬಿಡಲಾಕ ಬರಲಾ" ಎಂದರು.

" ಅವರು ಪೂಜಾ ನೋಡದದದ ನನಗ ! ಕಾಯಿ ಕರ್ಪೂರ ಮಾಡದದಾನನಗಿ"

ಅಂದರು ದಿಗಂಬರ ಮುತ್ಯಾ ಅವರು

" ಒಳಗ ಬಿಡಲಾಕ ಬರಲ್ಲಾ ನಡಿ ಹುಚ್ಚಾ" ಎಂದು ಸೇವಕರು ಅಡಿ ಮಾಡಿದರು

ಮುತ್ಯಾ ಅವರು ಗಪ್ ಚುಪ್ ಹೊರಗಾದರು ತಾವು ತಂದಿದ ಕಾಯಿ ಕರ್ಪೂರವನ್ನು ತಿಪ್ಪೆಯ ಮೇಲೆ ಎಸೆದರು ಬಂದ ದಾರಿಯಿಂದ ವಾಪಸ್ ಆದರು.

ಕಾಯಿ ಕರ್ಪೂರವನ್ನು ಎಸೆದುದ್ದೆ ತಡ, ತಿಪ್ಪೆಯ ಭಗ್ಗನೆ ಊರಿ ಹತ್ತಿ ಧಗ ಧಗ ಉರಿಯ ತೊಡಗಿತ್ತು. ಆದರಿಂದ ಸಾಲು ತಿಪ್ಪೆಗಳ ಉರಿಯ ತೊಡಗಿದವು.ಅದರಂತೆ ಮುಗ್ಗುಲಲ್ಲಿರುವ ಚಪ್ಪರ ಮನೆಗಳು ಹಿತ್ತಲಗಳು, ಹುಲ್ಲು ಬಣವೆಗಳು ಉರಿಯ ತೊಡಗಿದವು, ಸೇವಕರು ದಿಗ್ಭ್ರಾಂತರಾದರು. ತಾವು ಮಾಡಿದ ತಪ್ಪಿಗಾಗಿ ಗದಗದ ನಡಗುತ್ತ ರೇವಪಯ್ಯನವರ ಸಮ್ಮುಖ ಹಾಜರಾಗಿ .

" ಅಪ್ಪ ಅವರೇ, ಕರಬಸಪ್ಪನವರು ಬಂದಿದ್ದರು"

" ಬಂದಿದ್ದರೆ ಒಳಗೆ ಕರೆಯುಬೇಕಿತ್ತು "

" ಇಲ್ಲ ಅಪ್ಪಾ ಅವರೆ ನಾವು ಅವರಿಗೆ ಒಳಗೆ ಬಿಡದೆ ಬಾಗಿಲಲ್ಲಿಯೇ ಹಿಂದಕ್ಕೆ ಕಳಿಸಿದೇವು. ಅವರು ತಾವು ತಂದ ಕಾಯಿ ಕರ್ಪೂರ ಹಿಂದಕ್ಕೆ ಕಳಿಸಿದೇವು. ಅವರು ತಾವು ತಂದೆ ಕಾಯಿ ಕರ್ಪೂರ ತಿಪ್ಪೆಗೆ ಭೀಟಿ ಹೊರಟು ಹೋದರು, ತಿಪ್ಪೆ ಧಗ ಧಗ ಉರಿಯುತ್ತಿವೆ! ಮನೆಗಳು ಉರಿಯುತ್ತಿವೆ" ಎಂದರು.

ಬುದ್ದಿಗೇಡಿಗಳೆ ಅವರು ಹಚ್ಚಿದ ಉರಿ ಅವರಿಂದಲೇ ಆರುತ್ತದೆ. ಆವರಿಗೆ ಕರೆದುಕೊಂಡು ಬರ್ರಿ" ಎಂದರು ರೇವಪಯ್ಯನವರು.

" ಕಾಗೆ ಕೈಯಲ್ಲಿ ಕಾರಭಾರು ಕೊಟ್ಟಂತಾಯಿತ;" ಎಂದು ಸೇವಕರಿಗೆ ಗದರಿಸಿ, ತಾವೇ ಬೆನ್ನುಹತ್ತಿ ಓಡಿ ಹೋಗಿ, ಅಡ್ಡಗಟ್ಟಿ ನಿಂತು ತಪ್ಪನ್ನು ಕ್ಷಮಿಸಿರಿ ಮಹಾತ್ಮರೇ !" ಎಂದು ಸಾಷ್ಟಾಂಗ ಹಾಕಿದರು.

" ನಡೆಯಿರಿ ನೀವು ಬಂದ ಮೇಲೆ ಬಲ್ಲೆನೆನ್ನಲು ಆಗಲಾರದು" ಎಂದು ಹೇಳಿ ವಾಪಸಾದರು.

ರೇವಪ್ಪಯ್ಯನವರು ದಿಗಂಬರ ಕರಿಬಸವೇಶ್ವರ ಮುತ್ಯಾ ಅವರ ಪಾದ ಪೂಜೆ ಮಾಡಿ ನಮಸ್ಕರಿಸಿ ಕಳಿಸಿ ಕೊಟ್ಟರು. ಹೀಗಿತ್ತು ಮಹಾತ್ಮರ ಪರಸ್ಪರ ಸಂಬಂಧ ಆಗಿನ ಕಾಲದಲ್ಲಿ ಊರೆಲ್ಲ ಹೊತ್ತಿದ ಉರಿಯು ನೀರಿಲ್ಲದೇ ಆರಿ ಹೋಯಿತು ಮುತ್ಯಾನ ಕೃಪೆಯಿಂದ.

ಮಾಣಿಕ ಪ್ರಭು ಮಹಾರಾಜರೂ ಬಂದರು :-

ದಿವಂಗತ ವ್ಯೆಂಕಟರಾವ ಕುಲ್ಕರ್ಣಿಯವರ ಹೇಳಿದಂತೆ ಸಮಕಾಲೀನವರಾದ ದಿಗಂಬರ ಕರಿಬಸವೇಶ್ವರ ಮುತ್ಯಾ ಅವರಿಗೂ ಮಾಣಿಕ ಪ್ರಭು ಮಹಾರಾಜರಿಗೂ ಬಹಳ ಗಾಢ ಸಂಬಂಧಿವಿತ್ತಂತೆ ! ಅವರ ಪರಸ್ಪರ ಒಳಗಣ್ಣುಗಳು ಪರಸ್ಪರರ ಆಗಮನವನ್ನು ಸೂಚಿಸುತ್ತಿದ್ದವಂತೆ ! ಹೀಗಾಗಿ ಅವರು ಭೇಟಿ ಯಾದಾಗೊಮ್ಮೆ ಹಾದಿ ಬೀದಿಯಲ್ಲಿದ್ದರೂ, ನೇರ ಒಬ್ಬರನ್ನೊಬ್ಬರು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದರಂತೆ ದಿಗಂಬರ ಕರಿಬಸವೇಶ್ವರ ಮುತ್ಯಾ ಮಾಣಿಕ ನಗರದ ದರಬಾರ ಹಾಲಿಗೆ ತಾವಾಗಿ ಹೋಗುತ್ತಿದಿಲ್ಲ. ಆದರೆ ಮಾಣಿಕ ಪ್ರಭು ಮಹಾರಾಜರು ಮುತ್ಯಾ ಅವರ ಗುಂಪಕ್ಕೆ, ತಾವೇ ಬರುತ್ತಿದ್ದರು ಅವರು ಬರುವ ಮುನ್ನವೇ.

"ಮಡ್ಯಾ, ಯಂಕೀ, ಇವೋತ್ತು ಮಾಣಿಕ ಪ್ರಭು ಮಹಾರಾಜರು ಬರ್ತಾರ ನೋಡ್ರಿ" ಎಂದು ಮುತ್ಯಾ ಅವರು ಸೂಚನೆ ಕೊಡುತ್ತಿದ್ದರು ಮಹಾರಾಜರು ಬರುವರೆಂದು ಮುತ್ಯಾ ಅವರಿಗೆ ಅಂತರಂಗದ ಉಲ್ಲಾಸ, ಮಹಾರಾಜರು ಊರಿಂದ ಗುಂಪಾವರೆಗೆ ನಡೆದುಕೊಂಡೇ ಬರುತ್ತಿದ್ದರು. ಅವರು ಬಂದದ್ದೇ ತಡ ಇಬ್ಬರೂ ಒಬ್ಬರಿಗೊಬ್ಬರು ಪಾದ ಮುಟ್ಟಿ ನಮಸ್ಕರಿಸುತ್ತಿದ್ದರು. ಆ ಮೇಲೆ ಪದ್ಮಾಸನ ಹಾಕಿ

ಎದುರು ಬದುರು ಕುತು ಒಬ್ಬರ ಕಣ್ಣಿಲ್ಲಿ ಮತ್ತೊಬ್ಬರು ಕಣ್ಣಿಟ್ಟು ಪರಸ್ಪರ ಪರಕಾಯ ಪ್ರವೇಶವಾಗುತ್ತಿದ್ದರು.

ಐದು ನಿಮಿಷ, ಹತ್ತು ನಿಮಿಷ, ಅರ್ಧ ತಾಸು, ತಾಸು, ಐದು ತಾಸು ಎಂಬ ನಿರ್ಬಂಧವಿಲ್ಲದೆ ಇಬ್ಬರೂ ನೋಡುತ್ತಲೇ ಕುಂತಿರುತ್ತಿದ್ದರು. ಪರಸ್ಪರ ತೃಪ್ತಿಯಾದಾಗ, ಆಸನ ಬಿಟ್ಟು ಎದ್ದು, ಮತ್ತೆ ಒಬ್ಬರಿಗೊಬ್ಬರು ಪಾದ ಮುಟ್ಟಿ ನಮಸ್ಕರಿಸುತ್ತಿದ್ದರು ಆ ಮೇಲೆ ಮಾಣಿಕಪ್ರಭು ಮಹಾರಾಜರು ವಾಪಸ್ಸಾಗುತ್ತಿದ್ದರು. ಅವರಿಬ್ಬರಲ್ಲಿ ದೊಡ್ಡವ ಸಣ್ಣವ ಎಂಬ ಭೇದ ಇರುತ್ತಿದಿಲ್ಲ ದಿವ್ಯಂಬರದವರಿರಲಿ, ದಿಗಂಬರರಿಲಿ ಮಹಾತ್ಮರಲ್ಲಿ ಕೀಳು ಮೇಲೆಂಬುದಿರುವುದಿಲ್ಲೆಂಬುದಕ್ಕೆ ಇದು ಉತ್ತಮ ಸಾಕ್ಷಿಯಾಗಿದೆ.

ಈ ಲೀಲೆಯನ್ನು ಗ್ರಾಮದ ಹಿರಯ ವ್ಯಕ್ತಿಯಾದ ದಿವಂಗತ ವೆಂಕಟರಾವ ಕುಲಕರ್ಣಿಯವರು ತಿಳಿಸಿದ್ದಾರೆಂದು ಡಾಃ ಎಮ್.ಎಸ್. ಲಠ್ಠೆಯವರು ದಿಗಂಬರ ಕರಿಬಸವೇಶ್ವರ ಕೃತಿಯಲ್ಲಿ ಉಲ್ಲೇಖಿಸಲಾಗಿದೆ.

ಮುತ್ಯಾ ಅವರು ತೀರ್ಥ ಯಾತ್ರೆಗೆ ಹೊರಟರು :-

ಮುತ್ಯಾ ಅವರಿಗೆ ಸಮಗ್ರ ಭಾರತ ಯಾತ್ರಿಯ ಇಚ್ಚೇಯಾಯಿತು ಕಾಲ್ನಡಿಗೆಯಲ್ಲಿ ಇಡೀ ಅಖಂಡ ಭಾರತದ ಪರ್ಯಟನ ಮಾಡುವುದು ಸಮ್ಮನಿಲ್ಲ ಮೇಲಾಗಿ ದಿಗಂಬರರಾಗಿ ಯಾವ ಪೂರ್ವ ಸಿದ್ಧತೆ ! ಸಾಮಾನು ಸರಂಜಾಮು ಇಲ್ಲದೆ ಈ ಸಂದರ್ಭದಲ್ಲಿ ದಿಗಂಬರೆಯಾಗಿ ಪರ್ಯಟನೆ ಹೊರಟ ಅಕ್ಕಮಹಾದೇವಿಯ ವಚನ ನೆನಪಾಗುತ್ತದೆ.

" ಹಸಿವಾದೊಡೆ ಭಿಕ್ಷಾನ್ನುಗಳುಂಟ ;
ತೃಷೆಯಾದೊಡನೆ ಕೆರೆ – ಹಳ್ಳ – ಬಾವಿಗಳುಂಟು ;
ಶಯನಕ್ಕೆ ಹಾಳು ದೇಗುಲಗಳುಂಟ ;
ಆತ್ಮ ಸಂಗಾತಕ್ಕೆ ಚೆನ್ನ ಮಲ್ಲಿಕಾರ್ಜುನ
ನೀನೆನಗುಂಟು" -೯

ಮೇಲಾಗಿ ದಿಗಂಬರ ಕರಿಬಸವೇಶ್ವರ ಮುತ್ಯಾ ಅವರಿಗೆ ಹಸಿವು, ತೃಷೆ, ಶಯನಗಳು ಕಾಡುತ್ತಲೇ ಇರಲಿಲ್ಲ. ಆತ್ಮ ಸಂಗಾತಕ್ಕೆ ಪರಶಿವನ ನೆನಹು ಮಾತ್ರ ಎಲೆ ಮರೆಯ ಕಾಯಂತೆ ಅಂತರಂಗದಲ್ಲಿ ನೆಲೆಸಿತು. ಒಂದು ದಿನ ಮುತ್ಯಾ ಅವರು ತಮ್ಮ ಶಿಷ್ಯರಿಗೆ.

"ಯಂಕೀ, ಮಡ್ಯಾ ನಾವೀಗ ತೀರ್ಥ ಯಾತ್ರಕ್ಕೆ ಹೊರ್ಟೀವಿ. ನೀವಿಬ್ರೂ ನಾವು ಬರಾತನಕ ಇಲ್ಲೇ ಇರ್ರಿ, ಗುಪ್ಪಾ, ಘುಡ್ಸೀ, ಗುಡಿ ಕಟ್ಟಾ ಗೋಜಿಗಿ ಹೋಗುಬ್ಯಾಡ್ರಿ ಕಟ್ಟಿದ್ದು ಯಾವಾದೂ ಉಳ್ಯಾಂಗಿಲ್ಲ" ಎಂದು ಹೇಳಿದರು.

" ಮತ್ತೇ ಯಾವಾಗ ವಾಪಸು ಬರುವಿರಿ ಗುರುವೇ" ಇಬ್ಬರ ಪ್ರಶ್ನೆಒಂದೇ ಸಲಕ್ಕೆ ಬಂದಿತ್ತು.

" ಭಾರತ ಸಂಚಾರ ಮುಗಿಯುವವರೆಗೆ ಬರಲಾರೆವು ಅದಲ್ಲದೆ ಬರುವ ಹೋಗುವ ಶಕ್ತಿ ನಮಗೆಲ್ಲಿಯಿದು? ಅವನಿಚ್ಚೇಯಂತೆ ಎಲ್ಲ ನೆರವೇರುವುದು" ಎಂದರು.

ಮುತ್ಯಾ ಅವರು ಹೊರಟೇ ಬಿಟ್ಟರು ಪರಳಿ, ಉಜ್ಜೇನಿ, ಸೋಮನಥೇಶ್ವರ, ಕಾಶೀ, ಕೇದಾರ, ಬದರಿ, ಶ್ರೀಶೈಲ, ಹಂಪಿ, ಗೋಕರ್ಣ, ರಾಮೇಶ್ವರ, ಕೂಡಲಸಂಗಮ ಇತ್ಯಾದಿಗಳ ಪ್ರಯಾಣ ಪಾದಯಾತ್ರೆಯಿಂದ ಮುಗಿಸಲು ಹಲವು ವರ್ಷಗಳೇ ಗತಿಸಿದವು.

ದಿಗಂಬರ ಕರಿಬಸವೇಶ್ವರ ಮುತ್ಯಾ ಲಿಂಗೈಕ್ಯರಾದರು :-

ಹುಬ್ಬಳ್ಳಿಯ ಸಿದ್ದಾರೂಢ ಸ್ವಾಮಿಯವರ ಹುಟ್ಟೂರು ಭಾಲ್ಕಿ ತಾಲೂಕಿನ ಚಳಕಾಪೂರ ಗ್ರಾಮವೇ ಅದರಂತೆ ದಿಗಂಬರ ಕರಿಬಸವೇಶ್ವರ ಮುತ್ಯಾ ಅವರು ಕೂಡಾ ಚಳಕಾಪೂರದಲ್ಲಿ ಹುಟ್ಟಿದವರೇ, ಅಲ್ಲಿಂದಲೇ ಹುಡಗಿ ಗ್ರಾಮದ ಹೀರೆಮಠದ ಪಟ್ಟಾಧೀಶರಾಗಿ ಬಂದವರು, ಸಿದ್ದಾರೂಢರು ಶುದ್ಧ ಸಿದ್ಧ ಯೋಗಿಗಳು, ಆರೂಢಿರು. ದಿಗಂಬರ ಕರಿಬಸವೇಶ್ವರ ಮುತ್ಯಾ ಅವರು ಕೂಡ ಆರೂಢಿ ಮಾರ್ಗದವರೇ.

ಬೀದರ ಜಿಲ್ಲೆಯಲ್ಲಿಯ ಕರಿಬಸವೇಶ್ವರರ ಸಮಕಾಲಿನ ಸತ್ಪುರುಷರೆಲ್ಲ ಶರೀರ ಸಮಾಧಿಯನ್ನು ಸ್ವಿಕರಿಸಿದವರು. ಅಂದರೆ ಇಚ್ಚಾ ಮರಣಿಗಳಾಗಿದ್ದರು ಮಡನೂರಿನ ಸಿದ್ದಲಿಂಗೇಶ್ವರರು, ಪ್ರಭುನಕಟ್ಟಿಯ ಮಾಣಿಕ ಪ್ರಭುಗಳು ಹೇಳಿ ಕೇಳಿ ಶರೀರ ಬಿಟ್ಟವರು, ಅಂದರೆ ಸಮಾಧಿ ಸ್ವಿಕರಿಸಿದವರು ಅದರಂತೆ ಮುತ್ಯಾ ಅವರು ಕೂಡ ಇಚ್ಚಾ ಮರಣವನೇ ಅನುಸರಿಸಿದರು. ಅದಕ್ಕಾಗಿ ಹುಡಗಿ ಗ್ರಾಮದ ಮಧ್ಯದಲ್ಲಿರುವ ರಾಮಲಿಂಗೇಶ್ವರ ದೇವಾಲಯವನ್ನು ಆಯ್ಕೆ ಮಾಡಿಕೊಂಡರು.

ದಿಂಗಬರ ಕರಿಬಸವೇಶ್ವರ ಮುತ್ಯಾ ಅವರು ರಾಮಲಿಂಗೇಶ್ವರ ದೇವಾಲಯದ ಪೂಜಾರಿ ಬಾಳಯ್ಯನವರನ್ನು ಕರೆದು, ನಾವು ಈ ದೇವಾಲಯದಲ್ಲಿ ಯೋಗಾ ರೂಢರಾಗಿರುತ್ತೇವೆ. ಏಳು ದಿನಗಳ ವರೆಗೆ ಬಾಗಿಲು ತೆಗೆಯಬಾರದು. ಬಾಗಿಲಿಗೆ ಬೀಗ ಹಾಕಿ ಅದರ ಕೈ ನಿನ್ನ ಹತ್ತಿರ ಇಟ್ಟುಕೊ, ಬೇರೆ ಯಾರಿಗೂ ಕೂಡ ಗುಡಿಯ ಬಾಗಿಲು ತೆರೆಯಗೊಡದಂತೆ ನೋಡಿಕೋ, ತೆರೆದರೆ ಅನರ್ಥವಾಗುವುದು ಎಂದು ಗುಡಿಯ ಒಳಗೆ ಪ್ರವೇಶಿಸಿದರು. ಬಾಗಿಲಿಗೆ ಪೂಜಾರಿ ಬೀಗ ಜಡಿದು ಕಾವಲು ಕುಳಿತನು. ಮುತ್ಯಾ ಅವರು ಗರ್ಭಗುಡಿಯಲ್ಲಿ ಯೋಗರೂಢರಾದರು.

ಒಂದು ದಿನ ಕಳೆಯಿತು.

ಎರಡು ದಿನ ಕಳೆಯಿತು.

ಮೂರು ದಿನ ಮುಗಿದವು.

ನಾಲ್ಕನೆಯ ದಿನವೂ ಮುಗಿಯಿತು.

ಐದನೆಯ ದಿನವೂ ಬಂತು. [-೧೦]

ಮುತ್ಯಾ ಅವರ ಸುಳಿವಿಲ್ಲ. ಸಪ್ಪಳವಿಲ್ಲ ಬಳಗೆ ಹೋಗಿ ಶಾಂತರಾದವರು ಒಮೆಯೂ ್ಪ ಕೆಮ್ಮಿಲ್ಲ ತಟ್ಟಿ ತೆರಿ ಅಂದಿಲ್ಲ, ಊಟ ತಿಂಡಿ ಇಲ್ಲ, ನೀರು ನೀಡಿ ಎಂದಿಲ್ಲ, ದೀರ್ಘ ಮೌನವೆಂದು ಅಲ್ಲಿತ್ತು. ಶಬ್ದವು ನಿಶ್ಯಬ್ದದಲ್ಲಿ ದೀಣವಾಗಿತ್ತು.

ಪೂಜಾರಿ ಗಾಬರಿಯಾದನು ಅವರವರಿಗೆ ಕೇಳಿದನು. ಯಾರಿಗೂ ಏನು ಹೊಳೆಯಲಿಲ್ಲ. ಅವನಿಗೂ ಏನೂ ತೋಚಲಿಲ್ಲ, ಅವನು ತನ್ನಷ್ಟಕ್ಕೆ ತಾನು ನಿರ್ಧಾರ ಮಾಡಿ ಬೀಗ ತೆಗೆದು ಧಡಕ್ಕನೆ ಬಾಗಿಲು ತೆರೆದನು. ದಿಗಂಬರ ಕರಿಬಸವೇಶ್ವರ ಮುತ್ಯಾ ಅವರ ಸಮಾಧಿ ಭಂಗವಾಯಿತು. ಕಣ್ಣು ತೆರೆದ ಮುತ್ಯಾ ಅವರು.

"ಪುಜಾರಿ ಇದೆಂಥ ಅನರ್ಥ ಮಾಡಿದೆ" ಎಂದರು.

" ಅಪ್ಪಾ ಅವರೇ ಐದು ದಿನ ಆಯಿತು, ಉಂಡಿಲ್ಲ, ತಿಂದಿಲ್ಲ ಏನಾಯಿತೋ ನಿಮಗೆಂದು ನಾನೇ ಬಾಗಿಲು ತೆಗೆದೆ ಕ್ಷಮಾ ಮಾಡ್ರಿ ಮುತ್ಯಾ" ಎಂದ ಪೂಜಾರಿ ಆಗ ಮುತ್ಯಾ ಅವರು ಅವನಿಗೆ.

" ನಾನು ಈ ಹುಟ್ಟು ಸಾವಿನ ಬಂಧನದಿಂದ ಬಿಡುಗಡೆ ಹೊಂದಬೇಕೆಂದಿದ್ದೆ ಆದರೆ ನೀನು ನನಗೆ ಮರುಹುಟ್ಟು ಬರುವಂತೆ ಮಾಡಿದೆ. ನಾನು ಎಷ್ಟು ಜನ್ಮ ತಾಳಿ ಬರುತೀನೋ, ಅಲ್ಲಿಯವರೆಗೆ ನಿನ್ನ ಮನೆತನಕ್ಕೆ ಸಂತಾನ ಲಭ್ಯವಿಲ್ಲದಂತಾಗಲಿ" ಎಂದು ಮುತ್ಯಾ ಅವರು ಕಿಡಿ ಕಾರಿದರು ಪೂಜಾರಿ ಗಡಗಡ ನಡುಗಿದ (ಪೂಜಾರಿ ಮನೆತನಕ್ಕೆ ಸಂತಾನವಿಲ್ಲದುದು ಈಗ ಇತಿಹಾಸದ ಸತ್ಯಸಂಗತಿ) [-೧೧]

ರಾಮಲಿಂಗೇಶ್ವರ ದೇವಾಲಯದಿಂದ ಹೊರಗಾದ ದಿಗಂಬರ ಕರಿಬಸವೇಶ್ವರ ಮುತ್ಯಾ ಅವರು ತಮ್ಮಲ್ಲಿ ತಾವು ಉಳಿದು ಯಾವುದಕ್ಕೂ ಪ್ರತಿಕ್ರಿಯೊಸದಾದರು. ಇನ್ನು ಹತ್ತು ದಿನಗಳಲ್ಲಿ ನಾವು ಈ ಶರೀರವನ್ನು ತ್ಯಜಿಸುತ್ತೇವೆ, ನನ್ನ ಪಾರ್ಥಿವ ಶರೀರಕ್ಕೆ ಯಂಕಮ್ಮ ಮಡಿವಾಳಪ್ಪ ಇರುವ ಈ ಗುಂಪಾದಲ್ಲೇ ಸಮಾಧಿ ಮಾಡಿರಿ. ನನ್ನ ಮಾತಿಗೆ ಮೀರಿ ನನ್ನ ಸಮಾಧಿಯನ್ನು ಇನ್ನೇಲ್ಲೆ ಮಾಡಿದರೂ, ನನ್ನ ಆತ್ಮ ಸುಳಿಯುವುದು ಈ ಆಶ್ರಮ (ಗುಂಪಾ) ದಲ್ಲಿ ಮಾತ್ರ. ಊರು ಹಿರಿಯರಿಗೆ ಈ ಮಾತು ತಿಳಿಸಿರಿ ಎಂದು ಯಂಕಮ್ಮ ತಾಯಿ ಹಾಗೂ ಮಡಿವಾಳಪ್ಪನವರಿಗೆ ತಿಳಿಸಿದರು [-೧೨] ಆ ಮೇಲೆ ಮೌನ ತಾಳಿದವರು ಮಾತೇ ಆಡಲಿಲ್ಲ. ಜನರು ಒಂದು ಎರಡು ಮೂರು ದಿನಗಳ ಎಣಿಕೆಯಲ್ಲಿ ತೊಡಗಿದರು.

ಸುತ್ತಮುತ್ತಲಿನ ಹಳ್ಳಿ ಪಟ್ಟಣಗಳಿಂದ ಭಕ್ತ ಮಂಡಳಿ ಭಜನೆ ಮಂಡಳಿಗಳು ಸಾಲು ಸಲಾಗಿ ಬರತೋಡಗಿದ್ದವು, ಹತ್ತಾನು ಹತ್ತು ದಿನಗಳು, ದಿಗಂಬರ ಕರಿಬಸವೇಶ್ವರ ಮುತ್ಯಾ, ಯಂಕಮ್ಮ ತಾಯಿ, ಮಡಿವಾಳಪ್ಪನವರ ಈ ಅವಿಮುಕ್ತ ಕ್ಷೇತ್ರವು ತೀರ್ಥಕ್ಷೇತ್ರವಾಗಿ ಮುತ್ಯಾ ಅವರ ಅಂತಿಮ ಯಾತ್ರೆಯಲ್ಲಿ ಶಿವನಮ ಸ್ಮರಣೆಯು ನಿರಂತರಗೊಂಡಿತು.

ಹತ್ತನೆಯ ದಿನವು ಬಂದಿತು ಮುತ್ಯಾ ಅವರು ಯೋಗರೂಢವಾದವರು ಅಲ್ಲಾಡಲಿಲ್ಲ ಓಂ ನಮಃ ಶಿವಾಯ ಓಂ ನಮಃ ಶಿವಾಯ ಮಂತ್ರವು ಗಗನ ವ್ಯಾಪ್ತಿಯಾಗುತ್ತಿರುವಂತೆ ಮುತ್ಯಾ ಅವರ ಪಾರ್ಥಿವ ಶರೀರದಿಂದ ಅಗಲಿ ಆಕಾಶ ದೊಳಗಾದರು.

ದಿಗಂಬರ ಕರಿಬಸವೇಶ್ವರ ಮಹಾರಾಜ ಕೀ ಜಯ !

ಮಡಿವಾಳೇಶ್ವರ ಮಹಾರಾಜ ಕೀ ಜಯ !

ಯಂಕಮ್ಮ ಮಾತಾಕೀ ಜಯ ! [-೧೩]

ದಿಂಗಬರ ಕರಿಬಸವೇಶ್ವರ ಲಿಂಗದೋಳಗಾದ ಸುದ್ದಿ ಊರು ಕೇರಿ ಸುತ್ತಣ ಹಳ್ಳಿ ಪಟ್ಟಣಗಳಿಗೆಲ್ಲ ಮುಟ್ಟಿತು.

ಊರು ಹಿರಿಯರು ಬಂದರು ಹಿರೇಮಠ ಹುಡುಗಿಯ ಜನರು ಬಂದರು. ಊರಲ್ಲಿಯ ಮಠದ ಶಿಷ್ಯರು ಬಂದರು. ಮಠದವರು ಮುತ್ಯಾ ಅವರ ಸಮಾಧಿ ಹಿರೇಮಠದಲ್ಲಿ ಮಾಡುತ್ತೇವೆ ಎಂದರು .

"ಮುತ್ಯಾ ಅವರ ಸಮಾಧಿ ನಮ್ಮ ಮಠದಲ್ಲಿ ಆಗಬೇಕು ಬೇರೆ ಕಡೆ ಆಗಬಾರದು ಎಂದು ಮಠದ ಶಿಷ್ಯರು ಹಟ ಹಿಡಿದರು, ಅದರಂತೆ ಮುತ್ಯಾ ಅವರ ಪಾರ್ಥಿವ ಶರೀರವನ್ನು ಹುಡುಗಿ ಗ್ರಾಮದ ಹಿರೇಮಠಕ್ಕೆ ಸಾಗಿಸಿ, ಅಲ್ಲಿಯೇ ಸಮಾಧಿಸ್ತಗೊಳಿಸಲಾಯಿತು. ಕಾಲಾಂತರದಲ್ಲಿ ಮುತ್ಯಾ ಅವರ ಸಮಾಧಿಯ ಸುತ್ತಗುಡಿ ಕಟ್ಟಲಾಯಿತು. ಆ ಮೇಲೆ ಗರ್ಭಗುಡಿಯ ಮುಂದೆ ಭವ್ಯ ಮಂಟಪವನ್ನು ಕಟ್ಟಲಾಯಿತು.

ಇತ್ತ ಊರ ಹೊರಗಿನ ಆಶ್ರಮ (ಗುಂಪಾ)ದಲ್ಲಿ ದಿಗಂಬರ ಕರಿಬಸವೇಶ್ವರ ಮುತ್ಯಾ ಅವರ ಹೆಸರಿನಲಿ ಗದ್ದುಗೆಯೊಂದನ್ನು ನಿರ್ಮಿಸಲಾಯಿತು. ಈ ಗದ್ದುಗೆಯ ಮೇಲೆ ,ಮುತ್ಯಾ ಅವರ ಜೀವಿತಾವಧಿಯಲ್ಲಿಯೇ ತಂದಿರಿಸಲಾದ ಕಂಚಿನ ಮೂರ್ತಿಯನ್ನು ಸ್ಥಾಪಿಸಿ ಮುತ್ಯಾ ಅವರು ಇಲ್ಲೇ ಇದ್ದಾರೆ ಎಂದು ಭಾವಿಸಿದರು. ಎಲ್ಲಿ ಭಕ್ತರೋ ಅಲ್ಲಿ ದೇವರು ಎಂಬಂತೆ ಊರ ಹೊರಗಿನ ಆಶ್ರಮ (ಗುಂಪಾ)ವು ಭಕ್ತಿಯ ತೌರಗತೊಡಗಿತು. ಪಾಪ ಪರಿಹಾರದ ಕೇಂದ್ರವಾಗಿ ಕಂಗೊಳಿಸತೊಡಗಿತು.

ಯಂಕಮ್ಮ ತಾಯಿ :–

ಹುಡುಗಿ ಗ್ರಾಮದಲ್ಲಿ ಬರುವ ಇನ್ನೊಂದು ಪ್ರಮುಖ ದೇವಸ್ಥಾನವೆಂದರೆ, ಯಂಕಮ್ಮ ತಾಯಿಯ ದೇವಸ್ಥಾನ ಮೂಲತಃ ಯಂಕಮ್ಮ ತಾಯಿಯವರು ಹುಮನಾಬಾದ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದವರು, ಆ ಊರಿನಲ್ಲಿ ಯಂಕಮ್ಮ ತಾಯಿಯವರ ಜನನವಾಯಿತು. ಅವರ ತಾಯಿ ತಂದೆಯವರು ಕುಂಬಾರ ಚಿಂಚೋಳ್ಳಿಯವರು. ಯಂಕಮ್ಮ ತಾಯಿಗೆ ಇಬ್ಬರು ಮಕ್ಕಳಿದ್ದರು, ಯಂಕಮ್ಮ ತಾಯಿಯ ಮನೆತನದವರು ಫಂಢರಿನಾಥನ ಭಕ್ತರಾಗಿದ್ದರು, ಮಾವ ಸನ್ಮಾರ್ಗಿಯಾಗಿದ್ದರು. ಮನೆತನದ ಪದ್ದತಿಯಂತೆ ಯಂಕಮ್ಮ ಸದ್ಭಕ್ತಳಾಗಿ ನಡೆದುಕೊಂಡುಳು. ಆದಕ್ಕೆ ಕೆಲವೇ ವರ್ಷಗಳಲ್ಲಿ ಅವರ ದಾಂಪತ್ಯವು ವಿರಸದಿಂದ ಹದಗೆಟ್ಟಿತು. ಇಂಥ ಪ್ರಸಂಗದಲ್ಲಿಯೇ, ಆಧ್ಯಾತ್ಮದ ಆಶ್ರಯದಾತ ಮಾವ ತೀರಿಕೊಂಡರು. ಇದರಿಂದ ಯಂಕಮ್ಮನವರು ದಿಗ್ಭಾಂತರಾದರು.

ತಲೆಯಲ್ಲಿ ಡೋಗಿ ಹುಣ್ಣು ಆಯಿತು. ಅದರ ಭಾದೆಯಿಂದ ಜರ್ಜರಿತರಾದ ಯಂಕಮ್ಮ ತಾಯಿಯವರಿಗೆ ಕೆಲ ದಿನಗಳಲ್ಲೇ ಕೈಗಳಿಗೆಲ್ಲಾ ಹುಣ್ಣುಗಳಾಗಿ ಬೆರಳುಗಳು ಕಿತ್ತಿ ಬೀಳುವಂತಾದವು. ಊರು ಸಾಕಾಯಿತು, ಗೌಡನೂ ಬೇಡವೆಂದ ಎಂಬಂತೆ ಯಂಕಮ್ಮ ತಾಯಿಯವರು ಮನೆಯಿಂದ ಹಾಗು ಹೇಸಿ ಜೀವನದಿಂದ ಬೇಸರಗೊಂಡರು, ಇದೇ ದಿನಗಳಲ್ಲಿ ಅವರಿಗೆ ದಿವ್ಯ ಮೂರ್ತಿ ದಿಗಂಬರ ಕರಿಬಸವೇಶ್ವರ ಮುತ್ಯಾ ಅವರ ಲೀಲೆಗಳ ಬಗ್ಗೆ ಗೋತ್ತಾಯಿತು. ಇನ್ನೂ ಇಲ್ಲಿ ನಿಲ್ಲಬಾರದೆಂದು ಹುಡುಗಿ ಗ್ರಾಮಭಿಮುಖವಾಗಿ ಹೊರಟೇ ಬಿಟ್ಟರು. ಯಂಕಮ್ಮ ತಾಯಿ.

ಇತ್ತ ಕರಿಬಸವೇಶ್ವರ ಮುತ್ಯಾ ಅವರ ಒಳಗಣ್ಣಿಗೆ ಯಂಕಮ್ಮ ತಾಯಿಯ ಆಗಮನದ ಸುಳುವು ಸಿಕಿತು. ಅವರು ಧುನಿಯ ಸುತ್ತಾಕುಳಿತು ಜನರಿಗೆ ಹೇಳಿದರು.

" ಇವತ್ತು ಯಂಕಮ್ಮ ಬರುತಾಳೆ!"

" ಯಾವಾ ಯಂಕಮ್ಮ ಮುತ್ಯಾ?"

ದೊಡ್ಡ ಹಳ್ಳಿಖೇಡದ ಯಂಕಮ್ಮ ಮಹಾ ಭಕ್ತಿವಂತೆ!

ಆದರೂ ಬರೆಗಿಕ್ಕದೆ ಆಕೆಯನ್ನು ಸ್ವಿಕರಿಸಲಾರೆ"

" ಎಂಥಾ ಬರೆಗಲ್ಲು ಮುತ್ಯಾ"

"ನೀವೇ ನೊಡುವಿರಿ!" – ೧೪

ಒಂದೆರಡು ತಾಸು ಕಳೆವುದರಲ್ಲಿ ಯಂಕಮ್ಮ ತಾಯಿ ಬಂದೇ ಬಿಟ್ಟರು, ಅಲ್ಲಮ ಪ್ರಭುವಿನೆದುರು ಅಕ್ಕ ಮಹಾದೇವಿ ಬಂದಂತೆ ! ಅವಳು ಮೈಮನ ಎರಡ

ರಿಂದ ಬೆತ್ತಲೆ ; ಇವಳು ಮನಸ್ಸಿನಿಂದ ಬತ್ತಲೆ ಮೈಯಿಂದ ಬತ್ತಲೆಯಾಗುವುದು ಉಳಿದಿತ್ತು.

" ಯಾರು ನೀನು ? ಮುತ್ಯಾ ಕೇಳಿದರು.

ನಾನು ದೊಡ್ಡ ಹಳ್ಳಿಖೇಡದಿಂದ ಬಂದ ಯಂಕಮ್ಮ!"

" ಯಾಕ ಬಂದಿ ?"

ಸಂಸಾರ ಸಾಕಾಯ್ತು ! ಎಲ್ಲಿ ಬಿಟ್ಟು ಬಂದೆ !"

" ಏನೆಲ್ಲ ಬಿಟ್ಟು ಬಂದೆ!"

" ಸಂಸಾರ ಮೋಹ ಬಿಟ್ಟು ಬಂದೆ !"

" ಶರೀರ ಮೊಹ !" ಮುತ್ಯಾ ಅವರ ಪ್ರಶ್ನೆ!

ಅದನ್ನು ಬಿಟ್ಟಿದ್ದೇನೆ !"

ಹಾಗಾದರೆ ಕಳೆದು ಒಳಗೆ ಉಟ್ಟ ಸೀರೆ ಕುಬಸ ಈ ಧುನಿಯಲ್ಲಿ"

" ಆಗಲಿ ಗುರವೇ" ಎಂದು ನುಡಿದ ಯಂಕಮ್ಮಾ ಲಜ್ಜೆ ನಾಚಿಕೆಗಳಿಗೆ ಕಿಂಚಿತ್ತು ಅವಕಾಶವನ್ನು ಕೊಡದೆ, ಭರಭರನೆ ಸೀರೆ ಕಳೆದಳು, ಕುಪ್ಪಸ ಕಳೆದಳು ಧುನಿಯಲ್ಲಿ ಹಾಕಿ ಸುಟ್ಟು ಭೂದಿ ಮಾಡಿದಳು, ಧುನಿಯ ಭಸ್ಮವನ್ನು ಮೈಯೆಲ್ಲಾ ಬಳಿದುಕೊಂಡಳು ದಿಗಂಬರ ಕರಿಬಸವೇಶ್ವರ ಮುತ್ಯಾ ಒಂದು ಕ್ಷಣ ಸಂತುಷ್ಟಿಯಲ್ಲಿ ದಿಗ್ಭಾಂತರಾದರು.

" ವ್ಹಾ ಮಗಳೆ ಯಂಕಿ ನೀ ಗೆದ್ದೆ" ಎಂದರು ಮೈಮನ ಬತ್ತಲೆಯಾದ ನೀನು ದಿಗಂಬರೆ ಇರುವುದು ಬೇಡ ಸೀರೆ ಉಡು ಮಗಳೇ " ಎಂದರು ಯಂಕಮ್ಮ ಊರವರು ಕೊಟ್ಟ ಸೀರೆಯುಟ್ಟಳು, ಕರಿಬಸವೇಶ್ವರ ಮುತ್ಯಾ ಅವರು ಯಂಕಮ್ಮ ತಾಯಿಗೆ ಹಸ್ತ ಮಸ್ತಕ ಸಂಯೋಗ ಒದಗಿಸಿದರು, ಹೀಗಾಗಿ ನಮ್ಮ ಯಂಕಮ್ಮ ತಾಯಿ ಗುರುಮುಟ್ಟಿ ಗುರುತಾಯಿ ಆದಳು.

ಈ ಮೊದಲೇ ತಿಳಿಸಿದಂತೆ ಯಂಕಮ್ಮ ತಾಯಿಗೆ ಡೋಗಿ ಬೇನೆ ಇತ್ತು. ಅಲ್ಲದೆ ಕೈಗಳಿಗೆ ಹುಣ್ಣುಗಳಿದ್ದವು, ಮುತ್ಯಾ ಅವರು ಯಂಕಮ್ಮನ ತಲೆಯ ಮೇಲೆ ಕುಳ್ಳಿನ ಥಾಳಿ ಕಟ್ಟಿ ಉರಿ ಹಚ್ಚಿದರು. ಡೋಗಿ ಬೇನೆ ಹೇಳ ಹೆಸರಿಲ್ಲದಂತೆ ಮಾಯಾವಾಯಿತು. ಎರಡೂ ಕೈಗಳ ಮೇಲೆ ಕುಳ್ಳಿನ ಥಾಳೀ ಕಟ್ಟಿ ಉರಿ ಹಚ್ಚಿದರು. ಕೈಯ ಹುಣ್ಣುಗಳು ಕೂಡ ಯಂಕಮ್ಮನಿಂದ ದೂರ ಓಡಿದವು, ಈಗ ಯಂಕಮ್ಮ ತಾಯಿ ಚೊಕ್ಕ ಮುತ್ತಿನಂತೆ ಆದಳು ಮುತ್ಯಾ ಅವರ ನೆಚ್ಚಿನ ಶಿಶು ಮಗಳಾದಳು (ಶ್ರೀ ಗುರುಪಾದಪ್ಪಾ ಶಿವರಡ್ಡಿಯವರು ಯಂಕಮ್ಮ ಕರಿಬಸವೇಶ್ವರರ ಭೇಟ್ಟಿ ಚಾಳಕಾಪೂರಲ್ಲಿ ಆಯಿತೆಂದು ಹೇಳಿದ್ದಾನೆ).-೧೬

ಯಂಕಮ್ಮ ತಾಯಿಯವರೂ ಲಿಂಗೈಕ್ಯರಾದರು :-

ಮೂವರು ಮಹಾನುಭಾವರು ಪೂರ್ವ ನಿರ್ಧಾರಗೊಳಿಸಿದರೆನೋ ಎಂಬಂತೆ ಕೆಲವೇ ದಿನಗಳಲ್ಲಿ ಯಂಕಮ್ಮ ತಾಯಿಯವರು ಕೂಡ ಪಾರ್ಥಿವ ಶರೀರವನ್ನು ತೊರೆದು ಲಿಂಗದೊಳಗಾದರು ಅವರ ಸಮಧಿಯನ್ನು ಕರಿಬಸವೇಶ್ವರ ಮುತ್ಯಾ ಅವರ ಮೂರ್ತಿ ಸ್ಥಾಪನೆಯ ಬಲಭಾಗದಲ್ಲಿ ನೆರವೇರಿಸಲಾಯಿತು. ಇದರಿಂದಾಗಿ ಕರಿಬಸವೇಶ್ವರ ಮುತ್ಯಾ, ಯಂಕಮ್ಮ ತಾಯಿ ಹಾಗೂ ಮಡಿವಾಳಪ್ಪನವರು ನೆಲೆನಿಂತ ಈ ಜಾಗವು ಪವಿತ್ರ ತೀರ್ಥ ಕ್ಷೇತ್ರವೆಂಬಂತೆ ಜನಮನದಲ್ಲಿ ನೆಲೆ ನಿಂತಿತು.

ಕಾಲಾಂತರದಲ್ಲಿ ಈ ಮೂವರು ಸಮಾಧಿಗೊಂಡು ಜಾಗದಲ್ಲಿ ದೇವಾಲಯವೊಂದರ ಬುನಾದಿ ಹಾಕಲಾಯಿತು. ಮೂವರು ಮಹಾಪುರುಷರು ಬದುಕಿದ್ದಾಗ ತೊಡಲಾಗಿದ್ದ ಪುಷ್ಕರಣೆ (ಗಂಡ)ದ ಪೂರ್ವ ಮಗ್ಗುಲಿಗೆ ಗರ್ಭಗುಡಿಯು ಮೊದಲ ಹಂತಕ್ಕೆ ವಿರೋಧಿದಿಂದ ಪೂರ್ಣಗೊಳ್ಳದೆ ಹಾಗೇಯೇ ನಿಂತಿತು. ಪೋಲಿಸ್ ಆ್ಯಕ್ಷನ್ ನಂತರ ಗರ್ಭಗುಡಿಯೊಂದಿಗೆ ಭವ್ಯ ಮಂಟಪವೂ ಪೂರ್ಣಗೊಂಡು ಕಳಸವೇರಿ ಕಂಗೊಳಿಸ ತೊಡಗಿತು. ಈ ದೇವಾಲಯದ ರೂವಾರಿ ದಿವಂಗತ ಲಕ್ಷ್ಣ ಬಡಿಗೇರ ಆಗಿದ್ದಾರೆ. ಊರ ಹೊರಗಿನ ಹಿರಿಹಳ್ಳದ ದಂಡಿಯ ಮೇಲಿನ ಈ ದೇವಸ್ಥಾನವು ಸರ್ವ ಧರ್ಮ ಸಮನ್ವಯ ಕೇಂದ್ರವಾಯಿತು. ಜಾತಿ, ಮತ, ಪಂಥಗಳ ಭೇದ ವಿಲ್ಲದೆ ಎಲ್ಲರೂ ಈ ದೇವಾಲಯಕ್ಕೆ ಬಂದು, ಗುಂಡದಲ್ಲಿಯ ನೀರಿನಿಂದ ಮಿಂದು, ಮೂವರೂ ಮಹಾ ಪರುಷರು ದರ್ಶನ ಪಡೆದು, ತಮ್ಮ ಇಷ್ಟಾರ್ಥ ಸಿದ್ಧಿಯನ್ನು ಹೊಂದುತ್ತಾ ಸುಖಿಗಳಾಗ ತೊಡಗಿದರು .

ಈ ಮೇಲಿನ ಎಲ್ಲಾ ವಿಷಯಗಳನ್ನು ನೊಡಿದಾಗ ಹುಡಗಿ ಗ್ರಾಮವು ಸಹ ಒಂದು ಐತಿಹಾಸಿಕ ಮತ್ತು ಧಾರ್ಮಿಕ ಸ್ಥಳವಾಗಿದೆ ಎಂದು ತಿಳಿದು ಬರುತ್ತದೆ.

ಅಡಿ ಟಿಪ್ಪಣಿಗಳು :-

೧. ದೇಶಾಂಶ ಹುಡಗಿ, ದಿಗಂಬರ ಕರಿಬಸವೇಶ್ವರರು, ಪು.೨

೨. ಅದೇ. ಪು.೨

೩. ಅದೇ. ಪು.೩

೪. ಅದೇ. ಪು.೪

೫. ಅದೇ. ಪು.೬

೬. ಅದೇ. ಪು.೮

೭. ಅದೇ. ಪು.೧೧

೮. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ, ಶ್ರೀಮಾಣಿಕ ರತ್ನ , ಪು. ೩೬

೯. ಪೋರ್ವೋಕ್ತ, ಪು ೨೬

೧೦. ಅದೇ. ಪು.೩೨

೧೧. ಅದೇ. ಪು.೩೩

೧೨. ಅದೇ. ಪು.೩೩

೧೩. ಅದೇ. ಪು.೩೪

೧೪. ಅದೇ. ಪು.೦೯

೧೫. ಅದೇ. ಪು.೧೦

೧೬. ಅದೇ. ಪು.೧೧

ಆದಾರ ಗ್ರಂಥಗಳು :-

೧. ದಿಗಂಬರ ಕರಿಬಸವೇಶ್ವರರು – ದೇಶಾಂಶ ಹುಡಗಿ

೨. ಹುಮನಾಬಾದ ತಾಲೂಕ ದರ್ಶನ – ಡಾಃ ಸೋಮನಾಥ ಯಳವಾರ

೩. ಮಾಣಿಕ ರತ್ನ – ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ

೪. ಹುಮನಾಬಾದ ತಾಲೂಕಾ ಪರಿಚಯ – ಎಚ್. ಕಾಶಿನಾಥ ರಡ್ಡಿ .



ಯಂಕಮ್ಮ ದೇವಸ್ಥಾನದ ಹೊರಾಂಗಣದ ನೋಟ, ಗ್ರಾಮ: ಹುಡಗಿ



ಕರಿಬಸವೇಶ್ವರ, ಯಂಕಮ್ಮ, ಮಡಿವಾಳಪ್ಪನವರ ಮೂರ್ತಿಗಳು





ಚಿಟಗುಪ್ಪಾ

ಹುಮನಾಬಾದ ತಾಲೂಕಿನಲ್ಲಿ ಬರುವ ಐತಿಹಾಸಿಕ ಸ್ಥಳಗಳಲ್ಲಿ ಚಿಟಗುಪ್ಪ ಪಟ್ಟಣವು ಸಹ ಒಂದಾಗಿದೆ. ಇದು ಹುಮನಾಬಾದ ನಗರದಿಂದ ಆಗ್ನೆಯ ದಿಕ್ಕಿನಲ್ಲಿ ೧೨ ಕಿ,ಮೀ ಅಂತರದಲ್ಲಿದೆ. ಭಾರತ ಸ್ವತಂತ್ರ್ಯವಾಗುವದಕ್ಕಿಂತ ಪೂರ್ವದಲ್ಲ ಚಿಟಗುಪ್ಪವು ನಿಜಾಮನ ಕಾಲದಲ್ಲಿ ಪೈಗಾವಾಗಿತ್ತು. -೧ ಪೈಗಾ ಎಂದರೆ, ಈಗಿನ ತಾಲ್ಲೂಕಾ ಕೇಂದ್ರ, ಇದು ನಿಜಾಮನ ಆಳ್ವಿಕೆಯಲ್ಲಿ ತಾಲ್ಲೂಕಾ ಕೇಂದ್ರವಾಗಿತ್ತು. ಈ ಪಟ್ಟಣವು ಪ್ರಾಚೀನ ಹಾಗೂ ಒಂದು ಐತಿಹಾಸಿಕ ಸ್ಥಳವಾಗಿದೆ. ಸ್ವತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಈ ಗ್ರಾಮದ ಅನೇಕ ವೀರ ಯೋಧರು, ಭಾಗವಹಿಸಿದರು ಹಾಗೂ ರಜಾಕರ ವಿರುದ್ದ ಹೋರಾಟ ನಡೆದಾಗ ಈ ಪಟ್ಟಣದ ಅನೇಕ ನಾಯಕರು ಭಾಗವಹಿಸಿದರು. ಇಲ್ಲಿನ ಅನೇಕ ಆರ್ಯ ಸಮಾಜದ ಕಾರ್ಯಕರ್ತರು ನಿಜಾಮನ ವಿರುದ್ಧದ ಹೊರಾಟದಲ್ಲಿ ಭಾಗವಹಿಸಿದ್ದರು. ಅವರಲ್ಲಿ ಪ್ರಮುಖರೆಂದರೆ, ಹಕ್ಕೀಕತ್‌ರಾವ ಚಿಟಗುಪ್ಪಿಕರ್, ಬಸವಣ್ಣಪ್ಪಾ, ರೇವಣಪ್ಪಾ ಮುಂತಾದವರು ನಿಜಾಮನ ವಿರುದ್ದ ಹೋರಾಟ ಮಾಡಿದವರಲ್ಲಿ ಪ್ರಮುಖರಾಗಿದ್ದಾರೆ, ಇಂತಹ ಒಂದು ದೇಶ ಭಕ್ತರಿಂದ ಕೂಡಿದ ಈ ಗ್ರಾಮವು ಒಂದು ಐತಿಹಾಸಿಕ ಗ್ರಾಮವು ಸಹ ಆಗಿದೆ. ಏಕೆಂದರೆ, ಈ ಗ್ರಾಮದಲ್ಲಿ ಸಂತ ಮಡಿವಾಳೇಶ್ವರಂತಹ ವ್ಯಕ್ತಿಯು ವಾಸಿಸಿ ಈ ಗ್ರಾಮವನ್ನು ಒಂದು ಐತಿಹಾಸಿಕ ತಾಣವಾಗಿ ಮಾರ್ಪಡಿಸಿದ್ದಾರೆ, ಅದೇ ರೀತಿ ಚಿಟಗುಪ್ಪದಲ್ಲಿ ಹಲವು ಪ್ರಾಚೀನ ದರ್ಗಾ ಮತ್ತು ದೇವಾಲಯಗಳು ಸಹ ಇವೆ. ಆದರೆ ಇವುಗಳಲ್ಲಿಯೇ ಅತ್ಯಂತ ಪ್ರಸಿದ್ದ ಐತಿಹಾಸಿಕ ತಾಣವೆಂದರೆ ಸಂತ ಮಡಿವಾಳೇಶ್ವರರ ಗುಹೆ. ಈ ಗುಹೆ ಚಿಟಗುಪ್ಪ ಪಟ್ಟಣದ ದಕ್ಷಿಣ ದಿಕ್ಕಿನಲ್ಲಿದೆ ಬೇಸಿಗೆ ಕಾಲದಲ್ಲಿ ಅತ್ಯಂತ ತಂಪಾಗಿರುವಂತಹ ಗುಹೆ ಇದೆ. ಈ ಗ್ರಾಮವು ಐತಿಹಾಸಿಕ ಸ್ಥಳವಾಗಿ ಮಾರ್ಪಡಲ್ಲು ಸಂತ ಮಡಿವಾಳೇಶ್ವರರೇ ಕಾರಣವಾಗಿದ್ದಾರೆ. ಅವರ ಐತಿಹಾಸಿಕ ಜೀವನ ಮತ್ತು ಪವಾಡಗಳ ಚರಿತ್ರೆ ಈ ಕೆಳಗಿನಂತಿದೆ.

ಚಿಟಗುಪ್ಪದ ಮಡಿವಾಳಪ್ಪ :-

ಕಡಗಂಚಿ ಮಡಿವಾಳ ದೀರ

ಭಕ್ತಿ ನಿಮ್ಯಲಿಟ್ಟರ ಪೂರ

ಯಂಕಮ್ಮ ತಾಯಿ ಭಕ್ತಿಯ ಪೂರ

ತ್ಯಾಗ ಮಾಡಿ ಸಂಸಾರ -೨

ಎಂಬ ದಿಗಂಬರ ಕರಿಸವೇಶ್ವರ ಮುತ್ಯಾ ಅವರ ಕುರಿತ ಮಂಗಳಾರತಿಯಲ್ಲಿ ಕಡಗಂಚಿ ಮಡಿವಾಳಪ್ಪನವರ ಹಾಗೂ ಯಂಕಮ್ಮ ತಾಯಿಯವರ ಪ್ರಸ್ತಾಪ ಬರುತ್ತದೆ.

ಭಾಲ್ಕಿ ತಾಲೂಕಿನ ಖಡಕ್ ಚಿಂಚೋಳಿ (ಕೊಟ್ರಾಯದ ಚಿಂಚೋಳಿ) ಗ್ರಾಮದಲ್ಲಿ ಕಡಗಂಚಿ ಎಂಬ ಮನೆತನವಿದೆ. ಆ ಮನೆತನದ ಮಡಿವಾಳಪ್ಪ ಎಂಬುವರೇ ದಿಗಂಬರ ಕರಿಬಸವೇಶ್ವರ ಮುತ್ಯಾ ಅವರ ಶಿಷ್ಯರು ಅವರು ಹನ್ನೆರಡು ವರ್ಷ ವಿವಾಹಿತ ಜೀವನ ಕಳೆದ ನಂತರ ಸಂಸಾರ ತಾಪತ್ರೆಯಗಳಿಂದ ಬೇಸತ್ತು ಮನೆ ಬಿಟ್ಟು ಹೊರಗಾದರು. ಹೆಂಡತಿಗೂ ತನ್ನೊಂದಿಗೆ ಬರಲು ಕೇಳಿದರು ಅವರು ಒಪ್ಪದಿದ್ದಾಗ ಏಕಾಂಗಿಯಾಗಿ ಹೊರ ಹೊಂಟರು, ಅಲ್ಲಿ ಇಲ್ಲಿ ಸುತ್ತಾಡುತ್ತ ಕೊನೆಗೆ ಹುಡಗಿ ಗ್ರಾಮಕ್ಕೆ ಬಂದರು. ದಿಂಗಬರು ಕರಿಬಸವೇಶ್ವರ ಮುತ್ಯಾ ಅವರ ಎದುರು ನಿಂತರು,

" ಯಾರಪ್ಪ ನೀನು ? ಮುತ್ಯಾ ಕೇಳಿದರು.

"ನನಗೆ ಕಡಗಂಚಿ ಮಡೋಳಪ್ಪ ಅಂತ್ರಾರಿ"

"ಯಾವ ಊರು !"

ಇಲ್ಲೆಸನಿ ಅದಾರಿ ಖಡಕ್ ಚಿಂಚೋಳಿ ಅಂತಾರ"

"ಸಂಸಾರ ಜಂಜಾಟ ದೂರ ಮಾಡ್ಕೋಲಾಕ, ನಿಮ್ಮ ಸೇವಾ

ಮಾಡಕೋತ ಕಾಲಾ ಕಳಿಲಾಕ"

"ಯಂಕಿ ಕೇಳ್ದೇ ?" – ೩

ಅಂದರು ಮುತ್ಯಾ ಅವರು ಯಾಂಕಮ್ಮಗ ಯಂಕಿ ಅಂತಿದ್ದು " ಇಂವಾ ಇಲ್ಲೇ ಇರ್ತಾನಂತ ! ಕೇಳ್ದೇ? ಇಂವಾ ನಿಮ್ಮಣ್ಣಾ ಕಾಣಸ್ತಾನ !" ಎಂದರು ಮುಂದುರವರಿದು.

" ಎಲ್ಲಾ ಕೇಳ್ಲಾತೀನಿ ಗುರುವೇ ! ಹುಡುಕಿಕೊಂಡು ಬಂದಾರ, ಪಾಪ, ದಯಾ ಆಗಲಿ ನಿಮ್ದು ಅವರ ಮ್ಯಾಲ" ಅಂದರು ಯಂಕಮ್ಮ

" ಇಂವಾ ಒರಿಗಿ ಖರೇ ಇಳಿಬೇಕಲ್ಲೇ ಯಂಕಿ ?"

" ಗುರುವಿನ ದುಯಾ ಇದ್ರ ಏನು ಆಗಾಲ ಗುರುವೇ ?' – ೪

ಎಂದರು ಯಂಕಮ್ಮ ಅತಿ ವಿನಯದಿಂದ " ಈ ಅಣ್ಣಗ ತನ್ನ ಜೋಡಿ ಮಾಡ್ಕೊಮಾ ಖಾಯಸ ಕಾಣಸ್ತಾದ ಯಂಕಿಗಿ ಇರ್ಲಿ ಇರ್ಲಿ ನೋಡಾರಿ" ಎಂದರು ಮುತ್ಯಾ ಅವರು, ಅಲ್ಲಿ ಕುಂತ ನಿಂತ ಜನರೆಲ್ಲ ಬಿಗಿ ಹಿಡಿದು ಉಸಿರನ್ನು ಸಡಿಲು ಬಿಟ್ಟರು ತುಸು ಹೊತ್ತು ಕಳೆಯಿತು. "ಮಡ್ಯಾ" ಎಂದರು ಮುತ್ಯಾ ಅವರು ಕಡಗಂಚಿ ಮಡಿವಳಪ್ಪನವರಿಗೆ ಅವರು ಮಡ್ಯಾ ಎಂದೇ ಕರೆಯುತ್ತಿದ್ದರು ಮಡ್ಯಾ ಎಂದ ಕೂಡಲೆ

" ಓ ಗುರುವೇ" ಎಂದರು ಮಡಿವಾಳಪ್ಪನವರು.

" ಭಾಯಿಗಿ ಹೋಗಾರಿ ನಡಿ"

" ಯಂಕಿ ನೀನೂ ನಡಿ"

"ಆಗಲಿ ಗುರುವೇ" –೫

ಮೂವರು ಕೂಡಿ ಬಾವಿಗೆ ನಡೆದರು, ಜನರೂ ಕುತುಹಲದಿಂದ ಅವರ ಬೆನ್ನು ಹತ್ತಿದ್ದರು. ಬಾವಿಗೆ ಹೊದ ಕೂಡಲೇ ಮಡಿವಾಳಪ್ಪನವರಿಗೆ ಭಾಯಿ ಕುಂಬಿಯ ಮೇಲೆ ನಿಲ್ಲಲು ಹೇಳಿದರು. ಅವರು ನಿಂತ ಕೂಡಲೇ ಹಿಂದಿನಿಂದ ಮುತ್ಯಾ ಅವರು ಮಡಿವಾಳಪ್ಪಗೆ ಬಾವಿಯಲ್ಲಿ ನೂಕಿದರು. "ಗುರುವೇ" ಎನ್ನತ ಮಡಿವಾಳಪ್ಪ ಭಾವಿಯಲ್ಲಿ ಬಿದ್ದರು, ನೀರಲ್ಲಿ ಅವರು ತೇಲು–ಮುಳುಗು ಮಾಡುತ್ತಿದ್ದಾಗ "ಯಂಕಿ, ಬಂಡೆಗಲ್ಲು ತಾ!" ಎಂದರು ಯಂಕಮ್ಮ ಬಂಡೇಗಲ್ಲು ತಂದರು. ಮುತ್ಯಾ ಅವರು ಎತ್ತಿ ಅದನ್ನು ಮಡಿವಾಳಪ್ಪನವರ ಮೇಲೆ ಎಸೆದರು "ಗುರುವೇ" ಎಂದರು ಮಡಿವಾಳಪ್ಪನವರು ಹೀಗೆ ಏಳೆಂಟು ಬಂಡೆಗಲ್ಲು ಒಂದರ ನಂತರ ಒಂದು ಬಿದ್ದರೂ ಅವರು ಗುರವೇ ಎನ್ನವುದನ್ನು ಬಿಡಲಿಲ್ಲ. ಆಗ ದಿಗಂಬರರ ಕರಿಬಸವೇಶ್ವರ ಮುತ್ಯಾ ಅವರು,

" ಮಡ್ಯಾ ನೀ ಗೆದ್ದಿ ಮಗನೇ " ಎಂದು ಹೇಳುತ್ತಾ

" ಯಂಕಿ ಹಗ್ಗ ಬಿಡು ಭಾಯಾಗ" ಎಂದರು –೬

ಜನರೆಲ್ಲ ನಿಶ್ಚಿಂತ ನಿರಾಳವಾಗಿ ನಿಶ್ವಾಸ ಬಿಟ್ಟರು ಯಂಕಮ್ಮ ತಾಯಿ ಹಗ್ಗವನ್ನು ಇಳಿ ಬಿಟ್ಟರು, ಗುರುವಿನಪ್ಪಣೆ ಪಡೆದು ಮಡಿವಾಳಪ್ಪ ಮೇಲೆ ಬಂದರು,

" ಮಡ್ಯಾ ಭಾರೀ ಘಟ್ಟಿ ಇದ್ದಿ ಮಗನೇ " ಎಂದರು ಮುತ್ಯಾ.

" ಎಲ್ಲಾ ನಿಮ್ಮ ದಯ ಅಪೋರೇ! " ಎಂದರು ಮಡಿವಾಳಪ್ಪ ಶಿಷ್ಯ

ಮಡಿವಾಳಪ್ಪನವರ ಮೇಲೆ ಗುರು ಕರಬಸಪ್ಪನವರು ಅಷ್ಟೊಂದು ಬಂಡೆಗಲ್ಲುಗಳನ್ನು ಎಸೆದರೂ, ಮಡಿವಾಳಪ್ಪನವರಿಗೆ ಎಲ್ಲಿಯೂ ಒಂದು ಚೂರು ಗಾಯವಾಗದೇ ನುಸಿ ತಿನ್ನದ ಜೋಳದಂತೆ ಗಟ್ಟಿ ಕಾಳು ಆಗಿದ್ದರು, ಮಡಿವಾಳಪ್ಪ, ಈ ರೀತಿ ಗುರುವಿನ ಪರಿಕ್ಷಗೆ ಒಳಗಾಗಿ ಕರಿಬಸವೇಶ್ವರರು ಪರಮ ಶಿಷ್ಯರಾದರು.

ಚಿಟಗುಪ್ಪದಲ್ಲಿ ಗುಹೆಯನ್ನು ಕೊರೆದದ್ದು :–

ಮಡಿವಾಳಪ್ಪನವರ ಗುರುಗಳಾದ ಕರಿಬಸವೇಶ್ವರರು ತೀರ್ಥ ಯಾತ್ರೆಗೆ ಹೋದಾಗ ಇವರು ಹುಡಗಿ ಗ್ರಾಮವನ್ನು ಬಿಟ್ಟು, ಆ ಕಾಲದಲ್ಲಿ ನಿಜಾಮನ ಆಳ್ವಿಕೆಯಲ್ಲಿ ಜಿಲ್ಲಾ ಕೇಂದ್ರವಾಗಿದ್ದ ಚಿಟಗುಪ್ಪಾಕ್ಕೆ ಬಂದು ಚಿಟಗುಪ್ಪಾವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು ಚಿಟಗುಪ್ಪಾದ ದಕ್ಷಿಣಕ್ಕಿರುವ ಮಂಕಾಲದವರು (?) ಹೊಲದಲ್ಲಿ ಬೀಡು ಬಿಟ್ಟರು.

ಮಡಿವಾಳಪ್ಪನವರು ಅಲ್ಲಿಗೆ ಹೊದದ್ದೇ ತಡ ಚಿಟಗುಪ್ಪಾದ ಭಕ್ತ ಸಮೂಹದವರೆಲ್ಲ ಕೂಡಿ ಅವರಿಗೊಂದು ದೊಡ್ಡ ಗುಳಾರ (ವಿಸ್ತಾರವಾದ ಗುಡಿಸಲು) ಕಟ್ಟಿ ಕೊಟ್ಟರು. ಅದಲ್ಲದೆ ಮಡಿವಾಳಪ್ಪನವರ ಜತೆಗೂಡಿ ಅವರಿಗಾಗಿ ಒಂದು ಗುಹೆಯನ್ನು ಕೊರೆಯ ತೊಡಗಿದರು. ಎಂಟು-ಹತ್ತು ವರ್ಷಗಳಲ್ಲಿ ಒಂದು ಭವ್ಯವಾದ ಗುಹಾಲಯವು ತಯ್ಯಾರಾಯಿತು. ಭಕ್ತರ ಬರು-ಹೋಗವಿಕೆ ಹೆಚ್ಚಾದಂತೆ ಪ್ರವಚನ, ಭಜನೆ, ಕೀರ್ತಿನಾದಿಗಳ ಸುರಿಮಳೆಯೇ ಪ್ರಾರಂಭವಾಗಿ ಮಡಿವಾಳಪ್ಪನವರ ಗವಿಯು ಧರ್ಮ ಸಂಸ್ಕೃತಿಯ ಕೇಂದ್ರವಾಗಿ ಮಾರ್ಪಟ್ಟಿತ್ತು ಮಡಿವಾಳಪ್ಪನವರು ಹುಡಗಿ ಗ್ರಾಮ ಹಾಗೂ ಕರಿಬಸವೇಶ್ವರ ಮುತ್ಯಾ ಅವರನ್ನು ಮರೆತೇ ಬಿಟ್ಟರು.

ಲಿಂಗೈಕ್ಯ :-

ಮಡಿವಾಳಪ್ಪನವರು ತಮ್ಮ ಗುರುಗಳು ಲಿಂಗೈಕ್ಯರಾದ ನಂತರ ಮತ್ತೇ ಚಿಟಗುಪ್ಪಾಕ್ಕೆ ಬಂದು ತಾವು ಕೊರೆದ ಗವಿಯಲ್ಲಿಯೇ ವಾಸಿಸುತ್ತಾ ಭಕ್ತ ಸಮೂಹದ ಆಶೋತ್ತರವನ್ನು ಈಡೇರಿಸತೊಡಗಿದರು. ಮಡಿವಾಳಪ್ಪನವರು ಮತ್ತೇ ಗವಿಗೇ ಬಂದಿದ್ದರಿಂದ ಗವಿಯ ಕಳೆ ಏರತೋಡಗಿತ್ತ. ದೂರ-ದೂರದ ಊರಿಂದ ಭಕ್ತ ಸಮೂಹ ಬರತೋಡಗಿತ್ತು. ಆದರೆ ಈ ವೈಭವ ಬಹಳ ದಿವಸಗಳ ವರೆಗೆ ಉಳಿಯಲಿಲ್ಲ ತಮ್ಮ ಗುರುಗಳು ಲಿಂಗೈಕ್ಯರಾದ ವರ್ಷದಲ್ಲಿಯೇ ಮಡಿವಾಳಪ್ಪಾನವರು ಸಹ ನಶ್ವರ ಶರೀರವನ್ನು ಬಿಟ್ಟು ಲಿಂಗದೊಳಗೆ ಲೀನವಾದರು.

ಮಡಿವಾಳಪ್ಪಾನವರು ಲಿಂಗೈಕ್ಯರಾದ ಸುದ್ದಿ ಸುತ್ತಮುತ್ತಲಿನ ಗ್ರಾಮದಲ್ಲಿ ಹರಡಿತ್ತು. ಚಿಟಗುಪ್ಪಾಕ್ಕೆ ಅವರ ಅಂತಿಮ ದರ್ಶನ ಪಡೆಯಲು ಭಕ್ತ ಸಮೂಹ ಸಾಗರದಂತೆ ಹರಿದು ಬಂತು. ಈ ಸುದ್ದಿ ಹುಡಗಿ ಗ್ರಾಮದ ಸದ್ಭಕ್ತರಿಗೂ ತಿಳಿಯಿತು. ಹುಡಗಿ ಗ್ರಾಮಸ್ಥರು ಚಿಟಗುಪ್ಪಾಗೆ ಹೋಗಿ ಮಡಿವಾಳಪ್ಪ ಮುತ್ಯಾ ಅವರ ಶರೀರವನ್ನು ಹುಡಗಿ ಗ್ರಾಮಕ್ಕೆ ತಂದು ಅವರ ಗುರುಗಳಾದ ಕರಿಬಸವೇಶ್ವರರ ಎಡ ಮಗ್ಗುಲಲ್ಲಿ ಸಮಾಧಿ ಗೊಳಿಸಲಾಯಿತು. ಮಡಿವಾಳಪ್ಪನವರ ಸಮಾಧಿ ಹುಡಗಿ ಗ್ರಾಮದಲ್ಲಿ ಮಾಡಿದರು ಸಹ ಚಿಟಗುಪ್ಪಾದಲ್ಲೇ ಅವರು ವಾಸಿಸಿದ ಗುಹೆಯಲ್ಲಿ ಮಡಿವಾಳಪ್ಪನವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮುಂದೆ ಮಡಿವಾಳಪ್ಪನವರ ಭಕ್ತ ಸಮೂಹ ಗವಿಯ ಮೇಲೆ ಭವ್ಯವಾದ ದೇವಾಲಾಯ ನಿರ್ಮಿಸಿ ಮಡಿವಾಳಪ್ಪನವರ ಗವಿಯನ್ನು ಒಂದು ಪುಣ್ಯಕ್ಷೇತ್ರವಾಗಿ ಮಾರ್ಪಡಿಸಿದರು,

ಇಂದು ಮಡಿವಾಳಪ್ಪನವರ ಗವಿಯಿಂದಾಗಿ ಚಿಟಗುಪ್ಪ ಹುಮನಾಬಾದ ತಾಲೂಕಿನಲಿ ಒಂದು ಐತಿಹಾಸಿಕ ಸ್ಥಳವಾಗಿ ಧಾರ್ಮಿಕ ಪುಣ್ಯಕ್ಷೇತ್ರವಾಗಿ ಮಾರ್ಪಟ್ಟಿದೆ.

ಅಡಿ ಟಿಪ್ಪಣೆಗಳು :-

೧. ಕಾಶಿನಾಥ ರಡ್ಡಿ ಹೆಚ್. ಹುಮನಾಬಾದ ತಾಲ್ಲೂಕಾ ಪರಿಚಯ. ಪು. ೯

೨. ದೇಶಾಂಶ ಹುಡಗಿ, ದಿಗಂಬರ ಕರಿಬಸವೇಶ್ವರರು. ಪು. ೧೧

೩. ಅದೇ, ಪು. ೧೨

೪. ಅದೇ, ಪು. ೧೨

೫. ಅದೇ, ಪು. ೧೩

೬. ಅದೇ, ಪು. ೧೩

ಆಧಾರ ಗ್ರಂಥಗಳು :-

೧ ದಿಗಂಬರ ಕರಿಬಸವೇಶ್ವರರು – ದೇಶಾಂಶ ಹುಡಗಿ.

೨ ಹುಮನಾಬಾದ ತಾಲೂಕಾ ದರ್ಶನ – ಡಾ.ಸೋಮನಾಥ ಯಳವಾರ.

೩ ಬೀದರ ಜಿಲ್ಲಾ ಗೆಜೆಟಿಯರ್.

೪ ಹುಮನಾಬಾದ ತಾಲ್ಲೂಕಾ ಪರಿಚಯ– ಹೆಚ್. ಕಾಶಿನಾಥ ರಡ್ಡಿ.



ಶ್ರೀ ಸಂತಶಿರೋಮಣಿ ಮಡಿವಾಳೇವರ ಗವಿ. ಚಿಟಗುಪ್ಪ



ಚಾಂಗಲೇರಾ

ಹುಮನಬಾದ ತಾಲ್ಲೂಕಿನ ಪ್ರಮುಖ ಐತಿಹಾಸಿಕ ಮತ್ತು ಪುಣ್ಯ ಕ್ಷೇತ್ರಗಳಲ್ಲಿ ಚಾಂಗಲೇರ ಗ್ರಾಮವು ಸಹ ಒಂದಾಗಿದೆ. ಇದು ತಾಲೂಕ ಕೇಂದ್ರದಿಂದ ಸುಮಾರು 37 ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಇಷ್ಟೊಂದು ಪ್ರಸಿದ್ಧಿ ಪಡೆಯಲು ಹಾಗೂ ಐತಿಹಾಸಿಕ ಸ್ಥಳವಾಗಿ ಮಾರ್ಪಡಲು ಇಲ್ಲಿನ ಶ್ರೀ ವೀರಭದ್ರೇಶ್ವರ ದೇವಸ್ಥಾನವೇ ಕಾರಣ. ಈ ಹಿಂದೆ ವೀರಭದ್ರೇಶ್ವರರು ನೆಲೆಸಿದರು. ಈ ಸ್ಥಳವು ಒಂದು ಅಭಯಾರಣ್ಯವಾಗಿತ್ತು, ಇದು ಗಿಡ-ಮರಗಳಿಂದ, ಪಶು-ಪಕ್ಷಿಗಳಿಂದ, ಹರಿಯುವ ಝುರಿ-ನದಿಗಳಿಂದ ಕೂಡಿದ ಒಂದು ಸುಂದರ ತಾಣವಾಗಿತ್ತು. ಇಲ್ಲಿ ವೀರಭದ್ರೇಶ್ವರ ದೇವಸ್ಥಾನ ಸ್ಥಾಪನೆ ಯಾಗಿರುವ ಬಗ್ಗೆ ಹಲವು ದಂತ ಕಥೆಗಳಿವೆ ಹಾಗೆ ಪೌರಾಣಿಕ ಕಥೆಗಳಿವೆ. ಶ್ರೀ ವೀರಭದ್ರೇಶ್ವರ ಐತಹಾಸಿಕ ಹಿನ್ನೆಲೆ ಈ ಕೆಳಗಿನಂತಿವೆ.

ಶ್ರೀ ಚಾಂಗಲೇರ ವೀರಭದ್ರಸ್ವಾಮಿಯ ದೇವಸ್ಥಾನದ ನಿರ್ಮಾಣದ ಬಗ್ಗೆ ಕರಿಬಸವಾಚಾರ್ಯರ ಕುಮಾರ ವಿಜಯ ವಿಳಾಸದಲ್ಲಿ ಬರುವ ಆಧಾರ, ಕೈ ಬರಹ, ಲಿಪಿಯ ಆಧಾರ, ಹಾಗೂ ಅನೇಕ ಪುರಾಣಗಳ ಆಧಾರದಿಂದ ನಾವು ತಿಳಿದು ಕೊಳ್ಳಬಹುದು.

ಚಾಂಗಲೇರ ಹೆಸರಿನ ಮೂಲಃ-

ಚಾಂಗಲೇರ ಹೆಸರಿನ ಮೂಲದ ಬಗ್ಗೆ ಹಲವು ಭಿನ್ನಾಭಿಪ್ರಾಯಗಳಿವೆ. ಕೆಲವು ಜನಪದ ಹಾಡುಗಳ ಪ್ರಕಾರ ಹಾಗೂ ಅಪ್ರಕಟಿತ ಆಧಾರಗಳ ಪ್ರಕಾರ ಚಾಂಗಲೇರಿ ಗ್ರಾಮವನ್ನು ಶ್ರೀ ರಾಯ್ ಸಂಗ್ರಾಮ್ ಖಾನ್ ದೇಶಮುಖರು ನಿರ್ಮಾಣ ಮಾಡಿದ್ದರೆಂದು ತಿಳಿದು ಬರುತ್ತದೆ. ಈ ಗ್ರಾಮಕ್ಕೆ ಮೊದಲು ವೀರಭದ್ರಪೂರ ಎಂಬ ಹೆಸರಿತ್ತು.[-೧] ಇಲ್ಲಿ ವೀರಭದ್ರೇಶ್ವರರ ದೇವಾಲಯ ನಿರ್ಮಾಣವಾಗಿದ್ದರಿಂದ ಅನೇಕ ಭಕ್ತಾದಿಗಳು ಬರತೊಡಗಿದರು. ಕರ್ನಾಟಕದಿಂದ, ಮಹಾರಾಷ್ಟ್ರದಿಂದ, ಆಂಧ್ರ ಪ್ರದೇಶದಿಂದ ಹೀಗೆ ಹಲವು ರಾಜ್ಯಗಳಿಂದ ದೇವರ ದರ್ಶನಕ್ಕೆ ಬರತೊಡಗಿದರು ಮಹಾರಾಷ್ಟ್ರದ ಭಕ್ತರು ದೇವಾಲಯದ ಸೌಂದರ್ಯವನ್ನು ಹಾಗೂ ಇಲ್ಲಿನ ನೈಸರ್ಗಿಕ ಸೌಂದರ್ಯವನ್ನು ನೋಡಿ ಮರಾಠಿ ಭಾಷೆಯಲ್ಲಿ “ಚಾಂಗ್ಲ ಏರಿಯಾ” ಎಂದು ಕರೆಯತೊಡಗಿದ್ದರು.[-೨] ಮರಾಠಿಯಲ್ಲಿ ‘ಚಾಂಗ್ಲ ಏರಿಯಾ’ ಎಂದರೆ ಸುಂದರ ಪರಿಸರ ಎಂದು ಅರ್ಥವಾಗುತ್ತದೆ ಮುಂದೆ

ಇದು ಜನರಿಂದ ಜನರ ಬಾಯಿಗೆ ಹರಡುತ್ತಾ ಚಾಂಗ್ಲ ಏರಿಯಾ ಎಂಬ ಶಬ್ದವು ಆ ಗ್ರಾಮದ ಹೆಸರಾಗುತ್ತದೆ. ಅದು ಈಗ 'ಚಾಂಗಲೇರಿ' ಎಂದು ಹೆಸರುವಾಸಿಯಾಗಿದೆ.

ಐತಿಹಾಸಿಕ ಹಿನ್ನಲೆಃ–

ಚಾಂಗಲೇರಿಯ ಶ್ರೀ ವೀರಭದ್ರೇಶ್ವರರ ದೇವಾಲಯದ ಐತಿಹಾಸಿಕ ಹಿನ್ನಲೆ ಈ ಕೆಳಗಿನಂತಿದೆ.

ಶ್ರೀ ವೀರಭದ್ರೇಶ್ವರರ ದೇವಾಲಯವನ್ನು ಸಂಗ್ರಾಮ ಖಾನ್ ದೇಶಮುಖ್ ಎಂಬುವರ ನೇತೃತ್ವದಲ್ಲಿ ನಿರ್ಮಾಣಗೊಂಡಿತ್ತೆಂದು ತಿಳಿದು ಬರುತ್ತದೆ. ಹಿಂದೆ ತ್ರಿಲಿಂಗ(ತೆಲಗು ದೇಶ) ದೊಳಗೆ 'ವಾಮಗುಂಡ' ಎನ್ನುವ ಕ್ಷೇತ್ರವೊಂದಿದೆ. ಅಲ್ಲಿ ಶ್ರೀ ಗುರುಲಿಂಗ ಮುನಿ ಪುಂಗವರು ವಾಸವಾಗಿದ್ದರು. ಇವರ ಶಿಷ್ಯನೇ ಸಂಗ್ರಾಮ ಖಾನ್ ದೇಶಮುಖರು. ಸಂಗ್ರಾಮ ಖಾನ್ ದೇಶಮಖನು ತಮ್ಮ ಗುರುಗಳಿಂದ ಲಿಂಗ ದಿಕ್ಷೆಯನ್ನು ಪಡೆದುಕೊಂಡು ಆಶಿರ್ವಾದ ಪಡೆಯುವಾಗ ನನಗೆ ಸುಖಃ, ಶಾಂತಿ, ಸಂಪತ್ತನ್ನು ನಿಡುವಂತೆ ಕೇಳಿಕೋಳ್ಳುತ್ತಾನೆ. ಆಗ ಗುರುಗಳು ಈತನಿಗೆ ಆಶಿರ್ವಾದ ಮಾಡುತ್ತಾರೆ. ಹಾಗೂ ಕರ್ನಾಟಕದ ಪೂರ್ವ ದಿಸೆಯಲ್ಲಿ ಬರುವ ಅಭಯಾರಣ್ಯದಲ್ಲಿ ಬರುವ ದುರ್ಗಾದೇವಿಯ ಸೇವೆ ಮಾಡುವಂತೆ ಆಜ್ಞೆ ಮಾಡುತ್ತಾರೆ.

ಸಂಗ್ರಾಮನು ಗುರುವಿನ ಆಜ್ಞೆಯಂತೆ ಹಲವು ಗ್ರಾಮ, ಪಟ್ಟಣಗಳನ್ನು ಅಲೆಯುತ್ತಾ ಕರ್ನಾಟಕದಲ್ಲಿನ ಈಗೀನ ಹುಮನಾಬಾದ ತಾಲೂಕಿನ ದೇವಗಿರಿ ಎಂಬ ಗ್ರಾಮಕ್ಕೆ ಬರುತ್ತಾನೆ. ಹಲವು ದಿವಸಗಳವರೆಗೆ ದೇವಿಯ ಪೂಜೆ ಮಾಡುತ್ತಾನೆ. ಕೆಲವು ದಿವಸಗಳ ನಂತರ ದೇವಿಯ ಆಶಿರ್ವಾದದಿಂದ ನೂರಾ ಐದು ಹಳ್ಳಿಗಳ ಅರಸನಾಗಿ ಅಧಿಕಾರಕ್ಕ ಬರುತ್ತಾನೆ. ದೇವಗೀರಿಯಲ್ಲಿಯೇ ಒಂದು ಕೋಟೆ ನಿರ್ಮಿಸುತ್ತಾನೆ. ಅದು ಇಂದು ಸಂಪೂರ್ಣವಾಗಿ ಅವನತಿಗೊಂಡಿದೆ. ಸಂಗ್ರಾಮ ಖಾನ್ ದೇಶಮುಖನು ಮುಂದೆ ದೇವಿಯ ವಾಣಿಯಂತೆ ದೇವಗಿರಿಯಿಂದ ಸ್ವಲ್ಪವೇ ದೂರದಲ್ಲಿರುವ ಸ್ಥಳದಲ್ಲಿ ಒಂದು ಮಂದಿರವಿದೆ. ಅಲ್ಲಿ ಶ್ರೀ ವೀರಭದ್ರೇಶ್ವರ ಮೂರ್ತಿಯನ್ನು ಸ್ಥಾಪಿಸುವಂತೆ ಸ್ವಪ್ನದಲ್ಲಿ ಬಂದು ಹೇಳುತ್ತಾಳೆ. ಆಗ ಸಂಗ್ರಾಮ ಖಾನ್ ದೇಶಮುಖರು ದೇವಿಯ ವಾಣಿಯಂತೆ ದೇವಾಲಯದಲ್ಲಿ ವೀರಭದ್ರ ಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಲು ಹೊರಡುತ್ತಾನೆ.[-3]

ಆದರೆ ವೀರಭದ್ರ ಸ್ವಾಮಿ ಎಲ್ಲಿರುವನೋ; ಹೇಗಿರುವನೋ,ಆತನನ್ನು ಎಲ್ಲಿ ಹುಡುಕಲಿ ಎಂದು ಚಿಂತಿಸುತ್ತಾ ಇರುತ್ತಾನೆ. ಇದೆ ಸಮಯಕ್ಕೆ ಸಂಗ್ರಾಮನ ಸ್ವಪ್ನದಲ್ಲಿ

ಜಂಗಮನ ರೂಪದಲ್ಲಿ ಬಂದು ವೀರಭದ್ರ ಸ್ವಾಮಿಯೂ ತಾನಿರುವ ಸ್ಥಳವನ್ನು ಹೇಳುತ್ತಾನೆ. ನನ್ನನ್ನು ಒಬ್ಬ ಮುಗ್ಧ ರೈತನು ನೆಗಿಲಿಗೆ ಕಟ್ಟಿ ದೀನಾಲು ನೆಗಿಲು ಹೊಡೆದು ಅಲ್ಲಿ ಬಿಟ್ಟು ಹೊಗುತ್ತಾನೆಂದು ತಿಳಿಸುತ್ತಾನೆ. ಆಗ ಸಂಗ್ರಾಮನು ತನ್ನ ಗುರುಗಳನ್ನು ಕರೆಯಿಸಿಕೊಂಡು ವೀರಭದ್ರ ಸ್ವಾಮಿಯನ್ನು ಹುಡುಕಲು ಹೊರಡುತ್ತಾನೆ.

ಈಗಿನ ಚಾಂಗಲೇರಿ ಎಂಬ ಗ್ರಾಮದಲ್ಲಿ ಸಿದ್ದಪ್ಪ ಎಂಬ ರೈತನಿದ್ದನು. ಅವನಿಗೆ ತಕ್ಕಂತೆ ನಾಗಮ್ಮಳೆಂಬ ಹೆಂಡತಿ ಇದ್ದಳು ಇವರು ಶಿವಭಕ್ತರಾಗಿದ್ದರು ಸಿದ್ದಪ್ಪನು ದಿನಾಲು ತನ್ನ ಹೊಲದಲ್ಲಿ ನೆಗಿಲನ್ನು ಹೊಡೆಯುತ್ತಾ ಒಕ್ಕಲುತನವನ್ನು ಮಾಡುತ್ತಿದ್ದನು.

ಒಂದು ದಿವಸ ಕರಕಿಯ ಹೊಲವನ್ನು ಹೊಡೆಯುವ ಸಲುವಾಗಿ ನೇಗಿಲನ್ನು ಕಟ್ಟುವಾಗ ನೇಗಿಲನ ಮೇಲೆ ಒಂದು ಭಾರವಾದ ಕಲ್ಲನ್ನು ಕಟ್ಟಿ ನೇಗಿಲು ಹೊಡೆದರೆ ಕರಕಿಯು ಹೊಗುತ್ತದೆ ಎಂದು ತಿಳಿದು ತನ್ನ ಹೊಲದಲ್ಲಿನ ಬಾರವಾದ ಕಲ್ಲನ್ನು ನೇಗಿಲಿಗೆ ಕಟ್ಟಿ ಹೊಡೆಯತೋಡಗುತ್ತಾನೆ. ತನ್ನ ಕಾರ್ಯ ಮುಗಿದ ಮೇಲೆ ಆ ಕಲ್ಲನ್ನು ಅಲ್ಲಿಯೇ ಒಗೆದು ಹೊಗುತ್ತಿದ್ದನು. ಆಗ ಆ ಕಲ್ಲು ಮೊದಲು ಎಲ್ಲಿ ಇತ್ತು ಆ ಸ್ಥಳದಲ್ಲಿಯೇ ಇರುತ್ತಿತ್ತು. ಸಿದ್ದಪ್ಪ ಮರು ದಿವಸ ಬಂದು ಕಲ್ಲನ್ನು ಒಗೆದ ಸ್ಥಳದಲ್ಲಿಯೇ ನೊಡಿದರೆ ಅಲ್ಲಿ ಕಲ್ಲು ಕಂಡುಬರುವುದಿಲ್ಲ. ಮತ್ತೆ ಸಿದ್ದಪ್ಪನು ಆ ಕಲ್ಲನ್ನು ಹುಡುಕಿ ತಂದು ನೇಗಿಲ ಕಟ್ಟಿ ಹೊಡೆಯಿತ್ತಿದ್ದನು ಈ ರೀತಿ ದಿನಾಲು ನಡೆಯುತ್ತಿತ್ತು ಒಂದು ದಿವಸ ಸಂಗ್ರಾಮ ಖಾನ್ ದೇಶಮುಖರು ತಮ್ಮ ಗುರುಗಳೋಂದಿಗೆ ಗ್ರಾಮಸ್ತರೊಂದಿಗೆ ಸಿದ್ದಪ್ಪನ ಹೊಲಕ್ಕೆ ಬಂದು ಸಂಗ್ರಾಮ ಖಾನ ದೇಶಮುಖರವರ ಸ್ವಪ್ನದಲ್ಲಿ ಬಂದ ವಿಷಯ ಹೆಳುತ್ತಾರೆ. ಆಗ ಸಿದ್ದಪ್ಪನು ತಾವು ಹೆಳಿದಂತೆ ನಡೆದಿದೆ ಎಂದು ಗುರುಗಳಿಗೆ ತಿಳಿಸುತ್ತಾನೆ. ಆಗ ಸಂಗ್ರಾಮ ಖಾನ್ ದೇಶಮುಖ ಹಾಗೂ ಗ್ರಾಮಸ್ತರು ಸೆರಿಕೊಂಡು ವೀರಭದ್ರ ದೇವನನ್ನು ಮಂದಿರದಲ್ಲಿ ಪ್ರತಿಷ್ಠಾಪನೆ ಮಾಡುತ್ತಾರೆ. ಗ್ರಾಮಸ್ತರು ಗುರುಗಳು ಸೆರಿಕೊಂಡು ಪೂಜಾ ವಿಧಿ ವಿಧಾನಗಳು ಮೂಲಕ ವೀರಭದ್ರ ಸ್ವಾಮಿಯನ್ನು ದೇವಾಲಯದಲ್ಲಿ ಪ್ರತಿಷ್ಠಾಪನೆ ಮಾಡಿದರು.

ಈಗ ವೀರಭದ್ರೇಶ್ವರ ಮಂದಿರವು ಸರ್ಕಾರದ ಮುಜರಾಯಿ ಇಲಾಖೆಯ ಅಧಿನದಲ್ಲಿದ್ದು ದೇವಾಲಯದ ಸುತ್ತಮುತ್ತಲು ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ದೇವಾಲಯವು ಗರ್ಭ ಗೃಹವನ್ನು ಹೊಂದಿದ್ದು, ಗರ್ಭಗೃಹದ ಮುಂದೆ ಮೂಖ ಮಂಟಪವಿದ್ದು, ಇತ್ತಿಚೀನ ದಿನಗಳಲ್ಲಿ ಮುಖ ಮಂಟಪದ ಎದುರುಗಡೆ ವಿಶಾಲವಾದ ಬೃಹತ ಕಂಬಗಳಿಂದ ಕೂಡಿದ ಮಂಟಪವೊಂದು ಸಹ ನಿರ್ಮಿಸಲಾಗಿದೆ. ದೇವಾಲಯದ ಹತ್ತಿರವೆ ತಿರ್ಥಕುಂಡವಿದ್ದು, ಈ ಕುಂಡದಲ್ಲಿ

ಜನರು ಪುಣ್ಯಸ್ನಾನ ಮಾಡಿಕೊಂಡು ದೇವರ ದರ್ಶನ ಪಡೆಯುತ್ತಾರೆ. ಗರ್ಭಗೃಹದ ಮೇಲೆ ಹಲವು ದೇವಾನುದೇವತೆಗಳಿಂದ ಕೂಡಿದ ಸುಂದರವಾದ ಗೋಪುರವನ್ನು ನಿರ್ಮಿಸಲಾಗಿದೆ. ದೇವಾಲಯದ ಸುತ್ತಮುತ್ತಲೂ ಪಾಕ ಶಾಲೆಗಳು ಅತಿಥಿ ಗೃಹಗಳು ಮತ್ತು ಕಲ್ಯಾಣ ಮಂಟಪ ಹಾಗೂ ಗೋಶಾಲೆಗಳಿವೆ. ದೇವಾಲಯದಲ್ಲಿ ನಿತ್ಯವು ಅನ್ನ ದಾಸೋಹ ನಡೆಯುತ್ತದೆ. ಪ್ರತಿ ವರ್ಷ ದೀಪಾವಳಿಯ ನಂತರ ಬರುವ ಎರಡನೇ ಮಂಗಳವಾರದಂದು ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ನಾನಾ ರಾಜ್ಯಗಳಿಂದ ಭಕ್ತಾಧಿಗಳು ಜಾತ್ರೆಗೆ ಬಂದು ಅಗ್ನಿಯನ್ನು ತುಳಿದು ರಥವನ್ನು ಎಳೆಯುವುದರ ಮೂಲಕ ದೇವರ ಕೃಪೆಗೆ ಪಾತ್ರರಾಗುತ್ತಾರೆ.

ಚಾಂಗಲೇರಾ ವೈಭವವನ್ನು ನೋಡಿ ಜನಪದ ತತ್ವ ಪದಕಾರರು ಈ ರೀತಿ ವರ್ಣಿಸಿದ್ದಾರೆ.

ಚಾಂಗಲೇರಿಯ ಸುತ್ತ ಚಂಡ ಮಾವಿನ ಗಿಡ
ಗುಂಡದ ಸುತ್ತ ಗಿಳಿ ಹಿಂಡೋ ವೀರಯ್ಯ
ಪಾಲಕಿ ಸುತ್ತ ಪಾರಿವಾಳೋ ॥[೪]

ಈ ತ್ರಿಪದಿಯ ವರ್ಣನೆಯನ್ನು ನೋಡಿದಾಗ ದೇವಾಲಯದ ವೈಭವ ಮತ್ತು ಕಲೆ, ವಾಸ್ತು ಶಿಲ್ಪ ನೋಡಿದಾಗ ಚಾಂಗಲೇರಿ ಒಂದು ಐತಿಹಾಸಿಕ ಮತ್ತು ಧಾರ್ಮಿಕ ಪುಣ್ಯಸ್ಥಳವಾಗಿದೆ ಎಂದು ಹೇಳಬಹುದು.

ಅಡಿ ಟಿಪ್ಪಣಿಗಳು:-

೦೧). ಗುರುಲಿಂಗ ಶಿವಾಚಾರ್ಯರು, ಶ್ರೀ ಚಾಂಗಲೇರಾ ವೀರಭದ್ರೇಶ್ವರ ಪುರಾಣ ಹಾಗೂ ಚರಿತ್ರೆ ಪು. ೧೬

೦೨). ಅದೇ, ಪು. ೧೬.

೦೩). ಅದೇ, ಪು. ೯

೦೩). ಕಾಶಿನಾಥರೆಡ್ಡಿ.ಹೆಚ್, ಸಂ. ಹುಮನಾಬಾದ ತಾಲೂಕ ಪರಿಚಯ.ಪು. ೧೪

ಆಧಾರ ಗ್ರಂಥಗಳು:-

೦೧). ಚಾಂಗಲೇರಾ ವೀರಭದ್ರೇಶ್ವರ ಪುರಾಣ ಹಾಗೂ ಚರಿತ್ರೆ--- ಶ್ರೀ ಷ.ಬ್ರ.ಗುರುಲಿಂಗ ಶಿವಾಚಾರ್ಯರು.

೦೨). ಹುಮನಾಬಾದ ತಾಲೂಕ ಪರಿಚಯ--- ಸಂ. ಹೆಚ್.ಕಾಶಿನಾಥರೆಡ್ಡಿ.



ಶ್ರೀ ವೀರಭದ್ರೇಶ್ವರ ದೇವಸ್ಥಾನ, ಚಾಂಗಲೇರಾ



ಗರ್ಭ ಗೃಹದಲ್ಲಿರುವ ಶ್ರೀ ವೀರಭದ್ರೇಶ್ವರ ದೇವರ ಮೂರ್ತಿ





ಕರಕನಳ್ಳಿ ಬಕ್ಕಪ್ರಭುಗಳು

ಹುಮನಾಬಾದ ತಾಲೂಕ ಶರಣರ ನಾಡು, ಸಂತರ ಬಿಡು, ಹಲವು ಧರ್ಮಗಳ ಗೂಡು. ಅನೇಕ ಪುಣ್ಯ ಕ್ಷೇತ್ರಗಳ ನಾಡು. ೧೨ನೇ ಶತಮಾನದಲ್ಲಿ ಅನೇಕ ಶರಣರು ನಡೆದಾಡಿದ ಭೂಮಿ. ಇಂತಹ ಒಂದು ತಾಲೂನಕಿಲ್ಲಿ 'ಕರಕನಳ್ಳಿ' ಒಂದು ಐತಿಹಾಸಿಕ ಸ್ಥಳ. ಹಾಗೂ ಧಾರ್ಮಿಕ ಸ್ಥಳ ಕರಕನಳ್ಳಿ ಒಂದು ಐತಿಹಾಸಿಕ ಸ್ಥಳವಾಗಿ ಮಾರ್ಪಡಲು ಇಲ್ಲಿರುವ ಬಕ್ಕ ಪ್ರಭುಗಳ ಐಕ್ಯ ಸ್ಥಳವು ಕಾರಣವಾಗಿದೆ.

ಸುಮಾರು ೨೦೦ವರ್ಷಗಳ ಹಿಂದೆ ಕರಕನಳ್ಳಿ ಪ್ರದೇಶ ಬಾಳಬೆಳಗಿದ ಬಕ್ಕ ಪ್ರಭುಗಳು. ತಪಸ್ವಿಗಳಾಗಿದ್ದರು. ಮಹಾ ಶಿವಯೊಗಿಗಳೆನಿಸಿದ ಇವರು ಸರಳ ಜೀವಿಗಳಾಗಿದ್ದು, ತೀರಾ ಸಾಮಾನ್ಯರಂತೆ ಬದುಕಿದ್ದರು. ಬಾಲ್ಯದಿಂದಲೇ ವೈರಾಗ್ಯದ ಬದುಕಿಗೆ ಅಂಟಿಕೊಡಿದ್ದರು. ಸುಖ ಲಾಲಸೆಗೆ ಮನ ಸೋಲುವವರಾಗಿರಲಿಲ್ಲ. ಅವರಿಗೆ ಎಂದೂ ವೈಭವದ ಬದುಕು ಬೇಕಾಗಿರಲಿಲ್ಲ. ಬಂದದ್ದನ್ನು ಶಿವನಿಚ್ಛೆ ಎಂದು ಸ್ವೀಕರಿಸುತ್ತಿದ್ದರು. ಅವರೊಬ್ಬ ಬ್ರಹ್ಮಜ್ಞಾನಿಯಾಗಿದ್ದರು ಎನ್ನುವುದನ್ನು ಸೂಚಿಸುತ್ತಿತ್ತು.

ಬಾಲ್ಯ ಜೀವನ ಮತ್ತು ಶಿಕ್ಷಣಃ-

ಬಕ್ಕ ಪ್ರಭುಗಳು ಹುಟ್ಟಿದ್ದು ಅತ್ತೂರ ಗ್ರಾಮದಲ್ಲಿ ಆಂಧ್ರ ಪ್ರದೇಶದ ಸದಾಶಿವಪೇಟ ತಾಲೂಕಿನಲ್ಲಿ ಈ ಊರಿದೆ. ಆ ಊರಿನ ಶಿವಭಕ್ತರ ಮನೆಯಲ್ಲಿ ಸೋಮವಾರದಂದು ಪ್ರಭುಗಳ ಜನನವಾಯಿತು. ಕ್ರಿ.ಶ. ೧೭೮೦ನೇ ಇಸ್ವಿಯಲ್ಲಿ ಅವರ ಜನನವಾಗಿದ್ದು (ನಿಖರವಾಗಿ ಜನ್ಮ ದಿನಾಂಕ ತಿಳಿದಿಲ್ಲ) ಅವರು ೧೮೩೫ರ ವರೆಗೆ ಜೀವಿಸಿದ್ದರೆಂದು ತಿಳಿಯಲಾಗುತ್ತದೆ.[೧] ಬಕ್ಕಪ್ರಭುಗಳ ತಂದೆ ಭೋಜಪ್ಪ. ತಾಯಿ ಭೋರಮ್ಮ ಅವರಿಗೆ ಬಹಳ ದಿನಳವರೆಗೆ ಸಂತಾನ ಭಾಗ್ಯವಿಲ್ಲದೆ ಹೋದದ್ದರಿಂದ ಅವರು ಶಿವನನ್ನು ಆರಾಧಿಸಿ ಈ ಮಗನನ್ನು ಪಡೆಯುತ್ತಾರೆ. ದೇವನ ಕೃಪೆಯಿಂದ ಜನಿಸಿದ ಈ ಮಗು ಬಾಲ್ಯದಿಂದಲೇ ಅಸಾಮಾನ್ಯ ಗುಣಗಳನ್ನು ಬೆಳೆಸಿಕೊಂಡಿದ್ದನ್ನು ಕಾಣುತ್ತೇವೆ.

ಅತ್ತೂರಿನ ಸಮೀಪದಲ್ಲಿರುವ ನದಿಯ ದಂಡೆಯ ಮೇಲೆ ಒಬ್ಬ ಮಾಹಾಪುರುಷರ ಆಶ್ರಮವಿತ್ತು. ಪ್ರಭುಗಳು ಅವರಲ್ಲಿಗೆ ನೇರವಾಗಿ ಬಂದರು. ಈ ಬಾಲಕನ ದಿವ್ಯ ತೇಜಸ್ಸಿಗೆ ಮೂಕವಿಸ್ಮತರಾದ ಆ ಮಹಾಪುರುಷ ಈತನನ್ನು

ಉಪಚರಿಸಿ ಪ್ರೀತಿಯಿಂದ ತಮ್ಮ ಆಶ್ರಯದಲ್ಲಿಯೇ ಉಳಿಸಿಕೊಳ್ಳುತ್ತಾರೆ ಮನೆಬಿಟ್ಟು ಹೋದ ಅಂದಿನಿಂದ ಬಕ್ಕ ಪ್ರಭುಗಳ ಯೋಗ ಜೀವನ ಆರಂಭವಾಯಿತು. ಮಗನ ಅಂದಿನ ದಿವ್ಯತೇಜಸ್ಸು ನೋಡಿದ ತಂದೆ ತಾಯಿಗಳು ಅವನನ್ನು ಆ ಗುರುವಿನಾಧೀನಕ್ಕೆ ಒಪ್ಪಿಸಿ ಮನೆಗೆ ಮರಳುತ್ತಾರೆ. ಆ ಗುರುವಿನ ಹೆಸರೇ ಗಂಗಾಧರಯೋಗಿ.

ಉದ್ಯೋಗ ಹಾಗೂ ವಿವಾಹಃ–

ಗೊಟ್ಟಮಗೊಟ್ಟಿಗೆ ತಪಸ್ಸನ್ನಾಚರಿಸಲು ಬಕ್ಕಪ್ರಭುಗಳು ತೆರಳಿದರು. ತಮ್ಮ ಸಂಚಾರದ ಕಾಲದಲ್ಲಿ ಮೊಮಲ ಪೆಟೆ ಎಂಬ ಗ್ರಾಮಕ್ಕೆ ಬರುತ್ತಾರೆ. ವ್ಯಾಪಾರ ಅವರ ಉದ್ಯೋಗವಾಗುತ್ತದೆ. ಅದರಲ್ಲಿ ಅವರು ಸತ್ಯ, ಪ್ರೇಮ, ಪ್ರಾಮಾಣಿಕತೆಯನ್ನು ಕೇಂದ್ರವಾಗಿರಿಸಿಕೊಂಡು ವ್ಯಾಪಾರ ಮಾಡುತ್ತಾರೆ.

ಈ ಗ್ರಾಮವು ಬಕ್ಕ ಪ್ರಭುಗಳಿಗೆ ವಿವಾಹದ ಯೋಗವನ್ನು ತಂದು ಕೊಡುತ್ತದೆ. ಮೊಮಲ ಪೇಟೆಯ ಮಡಿವಾಳಪ್ಪನೆಂಬ ಶ್ರೀಮಂತ ವ್ಯಾಪಾರಿ ಇವರ ಭಕ್ತನಾಗುತ್ತಾನೆ. ಪ್ರತಿದಿನ ತಪ್ಪದೆ ಪ್ರಭುಗಳ ದರ್ಶನಕ್ಕೆ ಬರುತ್ತಿದ್ದ. ಮಡಿವಾಳಪ್ಪನು ಪ್ರಭುಗಳು ಗೃಹಸ್ಥ ಜೀವನ ನಡೆಸಬೇಕೆಂದು ಒತ್ತಾಯಿಸುತ್ತಾನೆ. ಹಿಗೆ ದಿನಾಲು ಮಡಿವಾಳಪ್ಪನವರು ಬಕ್ಕಪ್ರಭುಗಳಿಗೆ ಮದುವೆಯಾಗಲು ಒತ್ತಾಯಿಸಿದ್ದಾಗ ಒಂದು ದಿವಸ ಪ್ರಭುಗಳು ವಿರಕ್ತ ಜೀವಿಯಾದ ನನಗೆ ಯಾರು ಕನ್ಯೆ ಕೊಡುತ್ತಾರೋ? ಎಂದು ಕೇಳುತ್ತಾರೆ. ಆಗ ಮಡಿವಾಳಪ್ರನು ತನ್ನ ಮಗಳು ಗಿರಿಜಾದೇವಿಯನ್ನೇ ಕೊಡುವುದಾಗಿ ತಿಳಿಸುತ್ತಾರೆ. ಪ್ರಭುಗಳಿಗೆ ಸಂಸಾರದ ಕಡೆಗೆ ಒಲವಿಲ್ಲದಿದ್ದರು, ಮಡಿವಾಳಪ್ಪನ ಭಕ್ತಿಯ ಎಳೆಯಲ್ಲಿ ಸಿಕ್ಕಿಬಿದ್ದು, ಊರ ಪ್ರಮುಖರ ಒತ್ತಾಯದಿಂದ ಗಿರಿಜಾದೇವಿಯನ್ನು ಮದುವೆಯಾಗುತ್ತಾರೆ.[-೨] ಸ್ವಲ್ಪ ದಿನ ವಿವಾಹದ ಬಂಧನದಲ್ಲಿ ಸಿಕ್ಕು ಅಲ್ಲೇ ಇದ್ದುಕೊಂಡು ಸಂಚಾರಿ ಜೀವನ ಪ್ರಾರಂಭಿಸುತ್ತಾರೆ.

ಕರಕನಳ್ಳಿ ಪ್ರಭುಗಳ ಸ್ಥಾನವಾದುದ್ದುಃ–

ಒಂದು ಸಲ ಬಕ್ಕಪ್ರಭುಗಳು ಚಿಟಗುಪ್ಪಾ ಗ್ರಾಮಕ್ಕೆ ಆಗಮಿಸಿದರು. ಆಗ ಅಲ್ಲಿರುವ ಶ್ರೀಮಂತ ಸಂಗ್ರಾಮಖಾನನೆಂಬವನು ತನ್ನ ಸೈನಿಕರೊಂದಿಗೆ ಪ್ರವಾಸಕ್ಕೆ ಹೊರಟು ನಿಂತಿದ್ದನು. ಅವನಿಗೆ ತನ್ನ ಸಾಮಾನುಗಳನ್ನು ಹೊತ್ತುಕೊಂಡು ನಡೆಯಲು ಒಬ್ಬ ಕೂಲಿಯು ಬೇಕಾಗಿದ್ದ. ಅದಕ್ಕಾಗಿ ಹುಡುಕಾಡುತ್ತಿದ್ದಾಗ ಅಲ್ಲಿಯೇ ಕುಳಿತಿದ್ದ ತೀರಾ ಸಾಮಾನ್ಯರಂತೆ ಇದ್ದ ಬಕ್ಕ ಪ್ರಭುಗಳು ಅವರ ಕಣ್ಣಿಗೆ ಬಿದ್ದರು ಇವರು ಹಾಕಿಕೊಳ್ಳತ್ತಿದ್ದ ಅರಿವೆಗಳನ್ನು ಗಮನಿಸಿದರೆ ಯಾರೂ ಇವರನ್ನು

ಮಹಾಪುರುಷರೆಂದು ತಿಳಿಯಲು ಸಾಧ್ಯಾವಿರಲಿಲ್ಲ. ಹಾಗಿದ್ದರು ಇವರು ಒಬ್ಬ ಭಿಕ್ಷುಕನ ರೀತಿಯಲ್ಲಿ ಅಲ್ಲಿರುವ ಗಿಡದಕೆಳಗೆ ಕುಳಿತುಕೊಂಡಿದ್ದ ಪ್ರಭುವನ್ನು ಕೂಲಿಯೆಂದು ಭಾವಿಸಿ ತನ್ನ ಸಾಮಾನುಗಳನ್ನು ಹೊತ್ತುಕೊಂಡು ಹೋಗಬೇಕೆಂದು ದರ್ಪದಿಂದ ಹೇಳಿದನು. ಆ ಶ್ರೀಮಂತ. ಇದನ್ನು ಕೇಳಿದ ಪ್ರಭುಗಳು ಸಹಜವಾಗಿ ಸಂಗ್ರಾಮಖಾನನ ಕಡೆಗೆ ಬಂದು ಅವನ ಸಾಮಾನುಗಳನ್ನು ಹೊತ್ತಕೊಂಡು ನಡೆಯತೊಡಗಿದರು.

ಏಕೆಂದರೆ ಪ್ರಭುಗಳು ಹೊತ್ತುಕೊಂಡಿದ್ದ ಆ ಸಾಮಾನುಗಳು ಅವರ ತಲೆಯ ಮೇಲೆ ಸ್ವಲ್ಪ ಎತ್ತರದಲ್ಲಿ ನಿಂತುಕೊಂಡು ತನ್ನಷ್ಟಕ್ಕೆ ತಾನೇ ನಡೆಯುತ್ತಿತ್ತು. ಸಂಗ್ರಾಮಖಾನನ ಸೈನಿಕರು ಭಯ ಭೀತರಾಗಿ ಈ ವಿಷಯವನ್ನು ತಮ್ಮ ಶ್ರೀಮಂತರಿಗೆ ತಿಳಿಸುತ್ತಾರೆ.ಅವನೂ ಸಹ ಆ ಸಂದರ್ಭವನ್ನು ನೋಡಿ ಆಶ್ಚರ್ಯ ಪಟ್ಟುಕೊಳ್ಳುತ್ತಾನೆ. ಇದರಿಂದ ತನ್ನಷ್ಟಕ್ಕೆ ತಾನೇ ಪಶ್ಚಾತಾಪಗೊಂಡು ಇವನು ಸಾಮಾನ್ಯ ಪುರುಷನಲ್ಲ, ಯಾರೋ ಮಹಾಪುರುಷರಿವರೆಂದು ತಿಳಿದು, ಕೂಡಲೇ ಪ್ರಭುಗಳ ಪಾದಗಳಿಗೆ ಶರಣು ಹೋಗುತ್ತಾನೆ. ತನ್ನ ಅಪರಾಧವನ್ನು ಮನ್ನಿಸುವಂತೆ ಬೇಡಿಕೊಳ್ಳುತ್ತಾನೆ. ಆಗ ಪ್ರಭುಗಳು ಸಂಗ್ರಾಮಖಾನನನ್ನು ಕುರಿತು ಬಾಬಾ ಈ ಜಡದೇಹವು ಪ್ರಾರಬ್ಧ ಕರ್ಮದ ಫಲವನ್ನು ಅನುಭೋಗಿಸಲು ಹುಟ್ಟಿದೆ. ಈ ಕಾರಣದಿಂದ ಇಂದು ಈ ಚಮತ್ಕಾರ ನಡೆದಿದೆ. ನನಗೆ ದೇಹದ ಅಭಿಮಾನವಿಲ್ಲ. ಮಾನ ಅವಮಾನಗಳ ಚಿಂತೆಯಿಲ್ಲ. ಈ ಶರೀರ ನಿನ್ನ ಸಾಮಾನುಗಳನ್ನು ಒಯ್ಯುತ್ತಿದ್ದುದು ಒಂದು ಆಕಸ್ಮಿಕ ನನಗೆ ಕರ್ಮದ ಬಂಧನವಿಲ್ಲ ಎಂದು ಹೇಳಿದಾಗ ಆ ಖಾನನ ಅಹಂಕಾರ ನೀರಾಗಿ ಹರಿದು ಹೋಯಿತು ಪ್ರಭುಗಳ ಬಗೆಗೆ ಅವನಿಗೆ ಭಕ್ತಿ ಗೌರವದ ಭಾವ ಮೂಡಿನಿಂತಿತು.[-೪]

ತನ್ನ ತಪ್ಪು ಹಾಗೂ ಭಕ್ತಿಯ ದ್ಯೋತಕವಾಗಿ ಕರಕನಳ್ಳಿಯ ತನ್ನ ಭೂಮಿಯನ್ನು ಪ್ರಭುಗಳಿಗೆ ಸಮರ್ಪಿಸುತ್ತಾನೆ. ಅದೇ ಸ್ಥಾನದಲ್ಲಿ ಈಗ ಬಕ್ಕ ಪ್ರಭುಗಳ ಗುಡಿಯನ್ನು ನಿರ್ಮಿಸಲಾಗಿದೆ.

ಸಮಾಧಿ ಯೋಗಃ-

ಪ್ರಭುಗಳು ಮೊದಲು ಮಾಘ, ವದ್ಯ ತ್ರಯೋದಶಿ ತಿಥಿಯಂದು ಸಮಾಧಿಯೋಗ ಪಡೆಯಬೇಕೆಂದು ಆಲೋಚಿಸಿದರು. ಅದನ್ನು ತಮ್ಮ ಶಿಷ್ಯರ ಮುಂದೆಯೂ ತಿಳಿಸಿದ್ದರು. ಆದರೆ ಏನಾದರೂ ಅನಾಹುತ ಆಗಬಹುದೆಂದು ತಿಳಿದು ಅದನ್ನು ಮುಂದೂಡಿದರು. ಆನಂತರ ತಮ್ಮ ಮುಖ್ಯ ಶಿಷ್ಯರನ್ನು ಮಾತ್ರ ಏಕಾಂತದಲ್ಲಿ ಕರೆದು ತಮ್ಮ ಸಮಾಧಿಯೋಗದ ಮುಂದಿನ ದಿನವನ್ನು ತಿಳಿಸಿದರು. ಅವರಿಗೆ ಎಲ್ಲ ರೀತಿಯ ವ್ಯವಸ್ಥೆ ಮಾಡಲು ಸಹ ಸೂಚಿಸಿದರು. ಆದರೆ

ಆಶ್ಚರ್ಯವೆಂದರೆ ಈ ಎರಡನೆಯ ಸಲವೂ ಅವರಿಗೆ ಸಮಾಧಿಯೋಗ ಲಭಿಸಲಿಲ್ಲ ಏಕೆಂದರೆ ಈ ವಿಷಯ ಅವರ ಪತ್ನಿಗಿರಿಜಾದೇವಿಯವರಿಗೆ ತಿಳಿಯಿತು. ಅವರು ರೋಧಿಸುತ್ತ ಪ್ರಭುಗಳ ಬಳಿಗೆ ಬಂದರು. ಪತ್ನಿಯ ರೋಧನವು ಅವರ ಸಮಾಧಿಯೋಗವನ್ನು ಭಗ್ನಗೋಳಿಸಿತು. ಸಮಾಧಿಯಿಂದ ಎದ್ದು ಬಂದು ಅತಿಯಾಗಿ ರೋಧಿಸುತ್ತಿದ್ದ ಹೆಂಡತಿಯನ್ನು ಸಮಾಧಾನ ಪಡಿಸಿ ಕಳಿಸಿದರು. ಆ ನಂತರ ೧೫ ದಿನಗಳ ತರುವಾಯ ಅವರು ಸಮಾಧಿಯಲ್ಲಿ ಲೀನವಾದರು.–೪

ಪ್ರಭುಗಳ ಅಗಲುವಿಕೆಯಿಂದ ಸಾವಿರಾರು ಜನ ಶಿಷ್ಯರು ಅಪಾರ ಶೋಕದಲ್ಲಿ ಮುಳುಗಿದ್ದರು. ಅವರು ಸಮಾಧಿಯೋಗ ಪಡೆದ ದಿನದಂದು ಕರಕನಳ್ಳಿಯಲ್ಲಿ ಸಹಸ್ರ ಸಂಖ್ಯೆಯಲ್ಲಿ ಭಕ್ತವರ್ಗ ಸೇರಿತ್ತು ಪ್ರಭುಗಳು ಸಮಾಧಿಯೋಗ ಪೂರ್ವದಲ್ಲಿ ಎಲ್ಲ ಭಕ್ತರನ್ನುಪ್ರಸನ್ನ ಚಿತ್ತದಿಂದ ಆಶಿರ್ವದಿಸಿ ಭಕ್ತರ ಜಯ ಜಯಕಾರದ ಘೋಷಣೆಗಳ ಮಧ್ಯದಲ್ಲಿಯೇ ಬ್ರಹ್ಮಾನಂದದಲ್ಲಿ ಸೇರಿ ಹೋದರು. ಅಂದು ಪಾಲ್ಗುಣ ಶುಕ್ಲ ಚತುರ್ದಶಿ ಸೋಮವಾರ ಶುಭಮುಹೂರ್ತವಿತ್ತು.

ಬಕ್ಕ ಪ್ರಭುಗಳ ಭೌತಿಕ ಶರಿರ ಇಂದಿಲ್ಲವಾದರೂ ಅವರ ಚೇತನಾತ್ಮದ ಸಂದೇಶ ಈ ಪ್ರದೇಶದಲ್ಲಿ ಇಂದಿಗೂ ಜಾಗೃತವಾಗಿದೆ. ಅವರು ಬಿಟ್ಟು ಹೋಗಿರುವ ವೈರಾಗ್ಯ ಜೀವನ, ತಾತ್ವಿಕ ಬದುಕು ಯೋಗ ಪ್ರತಿಪಾದನೆ, ಅನುಷ್ಠಾನದ ರೀತಿಗಳೇಲ್ಲ ಇಲ್ಲಿಯ ದೈನಂದಿನ ಬದುಕಿನಲ್ಲಿ ಒಂದಾಗಿ ಸೇರಿದ್ದು ಅವರ ಶಿಷ್ಯ ಪರಂಪರೆಯಲ್ಲಿ ಅವು ಮುಂದುವರೆದಿವೆ. ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನಲ್ಲಿರುವ ಕರಕನಳ್ಳಿ ಬಕ್ಕ ಪ್ರಭುಗಳಿಂದ ಒಂದು ಪವಿತ್ರ ಕ್ಷೇತ್ರವಾಗಿನಿಂತಿದೆ.–೫ ಬಕ್ಕ ಪ್ರಭುಗಳ ದೇವಾಲಯವನ್ನು ಇಂದು ಆಧುನಿಕವಾಗಿ ನಿರ್ಮಿಸಲಾಗಿದ್ದು, ಹಲವಾರು ಧಾರ್ಮಿಕ ಕಾರ್ಯಕ್ರಮಗಳು ವಿಧಿವತ್ತಾಗಿ ಅಲ್ಲಿ ಜರುಗುತ್ತವೆ.

ಅಡಿ ಟಿಪ್ಪಣಿಗಳು:–

೧. ಸೋಮನಾಥ ಯಾಳವಾರ, ಕರಕನಳ್ಳಿಯ ಬಕ್ಕ ಪ್ರಭು ಪು. ೨
೨. ಆದೇ, ಪು. ೦೬
೩. ಆದೇ, ಪು. ೧೪
೪. ಆದೇ, ಪು. ೨೯



ಶ್ರೀ ಗಂಗಾಧರ ಬಿಕ್ಕಾ ಪ್ರಭುಗಳ ದೇವಸ್ಥಾನ , ಕರಕನಳ್ಳಿ



ಗರ್ಭ ಗ್ರಹದಲ್ಲಿರುವ ಗಂಗಾಧರ ಬಿಕ್ಕಪ್ರಭುಗಳ ಮೂರ್ತಿ





ಅಧ್ಯಾಯ ನಾಲ್ಕು

ಸಮಾರೋಪ

ಸಮಾರೋಪ

ಒಂದು ರೀತಿಯಲ್ಲಿ ಸಂಸ್ಕೃತಿಕ ಸಂಗಮ ರಾಷ್ಟ್ರ ಹಾಗೂ ರಾಜ್ಯದ ಪ್ರವಾಸಿ ನಕ್ಷೆಯಲ್ಲಿ ಹುಮನಾಬಾದ ತಾಲ್ಲೂಕ ತನ್ನದೇಯಾದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಕಟ್ಟಡ ವಾಸ್ತು ಶಿಲ್ಪ, ಮಠ, ಮಂದಿರ, ಮಸೀದಿ ಕೇವಲ ಪ್ರೇಕ್ಷಣೀಯ ಸ್ಥಾನಗಳಾಗಿರದೆ. ಐತಿಹಾಸಿಕ ಧಾರ್ಮಿಕ ಸಮನ್ವಯದ ಜೀವಂತ ಸಾಕ್ಷಿಗಳಾಗಿವೆ. ವಿವಿಧ ಮತ-ಪಾಥಗಳ ಈ ಸ್ಮಾರಕಗಳನ್ನು ನೋಡಲು ಬಂದ ಪ್ರವಾಸಿ ಇಲ್ಲಿಯೆ ಸಾಂಸ್ಕೃತಿಕ ಸ್ನೆಹವನ್ನು ವೀಕ್ಷಿಸಿ ಸಂತನವನ್ನು ವ್ಯಕ್ತ ಪಡಿಸಿದೆ ಇರಲಾರ.

ಶತ ಶತಮಾನವದ ಐತಿಹ್ಯ ಪಡೆದ ಹುಮನಾಬಾದ ವಿವಿಧ ಜನಾಂಗ ಸಂಸ್ಕೃತಿಗಳ ಸಮ್ಮಿಲನದ ಸಂಕೇತ ಹಿಂದು, ಮುಸ್ಲಿಂ ಬಾಂಧವ್ಯದ ಕೆಂದ್ರ, ಮಹಾವಿಭೋತಿ ಪುರುಷರ ಪುಣ್ಯದ ನೆಲ ಉಜ್ವಲ ಧಾರ್ಮಿಕ ಕ್ಷೇತ್ರಗಳ ಪಾರಂಪರೆಯ ಪರಿಸರ ಹೊಂದಿದ. ಕಲೆ ಸಾಹಿತ್ಯಗಳಿಗೆ ಅಪೂರ್ವ ಕಾಣಿಕೆ ನೀಡಿದೆ. ಕಲ್ಯಾಣದ ಚಾಲುಕ್ಯರು, ಬಹುಮನಿ ಬರೀದ ಶಾಹಿ ಮನೆತನಗಳು ಆಳಿದ್ದು, ಆರ್ಥಿಕ, ಧಾರ್ಮಿಕ, ರಾಜಕೀಯ ರಂಗಗಳಲ್ಲಿ ಜಗತ್ಪ್ರಸಿದ್ಧಿಯನ್ನು ಗಳಿಸಿತ್ತು. ಅಂದಿನ ಸ್ಮಾರಕ, ಕಟ್ಟಡ, ಕಲೆ, ಸಾಹಿತ್ಯ, ಶಾಸನ, ಮಂದಿರ ಮಜ್ಜೀದಗಳು ಇತಿಹಾಸದ ಸಾಕ್ಷಿ ಸಂಕೇತವಾಗಿ ಇಂದು ಕೂಡ ನೋಡಲು ಹುಮನಾಬಾದ ತಾಲ್ಲೂಕಿನಲ್ಲಿ ಸಿಗುತ್ತವೆ. ಶ್ರೀ ಬಸವಣ್ಣನವರ ನೇತೃತ್ವದಲ್ಲಿ ಭಕ್ತಿ ಚಳುವಳಿ, ಸಾಮಾಜಿಕ, ಧಾರ್ಮಿಕ, ಕ್ರಾಂತಿಗೆ ಚಾಲನೆ ದೊರೆತದ್ದು ಇದೆ ನೆಲ, ಪ್ರಾಚೀನ ಕಾಲದಿಂದಲೂ ಇಲ್ಲಿಂದ ಜನರೆ ಅನೇಕರು ಇಲ್ಲಿಯೇ ನೆಲೆಸಿದ್ದಾರೆ ಪರಿಣಾಮವಾಗಿ ಇಲ್ಲಿಯ ಜನ ಜೀವನ ಸಮೃಧಿಗೊಂಡಿದೆಯಲ್ಲದೆ. ತನ್ನದೆ ಆದ ವೈಶಿಷ್ಟ್ಯ ಪಡೆದಿದೆ. ಹುಮನಾಬಾದ ತಾಲ್ಲೂಕಾ ಐತಿಹಾಸಿಕವಾಗಿ, ರಾಜಕೀಯವಾಗಿ, ಸಂಸ್ಕೃತಿಕವಾಗಿ, ವಾಸ್ತುಶಿಲ್ಪದಿಂದ ತುಂಬ ಮಹತ್ವದಾಗಿದೆ. ಕೇವಲ ಹುಮನಾಬಾದ ನಗರ ಮಾತ್ರವಲ್ಲ. ಈಗಿನ ಇಡಿ ತಾಲ್ಲೂಕಾ ಭಾರತದ ಇತಿಹಾಸದಲ್ಲಿ ಅತ್ಯಂತ ಮಹತ್ವದ್ದು ಅದರಲ್ಲಿ ದಕ್ಷಿಣ ಇತಿಹಾಸದಲ್ಲಿ ಸುವರ್ಣಕ್ಷರಗಳಿಂದ ಬರೆದಿಡುವಂತೆಹ್ದು.

ಐತಿಹಾಸಿಕವಾಗಿ ಹುಮನಾಬಾದ ತಾಲ್ಲೂಕಾ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ, ಬಹುಮನಿ ಬರೀದ ಶಾಹಿಗಳ ಕಾಲದಲ್ಲಿ ಮೇರೆದ ನಾಡಾಗಿದೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಕ್ಕೆ ಅದರಲ್ಲೂ ೬ನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಚಾಲುಕ್ಯರ ಸಾಮ್ರಾಜ್ಯವು ಉನ್ನತಿಯ ಸಮೃಧಿಯ ಶಿಖರಕ್ಕೇರಿತು. ಆಡಳಿತ, ಕಲೆ ಸಾಹಿತ್ಯ, ಶಿಲ್ಪ ಮುಂತಾದವುಗಳಿಗೆ ದೊರೆತ್ತಿತ್ತು. ಹುಮನಾಬಾದ ತಾಲ್ಲೂಕಿನಲ್ಲಿರುವ ಜಲಸಂಗಿ ಅದಕ್ಕೊಂದು ಸಾಕ್ಷಿಯಾಗಿದೆ. ಸಾಹಿತ್ಯ ರಚನೆಯಲ್ಲಿ ವಿಜ್ಞಾನೇಶ್ವರ ಮಿತಾಕ್ಷರ ಸಂಹಿತ ಎಂಬ ಹಿಂದು ನ್ಯಾಯ ಶಾಸ್ತ್ರ ಗ್ರಂಥಗಳುತ್ತಾನೆ.

ಬಿಜ್ಜಳನ ಕಾಲದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯನ್ನು ಕಂಡ ಚಿರಸ್ಮರಣೆಯ ಕಾಲವಾಗಿತ್ತು.

ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಕಟ್ಟಡಗಳು ಹಳದಿ ಮಿಶ್ರಿತ ಕೆಂಪು ಮರಳು ಕಲ್ಲಿನ ಒರಟು ಮಾಧ್ಯಮದಲ್ಲಿ ನಿರ್ಮಾಣಗೊಂಡಿರುವಂತೆ ಹಲವು ದೇವಾಲಯಗಳು ಒರಟು ಕಲ್ಲನ್ನು ಬಿಟ್ಟು ಕೇತ್ತನೆಯ ಕೆಲಸಕ್ಕೆ ಹೊಂದಿಕೊಳ್ಳಬಲ್ಲ ಕಲ್ಲುಗಳನ್ನು ಪಡೆದು ನಿರ್ಮಿತವಾಗಿದೆ. ಈ ಎರಡು ಮಾದರಿಯ ರಚನೆಗಳು ಚಾಲುಕ್ಯರ ವಾಸ್ತು ಶಿಲ್ಪ ಶೈಲಿಯ ಕಾಣಿಕೆಗಳೆನ್ನಬಹುದು, ಜಲಸಂಗಿ, ಮುಸ್ಲಿಂ ನಾವಾಬರಗಳ ಪೀರಾನ ದರ್ಗಾಗೋರಿಗಳು ಮುಸ್ಲಿಂ ಶೈಲಿಯ ವಸ್ತುಗಳು ಬಿಜ್ಜಳನ ಕಾಲದ ಶಿವಶರಣರ ವಾಸ್ಥಳದ ಮನೆಗಳಾಗಿರುವ ಗುಹೆಗಳು ವಾಸ್ತು ರಚನೆಯಲ್ಲಿ ಹಿಂದಿನ ಗುಹಾಂತರ ದೇವಾಲಯಗಳ ರೀತಿಯವು ಗಟ್ಟಿಯಾದ ಗುಡ್ಡವನ್ನು ಕೊರೆದು ವಾಸಿಸಲು ಯೋಗ್ಯರೀತಿಯಲ್ಲಿ ನಿರ್ಮಿಸಲಾಗಿರುವ ಅವು ಪ್ರವಾಸಿಗರ ಮನ ತಣಿಸುತ್ತದೆ.

ಹುಮನಾಬಾದ ತಾಲೂಕಿನ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಒಂದು ಮಹತ್ವದ ಅಂಶವೆಂದರೆ, ಇಲ್ಲಿ ಏಕತೆಯಲ್ಲಿ ಅನೇಕತೆ ಅನೇಕತೆಯಲ್ಲಿ ಏಕತೆ ಅನೇಕ ಮತ, ಪಂಥಗಳು, ಪ್ರಾಚೀನ ಕಾಲದಿಂದಲೂ ಈ ಜಿಲ್ಲೆಯಲ್ಲಿ ಆಚರಿಸಲ್ಪಟ್ಟದರಿಂದ ವಿವಿಧ ಧರ್ಮದವರು ವಿಭಿನ್ನ ಸಂಸ್ಕೃತಿ ಜನರ ಬದುಕು ಇಲ್ಲಿ ಬೆಳಕಾಗಿ ನಿಂತಿದೆ. ಹಿಂದೂ ಮುಸ್ಲಿಂ ಸಂಸ್ಕೃತಿಗಳ ಸಮ್ಮಿಲನ ಈ ತಾಲೂಕಿನ ಧಾರ್ಮಿಕ ಸಂಸ್ಕೃತಿಗೆ ಒಂದು ಹೆಗ್ಗುರುತು ಇದು ಈ ತಾಲೂಕಿನ ವೈಶಿಷ್ಟ್ಯವು ಆಗುವುದು ಭೌದ್ಧ, ಜೈನ್ ಶೈವ, ವೀರಶೈವ, ಇಸ್ಲಾಂ ಮತ್ತು ಸಿಖ್ಖ, ಕ್ರೈಸ್ತ ಎಲ್ಲ ಜನಾಂಗದವರು ಈ ತಾಲೂಕಿನಲ್ಲಿದ್ದು, ಎಲ್ಲರೂ ತಮ್ಮ ನಡೆ-ನುಡಿಗಳು ಬೇರೆ -ಬೇರೆಯಾಗಿ ಕಂಡು ಬಂದರು ಕೂಡ ಈ ಮತ, ಧರ್ಮಗಳ ಹಿಂದಿರುವ ಉದ್ದೇಶ ಮಾತ್ರ ಒಂದೇಯಾಗಿದೆ. ಒಂದು ಊರಿಗೆ ಹೊಗಲು ಹಲವಾರು ರಸ್ತೆಗಳಿದ್ದರು ಅವೆಲ್ಲವುಗಳ ತಲುವುದು ಮಾತ್ರ ಅದೇ ಊರನ್ನು ಈ ರೀತಿ ಹುಮನಾಬಾದ ತಾಲೂಕಿನಲ್ಲಿ ಅನೇಕ ಮತದವರು ಹಲವಾರು ಧರ್ಮಗಳ ಪ್ರಚಾರ ಪ್ರಭಾವ ಇದ್ದರೂ ಕೂಡ ಅವರಲ್ಲಿ ಐಕ್ಯತೆ ಕಂಡು ಬರುತ್ತದೆ.

ಹಿಂದೂ ಮುಸ್ಲಿಂ ಭಾಯಿ ಭಾಯಿ ಸಂಬಂಧ ಇಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ. ಈ ತಾಲೂಕಿನ ಸಂಸ್ಕೃತಿ ಅರಳಿ ನಿಂತಿದೆ. ಈ ಜನರ ಧಾರ್ಮಿಕ ಸಹಿಷ್ಣು ಪರಂಪರೆ ಈ ತಾಲೂಕಿನ ಸಾಂಸ್ಕೃತಿಕ ಹಿರಿಮೆಗೆ ಹೆಚ್ಚಿದ ನಂದಾ ದೀಪವಾಗಿದೆ, ಶರಣರ ಸಂಸ್ಕೃತಿಯ ಪ್ರಭಾವ ಮಹತ್ವದನ್ನು ಹೊತ್ತು ನಿಂತ ಹುಮನಾಬಾದ ತಾಲೂಕು ಈ ದೃಷ್ಟಿಯಿಮದ ಅತ್ಯಂತ ಪ್ರಮುಖ ಸ್ಥಾನ ಪಡೆಯುತ್ತದೆ. ಶಿವಶರಣರು ನಡೆದಾಡಿದ ಈ ತಾಲೂಕಿನ ನೆಲ ಪವಿತ್ರವಾದದ್ದು

ಸಕಲ ಮತ ಪಂಥವರನ್ನು ಒಂದು ಗೂಡಿಸಿಕೊಂಡು ಒಕ್ಕಟ್ಟಿನಿಂದ ಹೋರಾಟ ಮಾಡಿದ ಅವರ ಪ್ರಯತ್ನ ಈ ತಾಲೂಕು ಇಂದಿನ ಜನತೆಗೆ ಆದರ್ಶಮಯವಾಗಿದೆ. ಆ ಭ್ಯ ಸಂಸ್ಕೃತಿಯ ಬೆಳಕಿನಲ್ಲಿ ಈ ತಾಲೂಕಾ ಬೆಳಗ ಹತ್ತಿದೆ. ಇಸ್ಲಾಂ ಜನರ ತಮ್ಮದೆ ಆದ ನಿಯಮಾಚರಣೆಗಳು ಇದ್ದರೂ ಜನತೆಯೊಂದಿಗೆ ಕೂಡಿ ಬಾಳ ಹತ್ತಿದ್ದಾರೆ, ಬಹುಮನಿ ಸುಲ್ತಾನರ ಕಾಲದಲ್ಲಿ ಬೀದರ ನಗರ ಸೂಫಿ ಸಂತರ ಪ್ರಸಿದ್ಧ ಕೇಂದ್ರವಾಗಿತ್ತು, ಕಾರಣ ಜಿಲ್ಲೆಯಾದ್ಯಂತ ಅದರ ಪ್ರಭಾವವಾಗಿ ಧಾರ್ಮಿಕ ಸಾಮರಸ್ಯ ಒಡಮಾಡಿದೆ.

ಗ್ರಂಥ ಋಣ

೧ ಸೂರ್ಯನಾಥ ಕಾಮತ : ಕರ್ನಾಟಕ ಕೈಗನ್ನಡಿ. ಕರ್ನಾಟ ಇತಿಹಾಸ ಅಕಾಡೇಮಿ – ೨೦೦೭.

೨ ಸುರೇಶ ಬಿ. ಹೂಗಾರ : ಕರ್ನಾಟಕ ಪ್ರಮುಖ ಐತಿಹಾಸಿಕ ಸ್ಥಳಗಳು, ವಾಸನ ಪಬ್ಬಲಿಕೇಶನ್ ಬೆಂಗಳೂರು –೨೦೦೮.

೩ ಲಿಂಗಣ್ಣಾ ಗುಂಡಳ್ಳಿ : ಭೂಪಟ್ಟಗಳ ಮೂಲಕ ಕರ್ನಾಟಕ ಇತಿಹಾಸ, ವಾಸವಿ ಪ್ರಕಾಶನ್ ಬೆಂಗಳೂರು –೨೦೦೬.

೪ ತಿಪ್ಪೇರುದ್ರ ಸ್ವಾಮಿ ಹೆಚ್ : ಕರ್ನಾಟಕ ಸಂಸ್ಕೃತ ಸಮಿಕ್ಷೆ, ಡಿ.ವಿ.ಕೆ ಮೂರ್ತಿ, ಮೈಸೂರ –೨೦೦೭.

೫ ಶಿವರುದ್ರ ಸ್ವಾಮಿ ಎಸ್.ಎನ್ : ಕರ್ನಾಟಕ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ಪೌರಸ್ತ್ಯೆ ಪ್ರಕಾಶನ್ ಮೈಸೂರು –೨೦೦೬.

೬ ಶೇಕ್ ಅಲಿ ಬಿ : ಕರ್ನಾಟಕ ಚರಿತ್ರೆ ಭಾಗ –೫ ಪ್ರಸಾರಂಗ ಕನ್ನಡ ವಿ.ವಿ .ಹಂಪಿ ೧೯೯೭.

೭ ಶೇಕ್ ಅಲಿ ಬಿ : ಕರ್ನಾಟಕ ಚರಿತ್ರೆ ಭಾಗ –೪ ಪ್ರಸಾರಂಗ ಕನ್ನಡ ವಿ.ವಿ .ಹಂಪಿ ೧೯೯೭.

೮ ಕೃಷ್ಣರಾವ ಎಮ್.ವ್ಹಿ : ಕರ್ನಾಟಕ ಇತಿಹಾಸ ದರ್ಶನ ಬೆಂಗಳೂರು– ೧೯೭೦.

೯ ರಂಗಸ್ವಾಮಿ ಹೆಚ್,ಜಿ : ಕರ್ನಾಟಕ ಪರಂಪರೆ, ಕನ್ನಡ ಸಾಹಿತ್ಯ ಸಂಘ, ಸೂರಪೂರ .

೧೦ ಪಾಲಾಕ್ಷ : ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಶಶಿ ಪ್ರಕಾಶನ, ತುಮಕೂರ –೨೦೦೦.

೧೧ ಸೂರ್ಯನಾಥ ಕಾಮತ : ಕರ್ನಾಟಕ ರಾಜ್ಯ ಗೆಜೇಟಿಯರ್, ಕರ್ನಾಟಕ ರಾಜ್ಯ ಸರ್ಕಾರ ಬೆಂಗಳೂರು –೧೯೯೬.

೧೨	ನಿಲಕಂಠ ಶಾಸ್ತ್ರಿ. ಕೆ.ಎ	:	ಎ ಹಿಸ್ಟರಿ ಆಫ್ ಸೌತ ಇಂಡಿಯಾ, ಆಕ್ಸಫರ್ಡ ಯುನಿವರ್ಸಿಟಿ ಪ್ರೆಸ್, ನ್ಯೂ ದೆಹಲಿ – ೧೯೭೬.
೧೩	ಶೇಕ್ ಅಲಿ. ಬಿ. (ಎಡಿಟ್)	:	ಕರ್ನಾಟಕ ಹಿಸ್ಟರಿ ವ್ಯಾಲುಮ್ –೧,೩ ವಾಸನ ಪಬ್ಲಿಕೇಶನ್ ದಾರವಾಡ– ೧೯೯೮.
೧೪	ಚೋಪ್ರಾ ಎನ್.ಪಿ	:	ಹಿಸ್ಟರಿ ಆಫ್ ಸೌತ್ ಇಂಡಿಯಾ, ವ್ಯಾಲುಮ್ –೨ ನ್ಯೂ ದೆಹಲಿ–೧೯೭೯.
೧೫	ದಿವಾಕರ ಆರ್. ಆರ್.	:	ಕರ್ನಾಟಕ ಥ್ರೂ ದ ಎಜೇಸ್ಸ್, ಬೆಂಗಳೂರು –೧೯೮೬.
೧೬	ಶ್ರೀನಿವಾಸ ಮೂರ್ತಿ,ರಾಮಕೃಷ್ಣ ಆರ್	:	ಹಿಸ್ಟರಿ ಆಫ್ ಕರ್ನಾಟಕ ಬೆಂಗಳೂರು
೧೭	ಡಾ॥ ಜಗನಾಥ ಹೆಬ್ಬಾಳೆ	:	ಬೀದರ ಜಿಲ್ಲಾ ದರ್ಶನ –೧೯೯೭
೧೮	ಬಸವರಾಜ ಸಬರದ	:	ಬೀದರ ಜಿಲ್ಲಾ ಸಂಸ್ಕೃತಿ ಅಧ್ಯಾಯನ ೧೯೮೨ .
೧೯	ಡಾ॥ ಜ.ಎಂ. ನಾಗಯ್ಯ	:	ಕರ್ನಾಟಕ ಶಿಲ್ಪಗಳಲ್ಲಿ ಶಿವಶರಣರು ೨೦೦೪.
೨೦	ಎಲ್.ಆರ್. ಕುಲಕರ್ಣಿ	:	ಬೀದರ ಜಿಲ್ಲಾ ಚರಿತ್ರೆ.
೨೧	ಸಿದಯ್ಯಾ ಪುರಾಣಿಕ	:	ಶರಣ ಚರಿತ್ರಾಮೃತ.
೨೨	ಡಾ॥ ಸೋಮನಾಥ ಯಾಳವಾರ ಡಾ॥ ಪ್ರೇಮಾ ಸಿರ್ಶೆ	:	ಬೀದರ ಜಿಲ್ಲಾ ದರ್ಶನ ಪ್ರಸಾರಂಗ ಗುಲಬಾರ್ಗ, ವಿ.ವಿ. ೨೦೦೬.
೨೩	ಆರ್.ಸಿ. ಹೀರೆಮಠ	:	ಸಕಲ ಪುರಾತನರ ವಚನಗಳು.
೨೪	ಬಿ.ಡಿ.ಜತ್ತಿ (ಸಂ)	:	ಬಸವಣ್ಣನವರ ಸಮಕಾಲೀನರು ಬಸವಸಮಿತಿ ಬೆಂಗಳೂರು.
೨೫	ಅಮೃತ ಮಾಹಾದೇವ ಅಣ್ಣಗೆರೆ	:	ಕರ್ನಾಟಕದ ಸಾಂಸ್ಕೃತಿ ಸ್ಥಳಗಳು

೨೬	ಡಾ॥ ಮಲ್ಲಿಕಾರ್ಜುನ ಶಿವಪ್ಪಾ ಲಕ್ಕೆ :	ಶ್ರೀ ಮಾಣಿಕ ರತ್ನ, ಶ್ರೀ ಕೋತ್ತಲ ಬಸವೇಶ್ವರ ಶಿಕ್ಷಣ ಸಮೀತಿ ಸೇಡಂ.
೨೭	ರಾಗಿ ಶರಣಬಸಯ್ಯಾ :	ಶ್ರೀ ವೀರಭದ್ರ ದೇವರ ಚರಿತೆ
೨೮	ಡಾ॥ ಸೋಮನಾಥ ಯಾಳವಾರ :	ಶ್ರೀ ಮಾಣಿಕ ಪ್ರಭು, ಪ್ರಸರಂಗ ಗುಲಬರ್ಗಾ ವಿ.ವಿ.
೨೯	ದೇಶಾಂಶ ಹುಡಗಿ :	ದಿಂಗಬರ ಕರಿಬಸವೇಶ್ವರರು ಶ್ರೀ ಕೋತ್ತಲ ಬಸವೇಶ್ವರ ಶಿಕ್ಷಣ ಸಮೀತಿ ಸೇಡಂ –೨೦೦೬.
೩೦	ಡಾ॥ ಸೋಮನಾಥ ಯಾಳವಾರ :	ಕರಕನಳ್ಳಿ ಬಕ್ಕಪ್ರಭು ಶ್ರೀ ಕೋತ್ತಲ ಬಸವೇಶ್ವರ ಶಿಕ್ಷಣ ಸಮೀತಿ ಸೇಡಂ –೨೦೦೬.
೩೧	ಡಾ॥ ಬಿ.ಬಿ. ಪೂಜಾರಿ :	ವೀರಭದ್ರ ಶ್ರೀ ಕೋತ್ತಲ ಬಸವೇಶ್ವರ ಶಿಕ್ಷಣ ಸಮೀತಿ ಸೇಡಂ –೨೦೦೬.
೩೨	ಡಾ॥ ಸೋಮಾನಾಥ ಯಾಳವಾರ :	ಹುಮನಾಬಾದಿನ ಶ್ರೀ ವೀರಭದ್ರ ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ್ ಗುಲಬರ್ಗಾ –೨೦೦೬.
೩೩	ಹೆಚ್ ಕಾಶಿನಾಥ ರಡ್ಡಿ :	ಕಾಯಕ ವೀರ ಮೊಳಗೆ ಮಾರಯ್ಯ ಬಸವತೀರ್ಥ ಪ್ರಕಾಶನ್ –೩೦೦೪.
೩೪	ಡಾ॥ ವಿಜಯಶ್ರೀ :	ಮೋಳಗೆ ಮಾರಯ್ಯಾ ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ್ –೨೦೦೫.
೩೫	ಡಾ॥ ಸೋಮಾನಾಥ ಯಾಳವಾರ:	ಬೀದರ ಜಿಲ್ಲೆಯ ಶರಣ ಸ್ಮಾರಕಗಳು, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು –೨೦೦೬.
೩೬	ಶ್ರೀ ಷ.ಬ್ರ.ಗುರುಲಿಂಗ ಶಿವಾಚಾರ್ಯರು :	ಶ್ರೀ ಚಾಂಗಲೇರಾ ವೀರಭದ್ರೇಶ್ವರ ಪುರಣ ಚರಿತ್ರೆ.

೩೭	ಶ್ರಿ ಗುರುಲಿಂಗ್ ಶಿವಾಚಾರ್ಯರು	:	ಶ್ರೀಗುರು ಅಯ್ಯಪ್ಪಾ ಸ್ವಾಮಿ ಹೀರೆಮಠ ಚಿಟ್ಟಗುಪ್ಪಾ –೨೦೦೦.
೩೮	ಹೆಚ್ ಕಾಶಿನಾಥ ರಡ್ಡಿ	:	ಹುಮನಾಬಾದ ತಾಲೂಕಾ ಪರಿಚಯ
೩೯	ಡಾ॥ ಸೋಮನಾಥ ಯಾಳವಾರ	:	ಹುಮನಾಬಾದ ತಾಲೂಕಾ ದರ್ಶನ
೪೦	ಶ್ರೀ ಭೀಮರಾವ ಪಾಟೀಲ	:	ಲಾರ್ಡ್ ವೀರಭದ್ರೇಶ್ವರ.
೪೧	ಆರ್ ಎಂ. ಷಡಕ್ಷರಯ್ಯಾ	:	ಬೀದರ ಜಿಲ್ಲೆಯ ದೇವಿ ಶಿಲ್ಪಗಳು
೪೨		:	ಬೀದರ ಗೇಜೆಟಿಯರ: ಕರ್ನಾಟಕ ಸರ್ಕಾರ– ೧೯೭೫.



ಬೀದರ ಜಿಲ್ಲಾ ನಕ್ಷೆ



ಹುಮನಾಬಾದ ತಾಲ್ಲೂಕಾ ನಕ್ಷೆ